

ಸಂಪುಟ 23 ಸಂಚಿಕೆ 22-23
ಜೂನ್ 10, 2001 ಬೆಲೆ ರೂ. 3.00


ದುಡಿವ ಜನರ ಪ್ರಾಣಮಿತ್ರ



ಜಾಗತೀಕರಣಕ್ಕೆ ಸವಾಲೆಸೆದ ರೈತ-ಕೂಲಿಕಾರರು



ಸ್ವಾಗತಾರ್ಹ ಭಾರತ-ಪಾಕ್ ಮಾತುಕತೆ





ಅಮೇರಿಕೀಕರಣ - ಸಿಡಿದೆದ್ದ ಜನತೆ

ಅಧಿಕಾರಕ್ಕೆ ಮರಳಿದ ಇಂದಿರಾ

ಕೋಮುವಾದದ ಘಟಸರ್ಪ

1979ರ ಆರಂಭದಲ್ಲಿ ಕೋಮುವಾದದ ಘಟಸರ್ಪ ಹೆಡೆಯೆತ್ತಿತ್ತು. ಅಲಿಘಡ ಮತ್ತು ಜಮ್ಶೆಡ್‌ಪುರದಲ್ಲಿ ಭಾರಿ ಪ್ರಮಾಣದಲ್ಲಿ ಗಲಭೆಗಳು ನಡೆದವು. ಅವುಗಳನ್ನು ನಡೆಸುವುದರಲ್ಲಿ ಆರೆಸ್ಸೆಸ್ ಮಹತ್ವದ ಪಾತ್ರ ನಿರ್ವಹಿಸಿತು.

ಬಂಗಾಳ ಮತ್ತು ಕೇರಳದಲ್ಲಿ ಗೋಹತ್ಯೆ ವಿರೋಧಿಸಿ ಆಚಾರ್ಯ ವಿನೋಬಾ ಭಾವೆ ಇದ್ದಕ್ಕಿದ್ದಂತೆ ಪಾಟ್ನಾದಲ್ಲಿ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಕೋಮುವಾದದ ಕಿಚ್ಚನ್ನು ಹಚ್ಚಲಾಯಿತು.

ಏನೇ ಆದರೂ ನಮ್ಮ ಸರ್ಕಾರ ಬಹುಸಂಖ್ಯಾತರ ಆಹಾರ ಪದ್ಧತಿಯನ್ನು ಅಲ್ಪಸಂಖ್ಯಾತರ ಮೇಲೆ ಹೇರುವುದಿಲ್ಲ ಎಂದು



ಇಂದಿರಾಗಾಂಧಿ

ನಮ್ಮ ನಿಲುವನ್ನು ಸ್ಪಷ್ಟಪಡಿಸಿದೆವು. ಹಾಗೆ ಮಾಡುವುದರಿಂದ ನಾಗರಿಕರ ಮೂಲಭೂತ ಹಕ್ಕುಗಳ ಉಲ್ಲಂಘನೆ ಆಗುತ್ತದೆ. ಜನತಾಪಕ್ಷ ಮುಖಂಡ ಚಂದ್ರಶೇಖರ್, ಕೇರಳ ಮುಖ್ಯಮಂತ್ರಿ ಇ.ಕೆ.ನಾಯನಾರ್ ಹಾಗೂ ನಮ್ಮಲ್ಲಿ ಇನ್ನೂ ಅನೇಕ ಜನರು ಆಚಾರ್ಯರಿಗೆ ಮನವಿ ಮಾಡಿದೆವು.

ವಿನೋಬಾ ಭಾವೆಯುವರನ್ನು ಅವರ ಆಶ್ರಮದಲ್ಲಿ ನಾವು ಭೇಟಿ ಮಾಡಿದೆವು. ಹಾಗೂ ಸ್ವಾಮಿ ವಿವೇಕಾನಂದರ ಸಂದೇಶವನ್ನು ಅವರಿಗೆ ನೆನಪಿಸಿದೆವು. ಪರಿಸ್ಥಿತಿಯನ್ನು ನಿಯಂತ್ರಿಸುವಂತೆ ಮೊರಾರ್ಜಿ ದೇಸಾಯಿಗೂ ನಾವು ಮನವಿ ಮಾಡಿದೆವು. ಅಂತಿಮವಾಗಿ ಕೇಂದ್ರ ಸರ್ಕಾರ ಆಶ್ವಾಸನೆ ನೀಡಿದ ನಂತರ ಭಾವೆ ಉಪವಾಸ ಸತ್ಯಾಗ್ರಹ ಕೈಬಿಟ್ಟರು.

ಅದೇ ವರ್ಷ ಜೂನ್ 21 ರಂದು ನಾಡಿಯ ಜಿಲ್ಲೆಯ ಛಪ್ರಾ ಮತ್ತು ಕೊತ್ವಾಲಿ ಪೋಲೀಸ್ ಠಾಣೆ ವ್ಯಾಪ್ತಿಯ ಪ್ರದೇಶಗಳಲ್ಲಿ ಕೆಲವು ಕೋಮು ಘರ್ಷಣೆಗಳು ನಡೆದವು. ಸೌಹಾರ್ದಕ್ಕಾಗಿ ನಾವು ನಡೆಸಿದ ಪ್ರಚಾರಾಂದೋಲನ ಫಲ ನೀಡಿತು.

ಪಶ್ಚಿಮ ಬಂಗಾಳ ಮತ್ತು ತ್ರಿಪುರಾದ ಜಾತ್ಯಾತೀತ ಸ್ವರೂಪವನ್ನು ಹಾಳುಗೆಡವಲು ಸಂಚುಗಳನ್ನು ಹೂಡಲಾಗಿತ್ತು. ಅಸ್ಸಾಂನಲ್ಲಿ 1979 ರಲ್ಲಿ ನಡೆದ ತಥಾಕಥಿತ 'ಬಂಗಾಳಿಗಳನ್ನು ಹೊರಗಟ್ಟಿ' ಚಳುವಳಿ ಕೂಡ ಇಂಥ ಪಿತೂರಿಯ ಭಾಗವೇ ಆಗಿತ್ತು. ಸೂಕ್ಷ್ಮವಾದ ಈಶಾನ್ಯ ಭಾರತದಲ್ಲಿ ಅಶಾಂತಿ ಹಾಗೂ ಅಸ್ಥಿರತೆಯನ್ನು ಉಂಟು ಮಾಡುವುದು ಈ ಪಿತೂರಿಯ ಉದ್ದೇಶ.

ಅಸ್ಸಾಂ ಮತ್ತು ಮೇಘಾಲಯದಿಂದ ಬಂಗಾಳಿ ಹಿಂದೂಗಳು ಮತ್ತು ಮುಸ್ಲಿಮರು ಪ.ಬಂಗಾಳದ ಜಲಪಾಯ್‌ಗುರಿ ಹಾಗೂ ಕೂಚ್ ಬಿಹಾರ್‌ಗೆ ಸಾವಿರ ಸಾವಿರ ಸಂಖ್ಯೆಯಲ್ಲಿ ಬಂದರು. ಇವರನ್ನು 'ವಿದೇಶಿಯರು' ಎಂದು ಹೇಳಿ ಹೊಡೆದೋಡಿಸಲಾಗಿತ್ತು. ಕೇಂದ್ರ ಸರಕಾರದಲ್ಲಿ ಬಿಕ್ಕಟ್ಟು ಆರಂಭವಾಗಿತ್ತು. ಆದರೂ ಈ ಪರಿಸ್ಥಿತಿಯನ್ನು ನಿಭಾಯಿಸುವಂತೆ ಕೇಂದ್ರವನ್ನು ಕೋರುವುದು ಸೂಕ್ತ ಎಂದು ನಾವು ಭಾವಿಸಿದೆವು.

1980 ರ ಆರಂಭದಲ್ಲಿ ನಡೆದ ಮಧ್ಯಂತರ ಚುನಾವಣೆಯಲ್ಲಿ ಇಂದಿರಾಗಾಂಧಿ ಮತ್ತೆ ಅಧಿಕಾರಕ್ಕೆ ಬಂದರು. ಆಕೆ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಜನವರಿ 14 ರಂದು ನಿರಾಶ್ರಿತರ ಈ ವಿಚಾರವಾಗಿ ಒಂದು ಪತ್ರ ಬರೆದೆ: ಅವರೊಂದಿಗೆ ಮುಖತಃ ಮಾತನಾಡಲು ದೆಹಲಿಗೆ ಹೋದೆ. ಅಸ್ಸಾಂ ಪ್ರಶ್ನೆ ಒಂದು ಜ್ವಲಂತ ಸಮಸ್ಯೆಯಾಯಿತು. ಆದರೆ ಆ ಹೊತ್ತಿಗೆ ಪರಿಸ್ಥಿತಿ ಬದಲಾಗಿತ್ತು.

ಮರಳಿದ ವಿವೇಕ

ಕೇಂದ್ರದ ಪ್ರಪ್ರಥಮ ಕಾಂಗ್ರೆಸೇತರ ಸರಕಾರವಾಗಿ ಜನತಾಪಕ್ಷ ಸರಕಾರ ಅನೇಕ ಉತ್ತಮ ಕ್ರಮಗಳನ್ನು ಕೈಗೊಂಡಿತು. ತುರ್ತುಪರಿಸ್ಥಿತಿ ಅವಧಿಯಲ್ಲಿ ಜಾರಿಗೆ ಬಂದ ಕರಾಳ ಕಾನೂನುಗಳನ್ನು ಅದು ಅನುಷ್ಠಾನಕ್ಕೆ ತರಲಿಲ್ಲ. 1974 ರ ಮುಷ್ಕರದಲ್ಲಿ ಪಾಲ್ಗೊಂಡಿದ್ದಕ್ಕಾಗಿ ವಜಾ ಆಗಿದ್ದ ರೈಲ್ವೆ ನೌಕರರನ್ನು ಮತ್ತೆ ನೇಮಿಸಿಕೊಳ್ಳಲಾಯಿತು. ತುರ್ತುಪರಿಸ್ಥಿತಿ ಅವಧಿಯಲ್ಲಿ ನಡೆದ ದೌರ್ಜನ್ಯಗಳ ತನಿಖೆಗೆ ಷಾ ಆಯೋಗವನ್ನು ಜನತಾ ಆಡಳಿತದಲ್ಲಿ



ಚರಣ್‌ಸಿಂಗ್

ರಚಿಸಲಾಯಿತು. ಸಂಕ್ಷಿಪ್ತವಾಗಿ ಹೇಳುವುದಾದರೆ, ಹಿಂದಿನ ಕಾಂಗ್ರೆಸ್ ಸರಕಾರ ತನ್ನ ಕಾಲಡಿಗೆ ಹಾಕಿ ತುಳಿದಿದ್ದ ವಿವೇಕವನ್ನು ರಾಷ್ಟ್ರಕ್ಕೆ ಮರಳಿಸಿಕೊಟ್ಟಿತು.

ಕೇಂದ್ರ-ರಾಜ್ಯ ಸಂಬಂಧಗಳನ್ನು ಅದೇ ಮೊದಲ ಬಾರಿಗೆ ರಾಷ್ಟ್ರೀಯ ವಿಷಯವನ್ನಾಗಿ ಮಾಡುವಲ್ಲಿ ನಾವು ಯಶಸ್ವಿಯಾಗಿದ್ದು ಇದೇ ಅವಧಿಯಲ್ಲಿ. ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ಬೇಕು ಎಂಬ ನಮ್ಮ ಪಕ್ಷದ ನಿಲುವನ್ನು ನಾನಾ ವೇದಿಕೆಗಳಲ್ಲಿ ನಾನು ವ್ಯಕ್ತಪಡಿಸಿದೆ. ಈ ವಿಚಾರದಲ್ಲಿ ಜಮ್ಮು ಮತ್ತು ಕಾಶ್ಮೀರದ ಷೇಕ್ ಅಬ್ದುಲ್ಲಾ, ಪಂಜಾಬ್‌ನ ಪ್ರಕಾಶ್ ಸಿಂಗ್ ಬಾದಲ್ ಹಾಗೂ ತಮಿಳುನಾಡಿನ ಎಂ.ಜಿ.ರಾಮಚಂದ್ರನ್ ಗೆಳೆಯರಾದರು.

1977 ರ ಡಿಸೆಂಬರ್ ಏಳರಂದು ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಕೇಂದ್ರ-ರಾಜ್ಯ ಸಂಬಂಧಗಳಿಗೆ ಸಂಬಂಧಿಸಿದ ಒಂದು ದಸ್ತಾವೇಜನ್ನು ನಾವು ಅಂಗೀಕರಿಸಿದೆವು. ಅದರ ಪ್ರತಿಗಳನ್ನು ಕೇಂದ್ರ ಹಾಗೂ ಎಲ್ಲಾ ರಾಜ್ಯಗಳು ಹಾಗೂ ರಾಜಕೀಯ ಪಕ್ಷಗಳಿಗೆ ಕಳಿಸಿದೆವು. ಮರುವರ್ಷ, ಅಂದರೆ 1978 ರ ಮಾರ್ಚ್ 25 ರಂದು ಕೇಂದ್ರ-ರಾಜ್ಯ ಸಂಬಂಧಗಳ ಪುನರ್‌ವಿಮರ್ಶೆಗೆ ಆಗ್ರಹಿಸುವ ಗೊತ್ತುವಳಿಯನ್ನು ವಿಧಾನಸಭೆ ಅಂಗೀಕರಿಸಿತು.

ಬಡಜನರ ಕಲ್ಯಾಣಕ್ಕಾಗಿ ಜನತಾ ಸರ್ಕಾರ ಹಲವು ಕಾರ್ಯಕ್ರಮಗಳನ್ನು ಆರಂಭಿಸಿತು. ಎನ್‌ಆರ್‌ಇಪಿ(ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ) ಅದರಲ್ಲಿ ಅತ್ಯಂತ ಯಶಸ್ವಿಯಾದುದು. 'ಕೂಲಿಗಾಗಿ ಕಾಳು' ಕಾರ್ಯಕ್ರಮಗಳನ್ನು ನಾವು ತುಂಬಾ ಉತ್ಸಾಹದಿಂದ ಅನುಷ್ಠಾನಗೊಳಿಸಿದೆವು ಪಂಚಾಯತ್ ಕೆಲಸದೊಂದಿಗೆ ಐಆರ್‌ಡಿಪಿ ಹಾಗೂ ಆರ್‌ಎಲ್‌ಜಿಪಿಯಂಥ ಯೋಜನೆಗಳು ತುಂಬಾ ಪ್ರಯೋಜನಕಾರಿ ಎಂಬುದನ್ನು ನಾವು ಅರಿತೆವು.

ಕೈಗಾರಿಕೆಗೆ ಕೂಡ ಹೆಚ್ಚಿನ ಚಾಲನೆ ಸಿಕ್ಕಿತು. ಹಾಲ್ದಿಯಾ ಪೆಟ್ರೋ ಕೆಮಿಕಲ್ಸ್ ಮತ್ತು ಸಾಲ್ಟ್ ಲೇಕ್ ಎಲೆಕ್ಟ್ರಾನಿಕ್ಸ್ ಸಂಕೀರ್ಣ ಯೋಜನೆಗಳಿಗೆ ಅನುಮತಿ ನೀಡುವಂತೆ ನಾವು ಕೇಂದ್ರವನ್ನು ಕೋರಿದೆವು. ಜನತಾ ಅಧಿಕಾರದ ಅವಧಿಯಲ್ಲಿ ಹಾಲ್ದಿಯಾ ಯೋಜನೆ ಸಂಬಂಧ ನಮಗೆ ಉದ್ದೇಶ ಪತ್ರ ಬಂತು. ಆದರೆ ಈ ಎರಡು ಯೋಜನೆಗಳು ಇಂದಿರಾಗಾಂಧಿ ಮತ್ತು ಆಕೆಯ ಪುತ್ರ ರಾಜೀವ್ ಗಾಂಧಿಯ ಆಡಳಿತ ಅವಧಿಯಲ್ಲಿ ಬಹಳ ಸಂಕಷ್ಟ ಅನುಭವಿಸಿದವು.

ಮೊರಾರ್ಜಿ ಸರ್ಕಾರದ ಪತನ

ಜನತಾ ಸರಕಾರ ರಚನೆಯಾದ ಎರಡೇ ವರ್ಷಗಳಲ್ಲಿ ಅಲುಗಾಡತೊಡಗಿತು.

(ಮುಂದುವರಿಯುವುದು)

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರಾವಾಹಿ:

ಹಿಂದಿನ ಸಂಚಿಕೆಯಲ್ಲಿ ಎಡರಂಗ ಸರ್ಕಾರದ 21 ಅಂಶಗಳ ಕಾರ್ಯಕ್ರಮ. ಪಂಚಾಯತ್ ವ್ಯವಸ್ಥೆಗೆ ಪುನರ್ ರೂಪನೆ, 1978ರ ನೆರೆ ಹಾವಳಿ, ರಕ್ಷಣೆಯಲ್ಲಿ ಪಕ್ಷದ 6 ಸಂಗಾತಿಗಳ ಬಲಿದಾನ, 1700 ಕಾಂಗ್ರೆಸ್ ಮತ್ತು ನಕ್ಸಲೀಯ ರಾಜಕೀಯ ಖೈದಿಗಳ ಬಿಡುಗಡೆ. ತ್ರಿಪುರಾದಲ್ಲಿ ಎಡರಂಗದ ಜಯಭೇರಿ, ಇಂದಿರಾಗಾಂಧಿ ಉಚ್ಚಾಟನೆ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ 1979ರ ಕೋಮುಗಲಭೆಯಲ್ಲಿ ಆರ್.ಎಸ್.ಎಸ್.ನ ಪ್ರಮುಖ ಪಾತ್ರ ಆಚಾರ್ಯ ವಿನೋದಾ ಬಾವೆಯವರ ಉಪಹಾಸ ಸತ್ಯಾಗ್ರಹ ಅಂತ್ಯ. ಕೇಂದ್ರದ ಕಾಂಗ್ರೆಸೇತರ ಪ್ರಥಮ ಸರಕಾರದ ಜನಪ್ರಿಯ ಕಾರ್ಯಕ್ರಮ, ಮುರಾರ್ಜಿ ದೇಸಾಯಿ ಸರ್ಕಾರದ ಪತನ, 23 ದಿನಗಳ ಚರಣ್ ಸಿಂಗ್ ಸರ್ಕಾರವೂ ಪತನ ಹಾಗೂ ಮಧ್ಯಂತರ ಚುನಾವಣೆ ಘೋಷಣೆ ಈ ಬಗ್ಗೆ ಓದಿ.

ಜನರ ನಿರೀಕ್ಷೆಗಳಂತೆ ನಮ್ಮ ಆಡಳಿತ.........

ಪುಟ 10 ರಿಂದ

ಅದನ್ನು ಶೇ. 75 ರಷ್ಟಕ್ಕೆ ಏರಿಸುವುದು ನಮ್ಮ ಗುರಿ. ಕೇಂದ್ರ ಸರ್ಕಾರದ ಆಮದು ನೀತಿಗಳಿಂದ ರೈತರನ್ನು ರಕ್ಷಿಸಲು ಕ್ರಮವಹಿಸುತ್ತೇವೆ.

ಇತರೆ ರಾಜ್ಯಗಳಿಗಿಂತ ಭಿನ್ನವಾಗಿ ಶೇ. 70 ರಷ್ಟು ಜನತೆ ರಾಜ್ಯದ ಆರೋಗ್ಯ ಆಡಳಿತದಡಿ ಬರುತ್ತಾರೆ. ಪ್ರಸ್ತುತ ಸೇವೆಗಳನ್ನು ಅಭಿವೃದ್ಧಿ ಪಡಿಸುವ ಅವಶ್ಯಕತೆ ಇದೆ. ಅಭಿವೃದ್ಧಿಪಡಿಸಬೇಕಾದ ಇನ್ನೊಂದು ವಲಯವೆಂದರೆ ಶಿಕ್ಷಣ ಕ್ಷೇತ್ರ.

● ಪ್ರಚಾರದ ಸಮಯದಲ್ಲಿ ಕೇವಲ ಹೊಸ ಉತ್ತಮಗೊಂಡ ಎಡ ಪರ್ಯಾಯ ಮಾತ್ರವೇ ಪರ್ಯಾಯವಾಗಲಿದೆ ಎಂದಿರುವಿರಿ. ಅದರ ಅರ್ಥವೇನು?

ಅದರ ಅರ್ಥ ಕಳೆದ 24 ವರ್ಷಗಳಿಂದ ಕಾರ್ಯಗತದಲ್ಲಿದ್ದ ಎಡರಂಗ ಸರ್ಕಾರದ ರಾಜಕೀಯ ತತ್ವ ಅಥವ ಸಿದ್ಧಾಂತದಿಂದ ಹೊರತುಪಡಿಸಿದ್ದಲ್ಲ. ಆದರೂ ಕೆಲವು ಸಮಸ್ಯೆಗಳಿದ್ದವು. ಎಡರಂಗ ಸರ್ಕಾರದಡಿ ಕೆಲಸ ಮಾಡಬೇಕಾದ ರೀತಿಯಲ್ಲಿ ನೌಕರಶಾಹಿ ಕಾರ್ಯನಿರ್ವಹಿಸುತ್ತಿಲ್ಲ. ಹಾಗಾಗಿಯೇ ಆಡಳಿತವನ್ನು ಭ್ರಷ್ಟಾಚಾರ ರಹಿತ ಕ್ರಿಯಾಶೀಲ ಮತ್ತು ಜನತೆಯ ಆಶಯಕ್ಕೆ ಸ್ಪಂದಿಸುವಂತೆ ಮಾಡುವುದು ನನ್ನ ಉದ್ದೇಶ. ಕಳೆದ 4 ತಿಂಗಳಿಂದ ನಾನು ಶ್ರಮ ಸಂಸ್ಕೃತಿಯನ್ನು ಸುಧಾರಿಸುವ ಅಗತ್ಯಕ್ಕೆ ಒತ್ತು ನೀಡಿದ್ದೇನೆ. ಈ ಹಿನ್ನೆಲೆಯಲ್ಲಿ ಹೊಸ ಉತ್ತಮ ಎಡ ಘೋಷಣೆಯನ್ನು ಮನಗಾಣಬೇಕು.

● ಮಾಧ್ಯಮದ ಬಹುಭಾಗ ಎಡರಂಗದ ವಿಜಯುವನ್ನು ಮತದಾರರ ಮೇಲೆ ನಿಮ್ಮ ವ್ಯಕ್ತಿತ್ವದ ಪ್ರಭಾವ ಎನ್ನುತ್ತಿದ್ದಾರೆ, ಎಷ್ಟರ ಮಟ್ಟಿಗೆ ಅದ ಸರಿ?

ಇದು ಪೂರ್ಣವಾಗಿ ತಪ್ಪು. ನಾನು ಬಹಳದಿನದಿಂದ ಹೇಳುತ್ತಿದ್ದೇನೆ. ಇಲ್ಲಿ 'ನಾನು' ಅಲ್ಲ; 'ನಾವು' ಎಂದು. ನಮ್ಮಲ್ಲಿ "ಸಾಮೂಹಿಕವಾಗಿ ಪ್ರಚಾರ" ನಡೆಸಿದ "ಸಾಮೂಹಿಕ ನಾಯಕತ್ವ" ಇದೆ. ಮಾಧ್ಯಮ ಯಾವತ್ತೂ ವ್ಯಕ್ತಿಗಳನ್ನು ಬಿಂಬಿಸಿ ನಾವು ಅನುಸರಿಸಿದ ನೀತಿಗಳನ್ನು ಕಡೆಗಾಣಿಸಬಯಸುತ್ತವೆ.

● ಕೇಂದ್ರ ಸರ್ಕಾರಕ್ಕೆ ಸಂಬಂದಿಸಿದಂತೆ ನಿಮ್ಮ ನಿಲುವೇನಾಗಲಿದೆ?

ಕೇಂದ್ರ ಸರ್ಕಾರದೊಂದಿಗೆ ದೈನಂದಿನ ಕೆಲಸ ಕಾರ್ಯಸಂಬಂಧ ಇರಿಸಿಕೊಳ್ಳಲಿದ್ದೇವೆ. ಸಂಘರ್ಷಕ್ಕಿಳಿಯುವುದು ನಮ್ಮ ಉದ್ದೇಶವಲ್ಲ. ಅದೇ ಸಮಯದಲಿ ಅಯೋಧ್ಯೆ ಅಥವ ಆರ್ಥಿಕ ನೀತಿಗಳಂತಹ ತಾತ್ವಿಕ ವಿಚಾರಗಳಲ್ಲಿ ರಾಜಿ ಪ್ರಶ್ನೆ ಇಲ್ಲ. ಬಂಗಾಳ ಕುರಿತು ನಡೆಸಲಾಗುತ್ತಿರುವ ತಾರತಮ್ಯ ಉದಾಹರಣೆಗೆ ಪ್ರವಾಹ ಪರಿಹಾರ ವಿಷಯದಂತಹ ವಿಷಯಗಳನ್ನು ಕೈಗೆತ್ತಿಕೊಳ್ಳುತ್ತೇವೆ.

● ಅಂತಿಮವಾಗಿ ಎಡರಂಗದ ಜಯಭೇರಿಯ ಪರಿಣಾಮವನ್ನು ರಾಷ್ಟ್ರ ರಾಜಕಾರಣದ ಮೇಲೆ ಹೇಗೆ ನೀವು ಪರಿಗಣಿಸುತ್ತೀರಿ?

ಈ ವಿಜಯವು ತೃತೀಯ ಪರ್ಯಾಯ ರೂಪಿಸುವ ನಮ್ಮ ಪ್ರಯತ್ನವನ್ನು ಉತ್ತೇಜಿಸುತ್ತದೆ. ಈಗಾಗಲೇ ಆ ನಿಟ್ಟಿನಲ್ಲಿ ಪ್ರಯತ್ನಗಳ ತೀವ್ರಗತಿಯಲ್ಲಿ ನಡೆದಿವೆ. ಕೆಲವೇ ದಿನಗಳಲ್ಲಿ ಲೋಕ ಮೋರ್ಚಾವನ್ನು ಹೊಸ ಶಕ್ತಿಗಳು ಸೇರಲಿವೆ. ಈ ಸಂದರ್ಭದಲ್ಲಿ ಕೇರಳದಲ್ಲಿ ಎಲ್.ಡಿ.ಎಫ್ ಸೋಲು ಒಂದು ದುರಾದೃಷ್ಟ. ಪಂಚಾಯತ್ ರಾಜ್ ವ್ಯವಸ್ಥೆ, ಜನರೂಪಿತ ಯೋಜನೆ, ಸಾರ್ವಜನಿಕ ವಿತರಣಾ ವ್ಯವಸ್ಥೆಯಂತಹ ಮಹತ್ತರ ಸಾಧನೆಯ ನಡುವೆಯು ಸಮಯ ಸಾಧಕ ಕೋಮುವಾದಿ - ಜಾತಿವಾದಿ ಶಕ್ತಿಗಳ ಹೊಂದಾಣಿಕೆಯ ಫಲಶೃತಿಯಾಗಿ ಎಲ್.ಡಿ.ಎಫ್. ಕೇರಳದಲ್ಲಿ ಸೋಲನುಭವಿಸಬೇಕಾಯಿತು. ಕೇರಳ ಮತ್ತು ಪಶ್ಚಿಮ ಬಂಗಾಳ ದೆರಡರಲ್ಲೂ ತನ್ನೆಲ್ಲಾ ಪ್ರಯತ್ನಗಳ ನಂತರವೂ ಬಿಜೆಪಿ ಶೂನ್ಯಕ್ಕೆ ಸಂತೃಪ್ತಿ ಪಡಬೇಕಾದದ್ದು ಒಂದು ತೃಪ್ತಿಕರ ಅಂಶ.

ತಿದ್ದುಪಡಿ

ಕಳೆದ ಸಂಚಿಕೆಯಲ್ಲಿನ ಎನ್.ಕೆ. ಉಪಾಧ್ಯಾಯರ ರೈಲ್ವೆ ಅಭಿವೃದ್ಧಿ ರಚಿಸುತ್ತಿರುವ ಸರ್ಕಾರಿ ಲೇಖನದಲ್ಲಿ ಬಳ್ಳಾರಿ ರಾಯದುರ್ಗ 90 ಕಿ.ಮೀ. ಬದಲಾಗಿ 300 ಕಿ.ಮೀ ಎಂದು ಗದಗ-ಬಿಜಾಪುರ 200ರ ಬದಲು 100 ಕಿ.ಮೀ ಎಂದು ಪ್ರಕಟವಾಗಿದೆ.

ಬಿಜಾಪುರ-ಸೋಲಾಪುರ ನಡುವಿನ ಪ್ಯಾಸಂಜರ್ ಗಾಡಿಯಿಂದ ಪ್ರತಿದಿನ ಒಂದು ಲಕ್ಷಕ್ಕೂ ಹೆಚ್ಚು ಉತ್ಪನ್ನ, ಗೂಡ್ಸ್ ಗಾಡಿಯಿಂದಾಗಿ ಕೋಟ್ಯಾವರಿ ರೂಪಾಯಿ ಲಾಭವಾಗುತ್ತಿದೆ ಎಂದು ರೈಲ್ವೆ ಅಧಿಕಾರಿಗಳು ಹೇಳುತ್ತಿದ್ದಾರೆ ಎಂದು ಇರಬೇಕಾಗಿತ್ತು. ಲಾಭವಾಗುತ್ತಿಲ್ಲವೆಂದು ಹೇಳಿದ್ದಾರೆಂದು ಮುದ್ರಣವಾಗಿದೆ ಇದಕ್ಕಾಗಿ ವಿಷಾದಿಸುತ್ತೇವೆ.

ಸಂಪಾದಕರು.

ಕರ್ನಾಟಕ ಈ ವಾರ·ಒಂದು ನೋಟ

ಕೃಷ್ಣಾ ನೀರು: ಸುಪ್ರೀಂ ಕೋರ್ಟ್ ತೀರ್ಪು ಉಲ್ಲಂಘಿಸಿದ ಆಂಧ್ರ

ಎಸ್.ವೈ. ಗುರುಶಾಂತ್

ಆಂಧ್ರಪ್ರದೇಶ ಮತ್ತು ಕರ್ನಾಟಕಗಳ ನಡುವೆ ಹಲವಾರು ವರುಷಗಳಿಂದ ಇತ್ಯರ್ಥವಾಗದೇ ಇದ್ದ ಕೃಷ್ಣನದಿ ನೀರಿನ ಹಂಚಿಕೆ ವಿವಾದಕ್ಕೆ ಸುಪ್ರೀಂಕೋರ್ಟ್ ಸ್ಪಷ್ಟ ತೀರ್ಪು ನೀಡುವ ಮೂಲಕ ಒಂದು ಹಂತದಲ್ಲಿ ಇತ್ಯರ್ಥ ನೀಡಿತು. ಬಚಾವತ್ ಅವಾರ್ಡಿನ ತೀರ್ಪಿನಂತೆ ಕರ್ನಾಟಕವು ತನ್ನ ಪಾಲಿನ 724 ಟಿ.ಎಂ.ಸಿ. ನೀರನ್ನು ಉಪಯೋಗಿಸಲು ಸಾಧ್ಯವಾಗುವುದೇ ಆಲಮಟ್ಟಿ ಆಣೆಕಟ್ಟಿನ ಎತ್ತರವನ್ನು 519 ಮೀಟರ್ ಎತ್ತರಿಸಿದಾಗ, ಇದನ್ನು ಸುಪ್ರೀಂಕೋರ್ಟ್ ದೃಢೀಕರಿಸಿತಲ್ಲದೇ ವಿದ್ಯುತ್ ಉತ್ಪಾದನೆಗಾಗಿ ಇನ್ನೂ 5 ಟಿಎಂಸಿ ನೀರು(ಇದು ಕೃಷಿ ಬಳಕೆಗಲ್ಲ) ಬಳಸಲು ಅಂದರೆ ಆಣೆಕಟ್ಟಿನ ಎತ್ತರವನ್ನು 524 ಮೀ. ಗಳಿಗೆ ಎತ್ತರಿಸುವ ಕರ್ನಾಟಕದ ಯೋಜನೆಯನ್ನು ಹೊಸ ನ್ಯಾಯ ಮಂಡಳಿ ಪರಿಧಿಗೆ ಒಪ್ಪಿಸುವುದು. ಬಹಳ ಮುಖ್ಯವಾಗಿ ಮೂರನೇ ಅಂಶ. ಹೆಚ್ಚುವರಿ ನೀರು ಅವಲಂಬಿಸಿ, ಹೊಸ ಯೋಜನೆ ಜಾರಿಗೊಳಿಸದಂತೆ ಆಂಧ್ರಕ್ಕೆ ನಿರ್ಬಂಧ ವಿಧಿಸಲಾಗಿದೆ. ಈ ಅಂಶಗಳೂ ಮತ್ತೆ ಪರಸ್ಪರರಲ್ಲಿ ಇತ್ಯರ್ಥ ಆದ ಬಳಿಕವೇ ಯೋಜನೆಗಳ ಜಾರಿಯತ್ತ ಮುಂದುವರಿಯಬೇಕಿದೆ.

ಆದರೆ ಆಂಧ್ರ ಪ್ರದೇಶ ಇವಾವುಗಳನ್ನು ಲೆಕ್ಕಿಸದೆ ಸುಪ್ರೀಂ ಕೋರ್ಟ್‌ನ ನಿರ್ದೇಶನವನ್ನು ಉಲ್ಲಂಘಿಸಿ ತೆಲುಗು ಗಂಗಾ, ಶ್ರೀ ಶೈಲಂ ಬಲದಂಡೆ ಹಾಗೂ ಎಡದಂಡೆ ಮತ್ತು ಕಾಲುವೆಗಳು ಇತರೆ ಎರಡು ಬೃಹತ್ ನೀರಾವರಿ ಯೋಜನೆಗಳನ್ನು ಅಕ್ರಮವಾಗಿ ನಿರ್ಮಿಸುತ್ತಿದೆ. ಈ ಕ್ರಮವು ಎರಡು ರಾಜ್ಯಗಳ ನಡುವಿನ ವಿವಾದವು ಸೌಹಾರ್ದಯುತವಾಗಿ ಇತ್ಯರ್ಥಗೊಳಿಸದಂತೆ ಜಟಿಲಗೊಳಿಸಿ, ಸಮಸ್ಯೆ ಉಲ್ಬಣವಾಗುವಂತೆ ಸಂಘರ್ಷ ಹುಟ್ಟು ಹಾಕುವ ಹೆಜ್ಜೆಯನ್ನು ಇರಿಸುತ್ತಿದೆ. ಆಂಧ್ರ ಪ್ರದೇಶದ ಚಂದ್ರಬಾಬು ನಾಯ್ಡು ಸರ್ಕಾರದ ಈ ಪ್ರಚೋದನಾತ್ಮಕ ಹಾಗೂ ಸುಪ್ರೀಂ ಕೋರ್ಟ್‌ನ ತೀರ್ಪನ್ನು ಉಲ್ಲಂಘಿಸುತ್ತಿರುವುದನ್ನು ಕರ್ನಾಟಕ ಸರ್ಕಾರವು ಕೇಂದ್ರದ ವಾಜಪೇಯಿ ಸರ್ಕಾರದ ಗಮನಕ್ಕೆ ತಂದು, ಸೂಕ್ತ ಕ್ರಮವಹಿಸಲು ಕೋರಿದೆ. ಸುಪ್ರೀಂ ಕೋರ್ಟ್ ಸಹ ಈ ಹಂತದ ಪ್ರಶ್ನೆಗಳನ್ನು ಇತ್ಯರ್ಥಪಡಿಸಲು ಕೇಂದ್ರ ಸರ್ಕಾರವು ಕ್ರಮವಹಿಸಬೇಕೆಂದು ಸ್ಪಷ್ಟವಾಗಿ ಸೂಚಿಸಿದೆ.

ಕೇಂದ್ರದ ಪಕ್ಷಪಾತ ನಿಲುವು

ಈ ಪ್ರಶ್ನೆ ಕೇಂದ್ರ ಸರ್ಕಾರದ ಗಮನಕ್ಕೆ ತಂದರೂ ಅದು ಏನೊಂದೂ ಕ್ರಮವನ್ನು ವಹಿಸಲಿಲ್ಲ. ಈ ನಿರ್ಲಕ್ಷತನದ ದುರುದ್ದೇಶವೇ ಆಂಧ್ರದ ನಾಯ್ಡುಗೆ ಸಮ್ಮತಿ ಸೂಚಿಸುವಂತಹದ್ದು. ನಿಷ್ಪಕ್ಷಪಾತವಾಗಿ ವರ್ತಿಸಿ, ಉಭಯ ರಾಜ್ಯಗಳ ನಡುವಿನ ಸಮಸ್ಯೆ ಇತ್ಯರ್ಥಪಡಿಸಿ, ಜನತೆಗೆ ನ್ಯಾಯ ಒದಗಿಸುವ ಮಹತ್ತರ ಹೊಣೆ ಇರುವ ಕೇಂದ್ರ ಸರ್ಕಾರ, ಆದರ ಪ್ರಧಾನಿ ವಾಜಪೇಯಿ, ತಮಗೆ ಬೆಂಬಲಿಸಿದವರ ಸರ್ಕಾರದ ಭಾಗೀದಾರರು ಎಂಬ ಒಂದೇ ಸಂಕುಚಿತ ಕಾರಣಕ್ಕಾಗಿ ದೇಶದ ಸಮಗ್ರತೆಗೂ ಧೋಕ ತರಬಲ್ಲ ಹಂತಕ್ಕೆ ಇಳಿದಿದ್ದಾರೆ ಎಂಬುದು ಅಪಾಯಕಾರಿ. ಅಧಿಕಾರದಲ್ಲಿ ಉಳಿದುಕೊಳ್ಳಲು ಯಾವುದೇ ಮಟ್ಟಕ್ಕೂ ಹೋಗಬಲ್ಲರು ಎಂದು ಈ 'ತತ್ವನಿಷ್ಠರು' ತೋರಿಸಿಬಿಟ್ಟಿದ್ದಾರೆ.

ಫೀಡರ್ ಛಾನೆಲ್

ಆಂಧ್ರ ಪ್ರದೇಶದ ಈ ಉಲ್ಲಂಘನೆ ಹಾಗೂ ಉದ್ಧಟತನಗಳು ಕೃಷ್ಣನದಿ ನೀರಿಗೆ ಮಾತ್ರ ಸೀಮಿತವಾಗಿಲ್ಲ. ಆಂಧ್ರ-ಕರ್ನಾಟಕ ಗಡಿ ಭಾಗವಾಗಿರುವ ತುಮಕೂರಿನ ಮಧುಗಿರಿ-ಶಿರಾದ ಬಳಿ ಫೀಡರ್ ಕಾಲುವೆಗಳನ್ನು ನಿರ್ಮಾಣ ಮಾಡಿ ಮತ್ತೊಂದು ಆಸ್ಫೋಟಕ ಸನ್ನಿವೇಶ ಸೃಷ್ಟಿಸಿದೆ. ಇದರಿಂದ ಕರ್ನಾಟಕದ ಕೆರೆಗಳಿಗೆ ಹರಿಯುತ್ತಿದ್ದ ಮಳೆ ನೀರು ಅತ್ತ ಸೋರಲಿದ್ದು, ತೀವ್ರ ನೀರಿನ ಸಮಸ್ಯೆ ಎದುರಿಸಬೇಕಾಗುವುದೆಂಬ ಆತಂಕ ಈ ಭಾಗದ ರೈತರ ನಡುವೆ ಉಂಟಾಗಿದೆ. ಗಡಿ ಭಾಗದ ಯಾವುದೇ ಕಾಮಗಾರಿ ಕೈಗೆತ್ತಿಕೊಳ್ಳುವಾಗ ಎರಡೂ ಸರ್ಕಾರಗಳು ಪರಸ್ಪರ ಚರ್ಚಿಸಿ, ಮುಂದುವರಿಯಬೇಕೆಂಬ ಕನಿಷ್ಟ ನಿಯಮವನ್ನು ಆಂಧ್ರವು ಧಿಕ್ಕರಿಸಿದೆ.

ಕೇಂದ್ರದೊಂದಿಗೆ ಮುಖಾಮುಖಿಯಾಗದ ಮುಖ್ಯಮಂತ್ರಿ

ಇತ್ತ ಕರ್ನಾಟಕ ಸರ್ಕಾರವು ಈಗ ಉದ್ಭವಿಸಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸರ್ವಪಕ್ಷಗಳ ಸಭೆಯನ್ನು ಕರೆದಿತ್ತು. ಆಂಧ್ರದ ಈ ಉಲ್ಲಂಘನೆಗಳ ವಿರುದ್ಧ ಸುಪ್ರಿಂ ಕೋರ್ಟಿನಲ್ಲಿ ಮೊಕದ್ದಮೆ ಹೂಡುವುದಾಗಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಪ್ರಕಟಿಸಿದ್ದಾರೆ. ಈ ವಿಷಯದಲ್ಲಿ ಕೋರ್ಟ್‌ಗೆ ಮೊರೆಹೋಗುವುದು ತಪ್ಪೇನಲ್ಲ. ಆದರೆ ಇಡೀ ಸಮಸ್ಯೆ ಜಟಿಲವಾಗುತ್ತಿರುವುದನ್ನು 'ರಾಜಕೀಯ'ವಾಗಿ ಎದುರಿಸಲು ಮುಖ್ಯಮಂತ್ರಿಗಳು ಸಿದ್ದರಿಲ್ಲ. ಅಂದರೆ ಮಧ್ಯಸ್ಥಿಕೆ ವಹಿಸಬೇಕಾಗಿರುವ ಎನ್‌ಡಿಎ ಕೇಂದ್ರ ಸರ್ಕಾರದ ಪಕ್ಷಪಾತದ ವರ್ತನೆಯನ್ನು ರಾಜಕೀಯವಾಗಿ ಬಯಲಿಗೆಳೆಯಬೇಕಿತ್ತು. ಆ ಮೂಲಕ ಮಾತ್ರ ಹೆಚ್ಚಿನ ಪ್ರಯೋಜನ ಸಾಧ್ಯವಿದೆ. ಆದರ ಕೃಷ್ಣರವರಿಗೆ ವಾಜಪೇಯಿ ಸರ್ಕಾರದೊಂದಿಗೆ ಇದನ್ನು ರಾಜಕೀಯವಾಗಿ ಎದುರಿಸುವುದು ಬೇಕಿಲ್ಲ. ಇಬ್ಬರೂ ಉದಾರೀಕರಣದ ಆರ್ಥಿಕ ನೀತಿಗಳ ಆರಾಧಕರೇ. ಆದ್ದರಿಂದ ಸಂಬಂಧಗಳು ಮೆದುವಾಗಿ ಚಲಿಸಬೇಕೆಂಬ ಶರಣಾಗತಿಯ ಹೊಂದಾಣಿಕೆ ಮನೋಭಾವ ತಳೆದಿರುವುದರಿಂದ ಕೋರ್ಟ್‌ಗೆ ಮೊರೆ ಹೋಗುವ ಸರಳ ಮಾರ್ಗ ಅನುಸರಿಸಿದ್ದಾರೆ.

ಗೊಂದಲದಲ್ಲಿ ರಾಜ್ಯ ಸರ್ಕಾರ

ಇನ್ನು ಮಧುಗಿರಿ-ಶಿರಾ ಪ್ರದೇಶದ ಫೀಡರ್ ಚಾನೆಲ್ ಬಗ್ಗೆ ಆಂಧ್ರ ಸರ್ಕಾರದ ಸಚಿವರು ಸಂಪರ್ಕಿಸಿ, ಕೆಲಸ ನಿಲ್ಲಿಸಿರುವುದರಿಂದ ಆ ಬಗ್ಗೆ ನ್ಯಾಯಾಲಯಕ್ಕೆ ಹೋಗುವುದಿಲ್ಲವೆಂದು ನೀರಾವರಿ ಸಚಿವ ಹೆಚ್.ಕೆ.ಪಾಟೀಲರು ಹೇಳಿದ್ದಾರೆ. ಆದರೆ ಪತ್ರಿಕೆಗಳೂ ಮತ್ತು ತಹಶೀಲ್ದಾರ್ ಒಳಗೊಂಡು ಹಲವು ಅಧಿಕಾರಿಗಳು ಕಾಲುವೆ ನಿರ್ಮಾಣ ನಡದೇ ಇದೆಯೆಂದು ವರದಿ ಮಾಡಿದ್ದಾರೆ.

ಗಂಭೀರವಾದ ಇನ್ನೊಂದು ಸಂಗತಿಯೆಂದರೆ ಕಳೆದ 11 ವರ್ಷಗಳಿಂದ ಹಂತಹಂತವಾಗಿ ಆಂಧ್ರದಲ್ಲಿ ನಿರ್ಮಾಣಗೊಳ್ಳುತ್ತಾ ಬರಲಾಗಿದೆ ಎಂಬುದು. ಇದು ನಮ್ಮ ಸರ್ಕಾರಗಳ ನಿರ್ಲಕ್ಷತನವನ್ನು ಎತ್ತಿತೋರಿಸುತ್ತದೆ.

ಈಗಲಾದರೂ ಸರ್ಕಾರ ಸೂಕ್ತವಾಗಿ ಕ್ರಮ ವಹಿಸಲು ಮುಂದಾಗಬೇಕು. ಇಲ್ಲವಾದಲ್ಲಿ ಉಭಯ ರಾಜ್ಯಗಳ ರೈತರ ನಡುವೆ ಅನಗತ್ಯವಾದ ಸಂಘರ್ಷ ಆಸ್ಫೋಟಗೊಳ್ಳಬಹುದು.



ಸರ್ವ ಪಕ್ಷಗಳ ಸಭೆ

ಪೇಮೆಂಟ್ ಸೀಟ್: ಜನಸಾಮಾನ್ಯರಿಗೆ ಶಿಕ್ಷಣದಿಂದ ವಂಚನೆ

ಕುವೆಂಪು ವಿಶ್ವವಿದ್ಯಾಲಯದಲ್ಲಿ ಜ್ಯೋತಿಷ್ಯ ಶಾಸ್ತ್ರವನ್ನು ಕಲಿಸಲು ಬಯಸಿದ್ದರೆ, ಬೆಂಗಳೂರು ವಿಶ್ವವಿದ್ಯಾಲಯ ಶಿಕ್ಷಣದ ನಿರ್ಲಜ್ಜ ವ್ಯಾಪಾರಕ್ಕೆ ನಿರ್ಧರಿಸಿದೆ. ತನ್ನಲ್ಲಿರುವ ಸ್ನಾತಕೋತ್ತರ ಪದವಿ ತರಗತಿಗಳಲ್ಲಿ ಶೇ 20 ರಷ್ಟು ಸೀಟುಗಳನ್ನು ಈ ಶೈಕ್ಷಣಿಕ ವರುಷದಲ್ಲಿ ಪೇಮೆಂಟ್ ಸೀಟ್‌ಗಳಾಗಿ ನೀಡಲು ನಿರ್ಧರಿಸಿದೆ.

ಇತ್ತೀಚೆಗೆ ಅಕಾಡೆಮಿಕ್ ಕೌನ್ಸಿಲ್ ಸಭೆ ನಡೆಯಿತು. ಅದರಲ್ಲಿ ಎಂ.ಸಿ.ಎ ಕೋರ್ಸ್‌ಗೆ 70,000, ಎಂಬಿಎ ಕೋರ್ಸ್‌ಗೆ 60,000, ಎಂ.ಎಸ್ಸಿ, ಬಯೋ ಕೆಮಿಸ್ಟ್ರಿ ಮತ್ತು ಕಂಪ್ಯೂಟರ್ಸ್‌ಗೆ ರೂ. 35,000 ವಿಜ್ಞಾನಕ್ಕೆ 30,000, ಆರ್ಟ್ಸ್ ರೂ. 25,000 ಹೀಗೆ ಎಲ್ಲಾ ಕೋರ್ಸ್‌ಗಳನ್ನು ವ್ಯಾಪಾರಕ್ಕೆ ತೆರೆದಿಡಲಾಗಿದೆ.

ಈಗಿರುವ ಶಿಕ್ಷಣ ಶುಲ್ಕಗಳನ್ನು ಭರಿಸುವುದೇ ದುಸ್ತರ. ಬಡ ಮಧ್ಯಮ-ವರ್ಗ ವಿದ್ಯಾರ್ಥಿಗಳು ಶುಲ್ಕಗಳನ್ನು ತುಂಬಲಾಗದೇ ಓದಿಗೆ ಶರಣು ಹೊಡೆಯುತ್ತಿದ್ದಾರೆ. ವಿ.ವಿ. ಅಕಾಡೆಮಿಕ್ ಕೌನ್ಸಿಲ್‌ನ ಈ ತೀರ್ಮಾನ ಶಿಕ್ಷಣವನ್ನು ಹಣವುಳ್ಳವರ ಸ್ವತ್ತಾಗಿಸುವಂತಹದ್ದು.

ಇದಕ್ಕೆ ಅವರು ಕೊಡುವ ಸರಳ ಉತ್ತರವೆಂದರೆ ವಿಶ್ವವಿದ್ಯಾಲಯದ ಧನ ಸಹಾಯ ಆಯೋಗವು (ಯುಜಿಸಿ) ಹಣ ನೀಡಿಕೆಯನ್ನು ಕಡಿತಗೊಳಿಸಿದೆ ಎಂಬುದು. ಅಲ್ಲದೇ ಶಿಕ್ಷಣವು ಹಣ ನೀಡಿದವರಿಗೆ, ಅವರ ಖರ್ಚಿನಲ್ಲೇ ಎಂಬ ಉದಾರೀಕರಣದ ಸೂತ್ರ ಅನುಸರಿಸುತ್ತಿರುವುದು, ಇದು ಕೇಂದ್ರ ಸರ್ಕಾರದ ನೀತಿ, ಅದನ್ನೇ ನಮ್ಮ ರಾಜ್ಯ ಸರ್ಕಾರವೂ ಅನುಸರಿಸುತ್ತಿದೆ. ಅಂತಿಮವಾಗಿ ಶಿಕ್ಷಣದ ಪೂರ್ಣ ಹೊರೆಯನ್ನು ವಿದ್ಯಾರ್ಥಿಗಳ ಮೇಲೆ ಹೇರಿ ಸಾಮಾನ್ಯರನ್ನು ಶಿಕ್ಷಣದಿಂದ ವಂಚಿಸಿ ದೂರ ಓಡಿಸುವುದು. ಇದು ಶಿಕ್ಷಣ ವಿರೋಧಿ, ವಿದ್ಯಾರ್ಥಿ ವಿರೋಧಿ ನೀತಿ. ಈ ಪಿತೂರಿಯನ್ನು ಪ್ರತಿಭಟಿಸಬೇಕು.

ಶಾಲಾ-ಕಾಲೇಜುಗಳಿಗೆ ಪ್ರವೇಶಾವಕಾಶದ ಅವಾಂತರ

ಕಣ್ಮುಚ್ಚಿ ಕುಳಿತಿರುವ ನಿಷ್ಕ್ರಿಯ ಸರ್ಕಾರ


ಈಗ ಎಲ್ಲೆಲ್ಲೂ ಶಾಲೆಗಳಿಗೆ ಮಕ್ಕಳನ್ನು ಸೇರಿಸಲು ಪರದಾಟ. ಯು.ಕೆ.ಜಿ. ಯಿಂದ ಪಿ.ಜಿ.ಯವರೆಗೂ ಹಣವಿದ್ದರೆ ಅವಕಾಶ. ನಾಲ್ಕಾರು ಶಾಲೆ, ಕಾಲೇಜುಗಳಿಗೆ ಅರ್ಜಿ ಹಾಕಿ ಅಲ್ಲಿ ಸಿಕ್ಕಿತೇ, ಇಲ್ಲಿ ಸಿಕ್ಕಿತೇ ಎಂಬ ಆತಂಕ, ಬಹಳಷ್ಟು ಶಾಲೆ-ಕಾಲೇಜುಗಳಲ್ಲಿ ಅಂಕಗಳಿಕೆಯ ಮೆರಿಟ್ ಮೇಲೆ ಪ್ರವೇಶಾವಕಾಶ ಎನ್ನುತ್ತವೆ. ಇಂತಹ ಕಾಲೇಜುಗಳಲ್ಲೇ ಓದಬೇಕೆಂಬ ಹಂಬಲ - ಅತೀ ಮೇಧಾವಿಗಳಿಗೇ ಮಾತ್ರವೇ ನಮ್ಮ ಕಾಲೇಜ್‌ನಲ್ಲಿ ಸೀಟ್ ಎನ್ನುತ್ತವೆ ಆಡಳಿತ ಮಂಡಳಿಗಳು. ಆರಂಭದಲ್ಲಿ ಒಂದಿಷ್ಟು ಸೀಟ್‌ಗಳು ಮೆರಿಟ್ ಆಧಾರದಲ್ಲಿ ಪ್ರಕಟವಾಗುತ್ತವೆ. ನಂತರ, ಮೆರಿಟ್ ಮತ್ತು ಮನಿ(ಹಣ)ಗೆ ಬಿಕರಿಯಾಗುತ್ತವೆ.

ಈ ವ್ಯಾಪಾರದಲ್ಲಿ ಬಹುತೇಕ ಖಾಸಗಿ ಶಿಕ್ಷಣ ಸಂಸ್ಥೆಗಳು ಮುಳುಗಿವೆ. ನಿಗದಿಯಾದ ಫೀಗಳೆ ತುಂಬಲಾಗದಷ್ಟು. ಮೇಲಾಗಿ ಡೊನೇಷನ್ ಇದು ರಾಜಧಾನಿಯಲ್ಲೇ ಮನಸೋಇಚ್ಛೆ ನಡೆಯುತ್ತದೆ. ಸರ್ಕಾರ ಪಕ್ಕದಲ್ಲೇ ಇದ್ದರೂ, ಸಚಿವ, ಅಧಿಕಾರಿಗಳು ಅಲ್ಲೇ ಸುಳಿಯುತ್ತಿದ್ದರೂ, ಎಲ್ಲವನ್ನೂ ತಣ್ಣಗೆ ನೋಡಿ, ಬಾಯಿ, ಕಣ್ಣು ಮುಚ್ಚುತ್ತಾರೆ. ಬೇಕೆಂದರೆ ನಿಮಗೆ ತಾಕತ್ತಿದ್ದರೆ ಮುಖ್ಯಮಂತ್ರಿಗಳೋ, ಶಿಕ್ಷಣ ಸಚಿವರೋ ಒಂದು ಶಿಫಾರಸು ಪತ್ರ ಕೋರುತ್ತಾರೆ. ಆದರೆ ಅದಕ್ಕೆ ಕವಡೆ ಕಿಮ್ಮತ್ತು ನೀಡದಿರುವುದು ಮ್ಯಾನೇಜ್‌ಮೆಂಟ್‌ಗಳ ಹಕ್ಕು!

ನೀತಿ, ನಿಯಮಗಳನ್ನು ಗಾಳಿಗೆ ತೂರಿ, ಮನಬಂದಂತೆ ವರ್ತಿಸುವ, ಹಣ ಸುಲಿಯುವ ಖಾಸಗಿ ಸಂಸ್ಥೆಗಳನ್ನು ಹದ್ದು ಬಸ್ತಿನಲ್ಲಿಡಲಾರದಷ್ಟು ಸರ್ಕಾರ ದುರ್ಬಲವೇ? ಇಲ್ಲ, ಅದು ಇವರಿಗೆ ಬೇಕಿಲ್ಲ. ಉದಾರೀಕರಣದಲ್ಲಿ ಉಂಟು ತೇಗುವವನೇ ಜಾಣನಲ್ಲವೇ? ಮೇಲಾಗಿ ಈ ಸರ್ಕಾರದ ಮೇಲೆ ವಿದ್ಯಾದಾನಿಗಳಿಗೆ ಅದೆಷ್ಟು ಹಿಡಿತ!

ಪ್ರತ್ಯೇಕ ತೆಲಂಗಾಣ : ಜನರ ಐಕ್ಯತೆ ಒಡೆಯುವ ಬೇಡಿಕೆ

ಪ್ರತ್ಯೇಕ ತೆಲಂಗಾಣ ಬೇಡಿಕೆ ಆಂಧ್ರಪ್ರದೇಶದಲ್ಲಿ ಪುತ್ತ ತಲೆಯೆತ್ತಿದೆ. ರಾಜ್ಯ ವಿಧಾನಸಭೆಯ ಉಪಸಭಾಪತಿ ಚಂದ್ರಶೇಖರ ರಾವ್ ತನ್ನ ಸ್ಥಾನಕ್ಕೆ ಮತ್ತು ತೆಲುಗುದೇಶಂ ಪಕ್ಷಕ್ಕೆ ರಾಜೀನಾಮೆ ನೀಡಿ ಒಂದು ಪ್ರತ್ಯೇಕ ರಾಜ್ಯಕ್ಕಾಗಿ ಹೋರಾಡಲು 'ತೆಲಂಗಾಣ ರಾಷ್ಟ್ರೀಯ ಸಮಿತಿ'ಯ ರಚನೆಯನ್ನು ಪ್ರಕಟಿಸಿದಾಗ ಈ ಬೇಡಿಕೆಗೆ ಮತ್ತೆ ಪ್ರಾಧಾನ್ಯತೆ ಸಿಕ್ಕಿದೆ. ತೆಲಂಗಾಣ ಪ್ರದೇಶದ ಕಾಂಗ್ರೆಸ್ ಶಾಸಕರೂ ಪ್ರತ್ಯೇಕ ರಾಜ್ಯದ ಬೇಡಿಕೆ ಎತ್ತಿದ್ದಾರೆ. 41 ಕಾಂಗ್ರೆಸ್ ಶಾಸಕರು 'ತೆಲಂಗಾಣ ಕಾಂಗ್ರೆಸ್ ವೇದಿಕೆ' ರಚಿಸಿಕೊಂಡು ಈ ಬೇಡಿಕೆಯನ್ನು ಸ್ವೀಕರಿಸುವಂತೆ



ಚಂದ್ರಶೇಖರ ರಾವ್

ಕಾಂಗ್ರೆಸ್ ಹೈಕಮಾಂಡ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಎಲ್ಲಾ ತೆಲುಗು ಭಾಷಿಕ ಜನಗಳಿಗೆ ಒಂದು ಭಾಷಾವಾರು ಪ್ರಾಂತ್ಯ ಬೇಕೆಂಬ ದೀರ್ಘ ಹೋರಾಟದ ನಂತರ 1955 ರಲ್ಲಿ ಆಂಧ್ರಪ್ರದೇಶದ ರಚನೆಯಾಯಿತು. 1950 ರ ದಶಕದಲ್ಲಿ ಭಾಷಾವಾರು ಪ್ರಾಂತ್ಯ ರಚನೆಗೆ ದೇಶಾದ್ಯಂತ ನಡೆದ ಆಂದೋಲನದಲ್ಲಿ ವಿಶಾಲಾಂಧ್ರ ಆಂದೋಲನ ಮುಂಚೂಣಿಯಲ್ಲಿತ್ತು. ಭಾಷಾವಾರು ಆಧಾರದಲ್ಲಿ ರಾಜ್ಯಗಳ ಪುನರ್‌ರಚನೆ ನಡೆಸಲಾಗುವುದೆಂದು ಸ್ವಾತಂತ್ರ್ಯ ಆಂದೋಲನ ಕಾಲದಲ್ಲಿ ಕೊಟ್ಟ ಮಾತಿನಂತೆ ಕಾಂಗ್ರೆಸ್ ಆಳರಸರು ನಡೆಯದ ಕಾರಣ ಇಂತಹ ಒಂದು ಆಂದೋಲನ ಮೂಡಿಬಂತು.

ವಿಶಾಲಾಂಧ್ರ ಆಂದೋಲನಕ್ಕೆ ಕಮ್ಯುನಿಸ್ಟ್ ಪಕ್ಷ ಮತ್ತು ಇತರ ಪ್ರಜಾಪ್ರಭುತ್ವವಾದಿ ಶಕ್ತಿಗಳು ನೇತೃತ್ವ ನೀಡಿದ್ದರು. ಆಗ ಮದ್ರಾಸ್ ಪ್ರಾಂತ್ಯದಲ್ಲಿದ್ದ ಕರಾವಳಿ ಪ್ರದೇಶದ ತೆಲುಗು ಭಾಷಿಕರು, ಹೈದರಾಬಾದ್ ನಿಜಾಮನ ಅಧೀನದಲ್ಲಿದ್ದ ತೆಲಂಗಾಣ ಪ್ರದೇಶದವರು, ಆಗ ಮುಂಬೈ ಪ್ರಾಂತ್ಯದಡಿಯಲ್ಲಿದ್ದ ಪ್ರದೇಶದಲ್ಲಿದ್ದು - ಹೀಗೆ ಎಲ್ಲಾ ತೆಲುಗು ಭಾಷಿಕರು ಒಂದು ಭಾಷಾವಾರು ಪ್ರಾಂತ್ಯದ ಬೇಡಿಕೆಗೆ ದನಿಗೂಡಿಸಿದರು. ಈ ಹೋರಾಟದಲ್ಲಿ ಹತ್ತಾರು ಜನ ಸಾವನ್ನಪ್ಪಿದರು.

ಭಾಷಾವಾರು ಪ್ರಾಂತ್ಯಗಳನ್ನು ವಿಭಜಿಸುವ ಬಿಜೆಪಿ ಅದಕ್ಕೆ ನೆರವು ನೀಡುತ್ತಿರುವ ಕಾಂಗ್ರೆಸ್

ಭಾಷಾವಾರು ರಾಜ್ಯಗಳ ರಚನೆ ಒಂದು ಪ್ರಜಾಸತ್ತಾತ್ಮಕ ಹೆಜ್ಜೆ

ಸ್ವಾತಂತ್ರ್ಯನಂತರದ ಭಾರತದಲ್ಲಿ ಭಾಷಾವಾರು ರಾಜ್ಯಗಳ ರಚನೆ ಒಂದು ಮಹತ್ವದ ಪ್ರಜಾಸತ್ತಾತ್ಮಕ ಹೆಜ್ಜೆಯಾಗಿತ್ತು. **ಆಡಳಿತ ಮತ್ತು ಇತರ ರಂಗಗಳಲ್ಲಿ ತಮ್ಮ ಭಾಷೆಯನ್ನೇ ಬಳಸಲು ಸಾಧ್ಯವಾಗುವಂತಹ ಒಂದು ರಾಜ್ಯದ ರಚನೆ ಪ್ರಜಾಪ್ರಭುತ್ವದಲ್ಲಿ ಅನಿವಾರ್ಯವಾಗಿತ್ತು.** ಆದರೆ ನಂತರ ಬಂದ ಸರಕಾರಗಳು ಅನುಸರಿಸಿದ ಬಂಡವಾಳಶಾಹಿ- ಭೂಮಾಲಕ ಧೋರಣೆಗಳು ಜನಗಳ ಆಶೋತ್ತರಗಳನ್ನು ಈಡೇರಿಸುವಲ್ಲಿ ವಿಫಲವಾದವು. ಪ್ರತಿಯೊಂದು ರಾಜ್ಯದಲ್ಲಿ ಐತಿಹಾಸಿಕ ಮತ್ತು ಸಾಮಾಜಿಕ-ರಾಜಕೀಯ ಕಾರಣಗಳಿಂದಾಗಿ ಹಿಂದುಳಿದ ಪ್ರದೇಶಗಳಿವೆ. ಆಂಧ್ರಪ್ರದೇಶದಲ್ಲಿ ತೆಲಂಗಾಣ ಇಂತಹ ಒಂದು ಪ್ರದೇಶ. ನಿಜಾಮನ ಆಳ್ವಿಕೆಯಲ್ಲಿ ಇದು ಪಾಳೆಯಗಾರಿ ಭೂಮಾಲಿಕತ್ವದ ಭದ್ರಕೋಟೆಯಾಗಿತ್ತು. ಕರಾವಳಿ ಆಂಧ್ರಕ್ಕೆ ಹೋಲಿಸಿದರೆ ಶಿಕ್ಷಣ ಮತ್ತು ಮೂಲ ಸೌಕರ್ಯಗಳಲ್ಲಿ ಹಿಂದುಳಿದಿತ್ತು. ಎಂಭತ್ತರ ದಶಕದವರೆಗೆ ಆಂಧ್ರಪ್ರದೇಶವನ್ನಾಳಿದ ಕಾಂಗ್ರೆಸ್ ಹಿಂದುಳಿಕೆಯ ಕಾರಣಗಳನ್ನು ನಿವಾರಿಸಿ ಈ ಪ್ರದೇಶವನ್ನು ಅಭಿವೃದ್ಧಿಪಡಿಸಲು ಏನೂ ಮಾಡಲಿಲ್ಲ.

ಪ್ರತ್ಯೇಕ ರಾಜ್ಯಗಳ ಬೇಡಿಕೆ ಏಕೆ?

ಅರವತ್ತರ ದಶಕದ ಕೊನೆಯಲ್ಲಿ ಪ್ರತ್ಯೇಕ ತೆಲಂಗಾಣ ಬೇಕೆಂದು ಚಳುವಳಿ ನಡೆಯಿತು. ಹಿಂದುಳಿಕೆ ಮತ್ತು ಪಕ್ಷಪಾತ ನಿಲ್ಲಿಸಬೇಕೆಂಬುದು ಈ ಚಳುವಳಿಯ ಮುಖ್ಯ ಕಾರಣವಾಗಿದ್ದವು. ಆಗಲೂ ಕಾಂಗ್ರೆಸ್ ಪಕ್ಷ ಪ್ರಾದೇಶಿಕತೆ ಆಧಾರದಲ್ಲಿ ಈ ವಿಷಯದಲ್ಲಿ ವಿಭಜನೆಯಾಯಿತು. 1973 ರ ವರೆಗೂ ಮುಂದುವರೆದ ಈ ದೀರ್ಘ, ಪ್ರಕ್ಷುಬ್ಧ ಚಳುವಳಿಯ ನಂತರ ತೆಲಂಗಾಣ ಮತ್ತು ಅಲ್ಲಿನ ಜನಗಳ ಪ್ರಯೋಜನಕ್ಕೆ ಆರಂಶಗಳ ಒಂದು ಯೋಜನೆಯನ್ನು ರೂಪಿಸಲಾಯಿತು. ಸರ್ಕಾರಿ ಸೇವೆಯಲ್ಲಿ ತೆಲಂಗಾಣ ಜನತೆಗೆ ನಿರ್ದಿಷ್ಟ ಪ್ರಮಾಣದ ಮೀಸಲಾತಿ ಮತ್ತು ಈ ಪ್ರದೇಶದ ಅಭಿವೃದ್ಧಿ ಇತರ ಕ್ರಮಗಳು ಈ ಯೋಜನೆಯಲ್ಲಿದ್ದವು. ಆದರೆ ಸುಮಾರು ಮೂರು ದಶಕಗಳ ನಂತರವೂ ಈ ನಿಟ್ಟಿನಲ್ಲಿ ಹೆಚ್ಚೇನೂ ಪ್ರಗತಿ ಕಂಡಿಲ್ಲ. ತಮ್ಮನ್ನು ಉಪೇಕ್ಷಿಸಲಾಗಿದೆ, ತಮ್ಮ ವಿರುದ್ಧ ಪಕ್ಷಪಾತ ಮಾಡಲಾಗಿದೆ ಎಂಬ ಭಾವನೆ ಜನಗಳಲ್ಲಿದೆ. ಇವರಲ್ಲಿ ಮಧ್ಯಮ ಮತ್ತು ಶಿಕ್ಷಿತ ವಿಭಾಗಗಳ ಜನರ ದನಿ ಬಹಳವಾಗಿ ಕೇಳುತ್ತಿತ್ತು. ಇವರೆಲ್ಲಾ ಈಗ ಪ್ರತ್ಯೇಕ ರಾಜ್ಯದ ಬೇಡಿಕೆಯ ಬೆಂಬಲಕ್ಕೆ ನಿಲ್ಲುತ್ತಿದ್ದಾರೆ.

ಆಂಧ್ರ ಪ್ರದೇಶದಲ್ಲಿ ರಾಯಲಸೀಮಾ ಕೂಡಾ ಒಂದು ಹಿಂದುಳಿದ ಪ್ರದೇಶ. ಪ್ರತಿಯೊಂದು ರಾಜ್ಯದಲ್ಲೂ ಇತರ ಪ್ರದೇಶಗಳಿಗೆ ಹೋಲಿಸಿದಾಗ ಹಿಂದುಳಿದ ಪ್ರದೇಶಗಳು ಸಿಗುತ್ತವೆ. **ಇಲ್ಲಿ ಹಿಂದುಳಿಕೆಗೆ ಕಾರಣವಾದ ಮೂಲ ಸಮಸ್ಯೆಗಳೆಂದರೆ** ಬಂಡವಾಳಶಾಹಿ ಅಭಿವೃದ್ಧಿಯ ಸ್ವರೂಪದ, ಯೋಜನೆಯ ಮತ್ತು ಸಂಪನ್ಮೂಲಗಳ ಸಮತೋಲನದ ಬಳಕೆಯ ಅಭಾವ ಇತ್ಯಾದಿ. ಇವನ್ನು ಎದುರಿಸುವ ಬದಲು ಬಂಡವಾಳಶಾಹಿ-ಭೂಮಾಲಕ ವರ್ಗಗಳ ವಿಭಿನ್ನ ವಿಭಾಗಗಳು ತಂತಮ್ಮ ಪಾಲಿನ ಅಧಿಕಾರ, ಸಂಪನ್ಮೂಲಗಳನ್ನು ಗಿಟ್ಟಿಸಲು ಪರಸ್ಪರ ಕಿತ್ತಾಡುತ್ತವೆ.

ಬಿಜೆಪಿ, ಕಾಂಗ್ರೆಸ್ ನಿಲುವು

ಹೀಗೆ ಏಕೀಕರಣಗೊಂಡ ಭಾಷಾವಾರು ರಾಜ್ಯಗಳನ್ನು ಒಡೆದು ಹೊಸ ರಾಜ್ಯಗಳನ್ನು ರಚಿಸುವ ಬೇಡಿಕೆಗಳು ಬಂದಿವೆ. ಇತ್ತೀಚೆಗೆ ೦

ಬಿಜೆಪಿ ಈಗಿರುವ ಭಾಷಾವಾರು ಪ್ರಾಂತ್ಯಗಳನ್ನು ಒಡೆದು ಸಣ್ಣ ರಾಜ್ಯಗಳ ರಚನೆಗೆ ಕಟಿಬದ್ಧವಾಗಿದೆ. ಏಕೆಂದರೆ ಆಗ ಇಂತಹ ಸಣ್ಣ ರಾಜ್ಯಗಳ ಮೇಲೆ ಸುಲಭವಾಗಿ ಸವಾರಿ ನಡೆಸಬಲ್ಲ ಒಂದು ಸರ್ವಾಧಿಕಾರಶಾಹಿ ಕೇಂದ್ರ ಸಾಧ್ಯವಾಗುತ್ತದೆ. ಬಿಜೆಪಿಗೆ ಇದೇ ಬೇಕಾಗಿರುವುದು. ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಪಶ್ಚಿಮಬಂಗಾಳ ಇತ್ಯಾದಿ ರಾಜ್ಯಗಳಿದ್ದರೆ ಹೀಗೆ ಮಾಡಲು ಸಾಧ್ಯವಾಗದು. ಈ ರಾಜ್ಯಗಳು ತಮ್ಮ ಹಕ್ಕುಗಳನ್ನು ಒತ್ತಾಯಿಸಿ, ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುತ್ತವೆ. ಬಿಜೆಪಿ ಹಿಂದುತ್ವ ಸಿದ್ಧಾಂತದ ಮೇಲೆ ನಿಂತಿರುವಂತದ್ದು. ಈ ಸಿದ್ಧಾಂತ ಭಾಷಾ-ದೇಶೀ ಸ್ವರೂಪದ ಬಲಿಷ್ಠ ರಾಜ್ಯಗಳ ಪರಿಕಲ್ಪನೆಗೆ ವಿರುದ್ಧವಾದದ್ದು.

ಕಾಂಗ್ರೆಸ್ ಪಕ್ಷಕ್ಕೆ ಇಂತಹ ಸಿದ್ಧಾಂತ, ನಿಲುವೇನೂ ಇಲ್ಲ. ಅದರ ವರ್ತನೆ, ನಿಲುವುಗಳು ಕೇವಲ ಸಮಯಸಾಧಕ ಸ್ವರೂಪದವು. ತೆಲಂಗಾಣಾ ಕಾಂಗ್ರೆಸ್ಸಿಗರು ತಮ್ಮ ಕಾರ್ಯಕರ್ತರನ್ನು, ಜನನೆಲೆಗಳನ್ನು .ತೆಲಂಗಾಣ ರಾಷ್ಟ್ರೀಯ ಸಮಿತಿ ಕಿತ್ತುಕೊಳ್ಳದಿರಲಿ ಎಂಬ ಕಾರಣಕ್ಕಷ್ಟೇ ಇಂತಹ ನಿಲುವು ತಳೆದಿದ್ದಾರೆ. ಆಂಧ್ರಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸತ್ಯನಾರಾಯಣ ರಾವ್ ತೆಲಂಗಾಣ ಕಾಂಗ್ರೆಸ್ಸಿಗರನ್ನು ಖುಷಿಪಡಿಸಲು ಸಣ್ಣ ರಾಜ್ಯಗಳ ಪ್ರತಿಪಾದನೆ ಮಾಡುವ ಮಟ್ಟಕ್ಕೂ ಹೋಗಿದ್ದಾರೆ. ವಿದರ್ಭ, ತೆಲಂಗಾಣಗಳಂತಹ ಕಡೆಗಳಿಂದ ಕಾಂಗ್ರೆಸ್ಸಿಗರ ಒತ್ತಡ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಧ್ಯಕ್ಷರು ಈ ಬೇಡಿಕೆಗಳನ್ನು ಪರಿಶೀಲಿಸಲು ಮತ್ತು ಕಾಂಗ್ರೆಸ್ ಪಕ್ಷದ ನಿಲುವು ರೂಪಿಸಲು ಐವರು ಸದಸ್ಯರ ಸಮಿತಿಯೊಂದನ್ನು ನೇಮಿಸಿದ್ದಾರೆ. ಹಿಂದಿನ ಅನುಭವಗಳ ಆಧಾರದಲ್ಲಿ ಹೇಳುವುದಾದರೆ ಈ **ಪ್ರದೇಶಗಳ ಕಾಂಗ್ರೆಸ್ಸಿಗರು ಇಂತಹ ಬೇಡಿಕೆಗಳನ್ನು ಬೆಂಬಲಿಸಿ ರಾಜ್ಯಗಳನ್ನು ದುರ್ಬಲಗೊಳಿಸುವ ಮೂಲಕ ಬಿಜೆಪಿಯ ಒಟ್ಟಾರೆ ಗುರಿಯ ಈಡೇರಿಕೆಗೆ ನೆರವಾಗುತ್ತಾರೆ.**

ಐಕ್ಯ ಹೋರಾಟದ ಹಾದಿ

ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಪ್ರಗತಿಗೆ ಸುಲಭದಾರಿಗಳಿಲ್ಲ. ಶಾರ್ಟ್‌ಕಟ್‌ಗಳಿಲ್ಲ ಎಂದು ತೆಲಂಗಾಣದ ಜನತೆಗೆ ಮನವರಿಕೆ ಮಾಡಬೇಕಾಗಿದೆ. ತೆಲಂಗಾಣ ರೈತರ ವೀರಾವೇಶದ ಸಶಸ್ತ್ರ ಹೋರಾಟ ಮೂಲಭೂತ ಸಮಸ್ಯೆಯನ್ನು ಕೈಗೆತ್ತಿಕೊಂಡದ್ದರಿಂದ ಪಾಳೆಯಗಾರಿ ದಮನವನ್ನು ನಾಶ ಮಾಡುವಲ್ಲಿ ಬಹಳಷ್ಟು ಕೆಲಸ ಮಾಡಿತು. ಹಿಂದಿನ ದಶಕಗಳಲ್ಲಿ ನಡೆಸಿದ ಐಕ್ಯ ಹೋರಾಟಗಳು ಮತ್ತು ಆಂದೋಲನಗಳನ್ನು ನೆನಪಿಸಿ ರಾಜ್ಯದ ಜನಗಳ ಸಮಾನ ಸಂಬಂಧಗಳ ಮೇಲೆ ಈಗ ಒತ್ತು ನೀಡಬೇಕಾಗಿದೆ. ತೆಲಂಗಾಣದ ಜನತೆಗೆ ಒಂದು ಉತ್ತಮ ಬದುಕಿಗಾಗಿ ಹೋರಾಟ ಈ ಐಕ್ಯತೆಯ ಮೂಲಕ ಮಾತ್ರ ಸಾಧ್ಯ. ತೆಲಂಗಾಣಗಳ ಪ್ರದೇಶ ಜನಗಳು ಎದುರಿಸುವ ಸಮಸ್ಯೆಗಳನ್ನು ಪರಿಹರಿಸಲು ತಕ್ಷಣವೇ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಪ್ರಜಾಪ್ರಭುತ್ವವಾದೀ ಶಕ್ತಿಗಳು ಒತ್ತಾಯಿಸಬೇಕು.

ಎಲ್ಲಾ ತೆಲುಗು ಭಾಷಿಕ ಜನಗಳ ಐಕ್ಯತೆಯನ್ನು ಕಾಯ್ದುಕೊಳ್ಳುವ ಮತ್ತು ಒಂದು ಪ್ರತ್ಯೇಕ ರಾಜ್ಯದ ಬೇಡಿಕೆಯ ಟೊಳ್ಳುತನವನ್ನು ತೋರಿಸಿ ಕೊಡುವ ಮಹತ್ವದ ಜವಾಬ್ದಾರಿ ಆಂಧ್ರಪ್ರದೇಶದ ಎಡ ಶಕ್ತಿಗಳ ಮೇಲಿದೆ.

ದುರ್ಬಲ ರಾಜ್ಯಗಳಿಂದ ಪ್ರಗತಿ ಸಾಧ್ಯವಿಲ್ಲ

ಒಂದು ಪ್ರತ್ಯೇಕ ತೆಲಂಗಾಣದ ಬೇಡಿಕೆ ಬಲಿಷ್ಠ ರಾಜ್ಯಗಳನ್ನು ಮತ್ತು ಒಕ್ಕೂಟ ಸ್ವರೂಪವನ್ನು ದುರ್ಬಲಗೊಳಿಸುವುದಲ್ಲದೆ, ಇದು ಜನಗಳ ಗಮನವನ್ನು ಬೇರೆ ದಾರಿಗೆಳೆಯುವ ಒಂದು ಪ್ರಯತ್ನ ಕೂಡಾ. ನಿರುದ್ಯೋಗ, ನೀರಾವರಿ ಅಭಾವ, ಶಿಕ್ಷಣ ಸೌಲಭ್ಯಗಳ ಅಭಾವ, **ಸಾಮಾಜಿಕ-ಆರ್ಥಿಕ ಹಿಂದುಳಿಕೆ-ಇವೆಲ್ಲಾ ತೀವ್ರ ಸಮಸ್ಯೆಗಳು ಬಂಡವಾಳಶಾಹಿ- ಭೂಮಾಲಕ ಧೋರಣೆಗಳಿಂದಾಗಿ, ಅವು ಆದ್ಯತೆಗಳನ್ನು ವಿಕೃತಗೊಳಿಸಿದ್ದರಿಂದಾಗಿ ಹುಟ್ಟಿಕೊಂಡ ಸಮಸ್ಯೆಗಳು.** ಇವು ಎಲ್ಲಾ ಪ್ರದೇಶದ ಜನಗಳನ್ನು ವಿವಿಧ ಪ್ರಮಾಣದಲ್ಲಿ ಬಾಧಿಸುವ ಸಮಸ್ಯೆಗಳು. ಇಂತಹ ಸರ್ಕಾರಿ ಧೋರಣೆಗಳು ಮತ್ತು ಬಂಡವಾಳಶಾಹಿ- ಭೂಮಾಲಕ ವರ್ಗಗಳು ಸಂಪನ್ಮೂಲಗಳನ್ನು ನುಂಗಿಹಾಕುವುದರ ವಿರುದ್ಧ ಎಲ್ಲಾ ಜನವಿಭಾಗಗಳ ಐಕ್ಯ ಹೋರಾಟ ಮಾತ್ರವೇ ಒಂದು ಸಮತೋಲನಪೂರ್ಣ ಸರ್ವಾಂಗೀಣ ಅಭಿವೃದ್ಧಿಗೆ ಆಧಾರವಾಗಬಲ್ಲದು.

ಪ್ರತ್ಯೇಕ ತೆಲಂಗಾಣದ ಬೇಡಿಕೆಗೆ ವಿಶೇಷವಾಗಿ ಯುವ ಜನಾಂಗದಿಂದ ವಿಶೇಷ ಸ್ಪಂದನ ದೊರೆಯುತ್ತಿದೆ. ಇದಕ್ಕೆ ಕಾರಣ ಅವರಲ್ಲಿ ಹರಡಿರುವ ಹತಾಶೆ. ನಕ್ಸಲೈಟ್ ಪಿ.ಡಬ್ಲ್ಯು.ಜಿ. ಈ ಬೇಡಿಕೆಯನ್ನು ಬೆಂಬಲಿಸಿದೆ. ಬುದ್ಧಿಜೀವಿಗಳ ಒಂದು ವಿಭಾಗವೂ ಈ ಬೇಡಿಕೆಯನ್ನು ಬೆಂಬಲಿಸಿದೆ. ಇದರಿಂದ ತಮ್ಮ ಭವಿಷ್ಯ ಉತ್ತಮಗೊಳ್ಳಬಹುದೆಂಬ ನಿರೀಕ್ಷೆ ಅವರದ್ದು. ಸಿಪಿಐ(ಎಂ) ಮತ್ತು ಸಿಪಿಐ ಮಾತ್ರವೇ ವಿಶಾಲಾಂಧ್ರ ಆಂದೋಲನದ ಪರಂಪರೆಯನ್ನು ಮುಂದುವರೆಸಿವೆ. ಒಂದು ಐಕ್ಯ ಆಂಧ್ರ ಪ್ರದೇಶ ಇರಬೇಕು ಎಂಬ ದೃಢನಿಲುವು ತಳೆದಿವೆ. ತೆಲುಗುದೇಶಂ ಇದುವರೆಗೆ ಈ ಬೇಡಿಕೆಯನ್ನು ಪ್ರತಿರೋಧಿಸಿದೆ.

ಜನರಲ್ ಮುಶ್ರಫ್‌ಗೆ ಭಾರತದ ಆಹ್ವಾನ


ಆಹ್ವಾನ ಒಪ್ಪಿದ ಮುಶ್ರಫ್

ಪಾಕಿಸ್ತಾನದ ಮಿಲಿಟರಿ ಆಡಳಿತಗಾರ ಜನರಲ್ ಪರ್ವೇಜ್ ಮುಶ್ರಫ್ ಅವರನ್ನು ಭಾರತ ಸರ್ಕಾರವು ಮಾತುಕತೆಗೆ ಆಹ್ವಾನಿಸಿರುವುದು ಸ್ವಾಗತಾರ್ಹ. ನೆರೆ ರಾಷ್ಟ್ರದೊಂದಿಗೆ ಸಂಬಂಧವನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಇದೊಂದು ಮಹತ್ವಪೂರ್ಣ ಹೆಜ್ಜೆಯಾಗಿದೆ.

ಸಾಮ್ರಾಜ್ಯಶಾಹಿ ವಿರೋಧಿ, ಅಲಿಪ್ತನೀತಿ, ನೆರೆ ರಾಷ್ಟ್ರಗಳೊಂದಿಗೆ ಮಿತ್ರತ್ವ-ಇವು ಸ್ವತಂತ್ರ ಸಂಗ್ರಾಮದ ಕೊಡುಗೆಗಳು. ಸಾಮ್ರಾಜ್ಯಶಾಹಿ ಬ್ರಿಟಿಷರ ಒಡೆದು ಆಳುವ ನೀತಿಯಿಂದಾಗಿ ಪಾಕಿಸ್ತಾನ, ಭಾರತದಿಂದ ಬೇರ್ಪಟ್ಟರೂ ಅದರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಲು ಭಾರತ ಬಯಸಿತ್ತು. ಈ ಹಿನ್ನೆಲೆಯಲ್ಲಿ ಹಲವಾರು ಬಾರಿ ದ್ವಿಪಕ್ಷೀಯ ಸಭೆಗಳು ನಡೆದವು. ಅಂತಹ ಪ್ರಮುಖ ಸಭೆಗಳ ಒಪ್ಪಂದವೇ ಶಿಮ್ಲಾ ಒಪ್ಪಂದ. ಮತ್ತು ಲಾಹೋರ್ ಗೊತ್ತುವಳಿ. ಇದರ ಆಧಾರದಲ್ಲಿಯೇ ಮುಂದಿನ ಮಾತುಕತೆಗಳು ನಡೆದು ಭಾರತೀಯ ಉಪಖಂಡದಲ್ಲಿ ಶಾಂತಿ ನೆಲೆಸುವಂತೆ ಮಾಡಬೇಕಾಗಿದೆ.

ಕಾಶ್ಮೀರದಲ್ಲಿ ಶಾಂತಿ ನೆಲೆಸುವಂತೆ ಮಾಡಲು ಕದನವಿರಾಮವನ್ನು ಘೋಷಿಸಿ, ಉಗ್ರಗಾಮಿ ಸಂಘಟನೆಗಳೊಂದಿಗೆ ಮಾತುಕತೆ ನಡೆಸಿದರೂ ನಿರೀಕ್ಷಿತ ಫಲಿತಾಂಶ ದೊರಕಲಿಲ್ಲ. ಪಾಕಿಸ್ತಾನದಲ್ಲಿ ನೆಲೆಸಿರುವ ಉಗ್ರಗಾಮಿ ಸಂಘಟನೆಗಳ ಮುಖಂಡರೊಂದಿಗೆ ಮಾತುಕತೆ ನಡೆಸಲು ಬಯಸಿದ ಆಲ್ ಪಾರ್ಟಿ ಹರಿಯತ್ ಕಾನ್ಫರೆನ್ಸ್‌ನ (ಎಪಿಹೆಚ್‌ಸಿ) ಇಬ್ಬರು ಮುಖಂಡರಿಗೆ ಭಾರತ ಸರ್ಕಾರ ಪಾಸ್ ಪೋರ್ಟ್ ನೀಡಲಿಲ್ಲ. ಆದ್ದರಿಂದ


ಸ್ವಾಗತಾರ್ಹ ಹೆಜ್ಜೆ

ವಾಜಪೇಯಿ ಸರ್ಕಾರಕ್ಕೆ ಸ್ಪಷ್ಟವಾದ ನಿಲುಮೆಯ ಕೊರತೆಯಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಇದೀಗ ಭಾರತ ಮತ್ತು ಪಾಕಿಸ್ತಾನಗಳ ನಡುವೆ ನೇರ ಮಾತುಕತೆ ನಡೆಸುವುದರ ಮೂಲಕ ಆಯಾ ದೇಶದಲ್ಲಿರುವ ಪರಿಸ್ಥಿತಿ/ ಸಮಸ್ಯೆಗಳನ್ನು ಪರಸ್ಪರ ಅರಿತು ಮುಂದೆ ಹೆಜ್ಜೆ ಇಡುವುದಕ್ಕೆ ಸಹಾಯವಾಗುತ್ತದೆ.

ಖಚಿತವಾದ ಕಾರ್ಯಸೂಚಿಯ ಕೊರತೆ ಎದ್ದು ಕಾಣುತ್ತಿದೆ. ಕಾಶ್ಮೀರವೇ ಪ್ರಮುಖ ಕಾರ್ಯಸೂಚಿ ಎಂದು ಜನರಲ್ ಮುಷರಫ್ ಹೇಳಿದರೆ, ಎಲ್ಲಾ ವಿಷಯಗಳನ್ನು ಒಳಗೊಂಡಿರುತ್ತದೆ ಎನ್ನುವುದು ವಾಜಪೇಯಿಯವರು ಬರೆದ ಪತ್ರದ ಉಲ್ಲೇಖ. ಆದರೆ ವಿದೇಶಾಂಗ ಸಚಿವ ಜಸ್ವಂತ್ ಸಿಂಗ್ ಪ್ರಕಾರ ಕಾಶ್ಮೀರ ಪ್ರಮುಖ ಕಾರ್ಯಸೂಚಿ ಅಲ್ಲ. ಇಂತಹ

ಶಾಂತಿ - ಅಭಿವೃದ್ಧಿಯತ್ತ ಮಹತ್ವದ ಯತ್ನ


ಅಸ್ಪಷ್ಟ ನಿಲುಮೆ

ಭಾರತದ ಪ್ರಧಾನಮಂತ್ರಿಯೊಂದಿಗೆ ಎಲ್ಲಿ ಬೇಕಾದರೂ ಮಾತುಕತೆಗೆ ಸಿದ್ಧ ಎಂದು ಮುಷ್ರಫ್ ಘೋಷಿಸಿದ್ದರೂ, ಬಿಜೆಪಿ ನೇತೃತ್ವದ ಸರಕಾರ ತಕ್ಷಣ ಪ್ರತಿಕ್ರಿಯಿಸಲಿಲ್ಲ. ಬದಲಾಗಿ ಮಿಲಿಟರಿ ಸರಕಾರ ಎಂದು ಕಡೆಗಣಿಸುತ್ತಾ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಪಾಕಿಸ್ತಾನವನ್ನು ದೂರ ಸರಿಸಲು ಮುರುಳಿ ಮನೋಹರ ಜೋಷಿ, ಉಮಾಭಾರತಿಯಂತಹ ಹಲವು ಮುಖಂಡರು ಪ್ರಯತ್ನಿಸಿದರು. ಈಗ ಮಾತುಕತೆಗೆ ನೀಡಿರುವ ಆಹ್ವಾನದಿಂದ ಈ ಸಂಶಯಗಳನ್ನು ದೂರಮಾಡಲು ಸಾಧ್ಯವಾಗಿದೆ.

ಖಚಿತ ಕಾರ್ಯಸೂಚಿ ಅಗತ್ಯ: ಭಾರತ-ಪಾಕಿಸ್ತಾನ ಮಾತುಕತೆ ಸ್ವಾಗತಾರ್ಹವಾದರೂ ಧೋರಣೆ ಮಾತುಕತೆಯ ಫಲಶ್ರುತಿಗೆ ಸಹಕಾರಿಯಲ್ಲ.

ಇದೇ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ಗಣನೆಗೆ ತೆಗೆದುಕೊಳ್ಳಬೇಕು. ಕಾಶ್ಮೀರದ ಅಂದಿನ ಮಹಾರಾಜ ಹರಿಸಿಂಗ್ ಆ ರಾಜ್ಯವನ್ನು ಸ್ವತಂತ್ರವಾಗಿ ಉಳಿಸಿಕೊಳ್ಳಬೇಕೆಂದು ಬಯಸಿದ್ದರು. ಇದಕ್ಕೆ ಆರ್.ಎಸ್.ಎಸ್. ಬೆಂಬಲವೂ ಇತ್ತು. ಆರ್.ಎಸ್.ಎಸ್. ಕೆಲಸ ಮಾಡುತ್ತಿದ್ದ 'ಪ್ರಜಾ ಪರಿಷತ್' ಸಂಘಟನೆ ಮಹಾರಾಜ ಹರಿಸಿಂಗ್ ನಿಲುವಿಗೆ ಬೆಂಬಲ ಸೂಚಿಸಿತ್ತು. ಆದರೆ ನ್ಯಾಶನಲ್ ಕಾನ್ಫರೆನ್ಸ್ ಮುಖಂಡ ಶೇಖ್‌ಅಬ್ದುಲ್ಲಾ ನೇತೃತ್ವದಲ್ಲಿ ಬಹುತೇಕ ಮುಸ್ಲಿಂ ಸಮುದಾಯವನ್ನು ಒಳಗೊಂಡು ಭಾರತದೊಂದಿಗೆ ಸೇರಬೇಕೆಂಬ ಹೋರಾಟ ನಡೆದಿತ್ತು. ಅದರ ಫಲವಾಗಿಯೇ ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನದ ಕಲಂ 370 ನ್ನು ಸಂವಿಧಾನದಲ್ಲಿ ಅಳವಡಿಸಲಾಗಿತ್ತು. ಮತ್ತು ಕಾಶ್ಮೀರ ಭಾರತದ ಅವಿಭಾಜ್ಯ ಅಂಗವಾಯಿತು.

ಕಾಶ್ಮೀರವನ್ನು 3 ಭಾಗಗಳನ್ನಾಗಿ ಮಾಡಬೇಕೆಂಬ ಹಿಂದೂ ಮೂಲಭೂತವಾದಿಗಳ ಇಂದಿನ ನಿಲುಮೆ ದೇಶದ ಐಕ್ಯತೆಗೆ ಮಾರಕ.

ಜನಸಾಮಾನ್ಯರ ನಡುವೆ ಪ್ರಚಾರ: ದಿನಪತ್ರಿಕೆ, ಟಿ.ವಿ., ಮಾಧ್ಯಮಗಳಲ್ಲಿ ಭಾರತ-ಪಾಕಿಸ್ತಾನ ನಡುವಿನ ಮಾತುಕತೆ ಪ್ರಮುಖ ಸುದ್ದಿಯಾಗಿದೆ. ಪಾಕಿಸ್ತಾನ ಮಿಲಿಟರಿ ಸರಕಾರ ಎಂಬುದು ಒಂದೆಡೆಯಾದರೆ, ಯುದ್ಧ, ಉಗ್ರಗಾಮಿ ಚಟುವಟಿಕೆಗಳಿಗೆ ಪ್ರಚೋದನೆ ಇಂತಹ ಘಟನೆಗಳಿಂದ ಅಪನಂಬಿಕೆ ಜಾಸ್ತಿಯಾಗಿದೆ. ಅಂತೆಯೇ ಭಾರತ-ಪಾಕ್ ಕ್ರಿಕೆಟ್ ಪಂದ್ಯ ನಡೆದರೆ, ಕೋಮುವಾದಿ ಶಕ್ತಿಗಳು ಇದರ ಲಾಭ ಪಡೆಯುವ ಘಟನೆಗಳು ನಡೆಯುತ್ತವೆ.

ಆದರೆ ಎರಡೂ ದೇಶಗಳ ಬಹುಸಂಖ್ಯಾತ ಜನರಲ್ಲಿ ಬಾಂಧವ್ಯ ಉತ್ತಮಗೊಳ್ಳಬೇಕೆಂಬ ಬಯಕೆ ಇದೆ. ಆ ಬಯಕೆಯನ್ನು ಗಟ್ಟಿಗೊಳಿಸಲು, ಶಾಶ್ವತ ಶಾಂತಿ ನೆಲೆಸಿ, ಎರಡೂ ದೇಶಗಳ ಅಭಿವೃದ್ಧಿಗೆ ಸಹಾಯವಾಗಲು ಈ ಮಾತುಕತೆ ನೆರವಾಗುತ್ತದೆ ಎಂದು ಆಶಿಸೋಣ.

- ಬಾಲಕೃಷ್ಣ ಶೆಟ್ಟಿ

ಒಮ್ಮತದ ನಿರ್ಧಾರ ಅಗತ್ಯ ಕಾಶ್ಮೀರ

ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ತನ್ನ ಆರ್ಥಿಕ ನೀತಿಯಲ್ಲಿ ವಿಫಲವಾದುದು ಮಾತ್ರವಲ್ಲದೆ, ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸಲು ಅದಕ್ಕೆ ಸಾಧ್ಯವಾಗಿಲ್ಲ.

1996-97ರಲ್ಲಿ ಅಲ್ಪಕಾಲದ ಸಂಯುಕ್ತರಂಗ ಸರಕಾರ ಅಧಿಕಾರಕ್ಕೆ ಬಂದಾಗ ಈ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸಲಾಗಿತ್ತು. ಸಾಧಾರಣ 10 ವರ್ಷಗಳ ನಂತರದಲ್ಲಿ ನಡೆದ ಚುನಾವಣೆಯಲ್ಲಿ (1997) ಶೇಕಡಾ 50ಕ್ಕೂ ಹೆಚ್ಚು ಜನರು ಮತ ಚಲಾಯಿಸಿದ್ದರು. ಪ್ರಜಾಸತ್ತಾತ್ಮಕ ಮೌಲ್ಯಗಳ ಮೇಲೆ ಜನರಿಗೆ ಇರುವ ಭರವಸೆಯನ್ನು ಇದು ತೋರಿಸುತ್ತದೆ. ಅಂದಿನ ಪ್ರಧಾನ ಮಂತ್ರಿ ದೇವೇಗೌಡ ಕಾಶ್ಮೀರಕ್ಕೆ ಬೇಟಿಕೊಟ್ಟು ಆರ್ಥಿಕ ಅಭಿವೃದ್ಧಿಗೆ ಸಹಾಯನೀಡುವುದಾಗಿ ಘೋಷಿಸಿದರು.

ಆದರೆ ಬಿಜೆಪಿ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದ ನಂತರ ಈ ನೀತಿ ತಿರುಗು ಮುರುಗಾಯಿತು. ಚಾರಿತ್ರಿಕ ಹಿನ್ನೆಲೆಯಲ್ಲಿ ಕಾಶ್ಮೀರಕ್ಕೆ ಸಿಕ್ಕಿದ ವಿಶೇಷ ಸ್ಥಾನ ಮಾನ 370 ನೇ ಪರಿಚ್ಛೇದವನ್ನು ಕಿತ್ತುಹಾಕಬೇಕೆಂದು ದೇಶದಾದ್ಯಂತ ಚಳುವಳಿ ನಡೆಸಿದ ಬಿಜೆಪಿಗೆ, ಕಾಶ್ಮೀರ ಜನತೆಯ ಮೂಲಭೂತ ಸಮಸ್ಯೆಗಳನ್ನು ಗಣನೆಗೆ ತೆಗೆದುಕೊಳ್ಳಲು ಸಾಧ್ಯವಾಗಿಲ್ಲ. ಆರ್.ಎಸ್.ಎಸ್.ನ ಹಿಡಿತ ದಲ್ಲಿರುವ ಕೆಲವು ಸಂಘಟನೆಗಳು ಕಾಶ್ಮೀರವನ್ನು 3 ವಿಭಾಗಗಳನಾಗಿ ಮಾಡಬೇಕೆಂಬ ಸಲಹೆಯನ್ನು ನೀಡುತ್ತಿವೆ. ವಿಚ್ಛಿದ್ರಕಾರಿ ಸಂಘಟನೆಗಳಿಗೆ, ಪ್ರತ್ಯೇಕತಾವಾದಿಗಳಿಗೆ ಇದು ಕುಮ್ಮಕ್ಕು ನೀಡುತ್ತದೆ.

ಇನ್ನೊಂದೆಡೆಯಲ್ಲಿ ಎನ್.ಡಿ.ಎ. ಸರಕಾರದ ಭಾಗವಾಗಿರುವ ನ್ಯಾಷನಲ್ ಕಾನ್ಫರೆನ್ಸ್‌ನ ರಾಜ್ಯ ಸರಕಾರವು ಅಭಿವೃದ್ಧಿಯ ಕಡೆಗೆ ಗಮನ ನೀಡಲೇ ಇಲ್ಲ. ಇದರಿಂದ ಉಗ್ರಗಾಮಿ ಚಟುವಟಿಕೆಗಳಿಗೆ ಇನ್ನಷ್ಟು ಪ್ರಚೋದನೆ ನೀಡಿದಂತಾಯ್ತು. ಕಳೆದ ನವೆಂಬರ್‌ನಲ್ಲಿ ಏಕಪಕ್ಷೀಯವಾಗಿ ಕದನ ವಿರಾಮ ಘೋಷಿಸಿದ ಬಿಜೆಪಿ ಸರಕಾರ ಮುಂದೇನು ಮಾಡಬೇಕೆಂದು ತೋಚದೆ ಕದನ ವಿರಾಮವನ್ನು ಮುಂದಕ್ಕೆ ಹಾಕುತ್ತಾಹೋಯಿತು. ಈ ಕುರಿತು ವಿರೋಧ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸಲಿಲ್ಲ. ಇದೀಗ ಕದನ ವಿರಾಮ ಹಿಂತೆಗೆದುಕೊಂಡಿದೆ.


[illegible] ಇಲ್ಲದ ಕೆ.ಸಿ.ಪಂತ್

ಈ ಮಧ್ಯೆ ಉಗ್ರಗಾಮಿ ಮುಖಂಡರೊಂದಿಗೆ ಮಾತುಕತೆ ನಡೆಸಲು ಯೋಜನಾ ಆಯೋಗದ ಉಪಾಧ್ಯಕ್ಷರಾದ ಕೆ.ಸಿ. ಪಂತ್‌ರನ್ನು ನಿಯೋಜಿಸಲಾಗಿದೆ. ಆದರೆ ಅವರಿಗೆ ಯಾವ ಅಧಿಕಾರ ನೀಡಲಾಗಿದೆ. ಎಷ್ಟರ ಮಟ್ಟಿಗೆ ಮಾತುಕತೆ ನಡೆಸಬಹುದು ಎಂಬುದರ ಬಗ್ಗೆ ಯಾವುದೇ ಸ್ಪಷ್ಟನೆ ಇಲ್ಲ.

ಕಾಶ್ಮೀರಕ್ಕೆ ಸಾಕಷ್ಟು ಸ್ವಾಯತ್ತತೆ ನೀಡುವುದರ ಮೂಲಕ ಮಾತ್ರವೇ ಈ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯ. ಈ ಕುರಿತು ಪ್ರಜಾಪ್ರತಿನಿಧಿಗಳೊಂದಿಗೆ, ರಾಜಕೀಯ ಪಕ್ಷದ ಮುಖಂಡರುಗಳೊಂದಿಗೆ ಸಮಾಲೋಚಿಸಿ, ಒಮ್ಮತದ ತೀರ್ಮಾನಕ್ಕೆ ಬರುವುದು ಅಗತ್ಯ. ಇಲ್ಲವಾದಲ್ಲಿ ಅಮೇರಿಕಾದ ಕುತಂತ್ರಕ್ಕೆ ಬಲಿಯಾಗುವ ಸಾಧ್ಯತೆಯೂ ಹೆಚ್ಚು.

ಮತಾಂಧ ತಾಲಿಬಾನರ ಮತ್ತೊಂದು ಅಟ್ಟಹಾಸ



ಅಫಘಾನಿಸ್ತಾನದಲ್ಲಿ ವಾಸಿಸುವ ಅಲ್ಪಸಂಖ್ಯಾತ ಹಿಂದೂಗಳು ಎಂತಹ ಉಡುಪನ್ನು ತೊಡಬೇಕು ಎಂದು ನಿರ್ದೇಶಿಸುವ, ತಮ್ಮ ಮನೆಗಳ ಮೇಲೆ ನಿರ್ದಿಷ್ಟ ಹಳದಿ ಬಣ್ಣದ ಬಾವುಟವನ್ನು ಹಾರಿಸಬೇಕೆಂಬ 'ವಸ್ತ್ರ ಸಂಹಿತೆ'ಯನ್ನು ಹೇರಿರುವ ಆಡಳಿತಾರೂಢ ತಾಲಿಬಾನ್ ಬಣದ ಮತಾಂಧ ಕ್ರಮ ತೀವ್ರ ಖಂಡನೀಯ. ತನ್ನ ಕ್ರೂರ ಮುಸ್ಲಿಂ ಮೂಲಭೂತವಾದಕ್ಕೆ ಕುಖ್ಯಾತವಾದ ತಾಲಿಬಾನ್ ಆಡಳಿತ ಅಫಘಾನಿಸ್ತಾನದ ಮುಸಲ್ಮಾನೇತರ ಜನರ ಜೀವನದ ಮೇಲೆ ಒಪ್ಪಲಾಗದ ನಿರ್ಬಂಧಗಳನ್ನು ಹೇರಿ, ಬದುಕನ್ನು ಅಸಹನೀಯ ಗೊಳಿಸುತ್ತಿದೆ. ಕೋಮು ವಿಭಜನೆ ತರುತ್ತಿದೆ.

ಅಮೆರಿಕಾ ಆಡಳಿತ ತಾಲಿಬಾನ್‌ನ ಈ ಕ್ರಮವನ್ನು ಖಂಡಿಸಿದೆ! ಆದರೆ ಅಫಘಾನಿಸ್ತಾನದಲ್ಲಿ ಭಯೋತ್ಪಾದನೆ ಹಾಗೂ ತಾಲಿಬಾನ್ ಬಣಕ್ಕೆ ಕುಮ್ಮಕ್ಕು ನೀಡಿದ ಅಮೆರಿಕಾ ಈ ಕೃತ್ಯವನ್ನು ಖಂಡಿಸುವುದರ ಉದ್ದೇಶ ತನ್ನ ಪಾತಕಗಳನ್ನು ಮರೆಸಿಕೊಳ್ಳಲು ಭಾರತದ ಜನರ ಒಲವು ಗಳಿಸುವ ಅಪಾಯ ಮಾಡಿದಂತೆ ತೋರುತ್ತಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ, ತಾಲಿಬಾನ್ ಈ ಕ್ರಮದ ವಿರುದ್ಧ ಒತ್ತಡ, ಒತ್ತಾಯ ರೂಪಿಸಲು ಭಾರತ ಸರ್ಕಾರ ಕೂಡಲೇ ಪ್ರಯತ್ನ ಆರಂಭಿಸಬೇಕಾಗಿದೆ. ಭಾರತದೊಳಗೂ ಈ ತಾಲಿಬಾನ್‌ನ ಕೃತ್ಯಗಳನ್ನೇ ಬಳಸಿ ಜನರ ನಡುವೆ ಕೋಮು ದ್ವೇಷ ಹೆಚ್ಚಿಸುವ ತಾಲಿಬಾನ್‌ನ ಇನ್ನೊಂದು ಬಗೆಯ ಸೋದರರಾದ ಬಜರಂಗ ದಳ ಮುಂತಾದವರ ಯತ್ನಗಳ ಬಗ್ಗೆಯೂ ಜನ ಎಚ್ಚರವಿರಬೇಕು.

ಜಾಗತೀಕರಣಕ್ಕೆ ಸವಾಲೆಸೆದ ರೈತ ಕ

ಸಾಗಿ ಬಂದರು ರೈತರು, ಕೂಲಿಕಾರರು ರಾಜಧಾನಿಗೆ... ಸಾವಿರ ಸಾವಿರ... ಸಮೂಹವಾಗಿ. ತಮ್ಮ ಬದುಕಿನ ಬವಣೆಗಳ ಮೂಟೆ ಹೊತ್ತು...ಎಷ್ಟೆಲ್ಲಾ ತಲ್ಲಣ, ಆತ್ಮಹತ್ಯೆಗಳ ಆಕ್ರಂದನ ನಡೆದಿದ್ದರೂ ಕಿವುಡರಂತೆ, ಕುರುಡರಂತೆ ವಿದಾನಸೌಧ, ಪಾರ್ಲಿಮೆಂಟಿನೊಳಗೆ ಕುರ್ಚಿ ಹಿಡಿದೇ ಕೂತ ಆಳುವವರ ಕಿವಿಯಲ್ಲಿ ಎಚ್ಚರಿಕೆಯ ಜಾಗಟೆ ಹೊಡೆದು ಸಮರದ ಕಹಳೆ ಊದಲು ವಿಧಾನಸೌಧದತ್ತ ಬಂದರು ದುಡಿವ ಜನ. ರಾಜ್ಯಾದ್ಯಂತ ಹಲವು ಹಂತಗಳ ಹೋರಾಟ, ಜಾಥಾ ನಡೆಸಿ ಮುಂದೆ ಪ್ರಬಲ ಐಕ್ಯ ಚಳುವಳಿ ನಡೆಸಲು ನಿರ್ಧರಿಸಿದ ಮೇ 27 ರಂದಿನ ವಿಧಾನಸೌಧ ಚಲೋ ರ್‍ಯಾಲಿಯ ವರದಿ ನೀಡಿದಾರೆ ಬಳ್ಳಾರಿಯ ಪಿ.ಆರ್.ವೆಂಕಟೇಶ್

ಕಾಲ ಬಂದಿದೆ ಈಗ, ಕನಸುಗಳಲ್ಲಿ ಕನವರಿಸಿ, ಬಳಿಕ ಎಚ್ಚೆತ್ತವರ ಜೊತೆ, ಜೊತೆಯಾಗಿ ಸಾಗಲು ಮುಂದಕ್ಕೆ, ಮುಂದಕ್ಕೆ ಇನ್ನೂ.......

ಸಾಗಿಬಂದರು ಸಹಸ್ರಾರು ರೈತ ಕೂಲಿಕಾರರು ಬೆಂಗಳೂರು ನಗರಕ್ಕೆ. ವರ್ಣರಂಜಿತ ಬ್ಯಾನರ್‌ಗಳನ್ನು, ಕೆಂಬಾವುಟಗಳನ್ನು ಹಿಡಿದ ರೈತಕೂಲಿಕಾರರ ಬೃಹತ್ ಪ್ರತಿಭಟನಾ ಮೆರವಣಿಗೆ ನಗರದ ಹೆದ್ದಾರಿಗಳಲ್ಲಿ ಸಂಚರಿಸಿತು. ರೈತ - ಕಾರ್ಮಿಕರ ಐಕ್ಯತೆಯ ಸಂಕೇತವಾಗಿ ಬೃಹತ್ ಜಾತಾಕ್ಕೆ ಬೆಂಗಳೂರಿನ ಸಿಐಟಿಯು ಕಾರ್ಮಿಕ ಬಂಧುಗಳು ಮಹಿಳೆ ವಿದ್ಯಾರ್ಥಿ ಯುವಜನ ಸಂಘಟನೆಗಳು ಸುರಿಸಿದ ಸೌಹಾರ್ದ ಹೂಮಳೆ ಯೊಳಗೆ ಹುರುಪುಗೊಂಡು ಬೃಹತ್ ಜಾಥಾ ವಿಧಾನಸೌದದ ಹತ್ತಿರವಿರುವ ಬಸವೇಶ್ವರ ವೃತ್ತದತ್ತ ಮುನ್ನುಗ್ಗಿತು. ಬೆಂಗಳೂರಿನ ಹೃದಯಕ್ಕೆ ಮಿಂಚು ಸಂಚಾರ ನೀಡಿತು. ನಗರದ ಜನ ಮಹಡಿಏರಿ ರಸ್ತೆಗಳ ಇಕ್ಕೆಲಗಳಲ್ಲಿ ನೆರದು ಬೆರಗಾಗಿ ನೋಡಿದರು. ಓಟುಗಿಟ್ಟಿಸಿ ಖುರ್ಚಿಯಲ್ಲೇ ಕುಸಿದ ಆಳುವ ವರ್ಗದ ಅಧಿಪತಿಗಳಿಗೆ ಬೃಹತ್ ರ್‍ಯಾಲಿ ಸವಾಲೆಸೆಯಿತು. 'ನಿಮಗೆ ವಿದೇಶಿ ಕಂಪನಿಗಳು ಎಸೆದ ಎಂಜಲು ಬೇಕೆ, ದೇಶಕ್ಕೆ ಅನ್ನ ನೀಡುವ, ಮಾನ ಮುಚ್ಚುವ ರೈತ-ಕೂಲಿಕಾರರ ಹಿತಬೇಕೆ? ನಿಮ್ಮ ದಾರಿಯಾವುದು? ಬೇಗನೇ ಸ್ಪಷ್ಟವಾಗಬೇಕು.

ಹೇಳಿ ಇದಕ್ಕೆ ಮುನ್ನ ಕರ್ನಾಟಕ ಪ್ರಾಂತ ರೈತಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ಜಂಟಿಯಾಗಿ, ರಾಜ್ಯದ ರೈತ, ಕೂಲಿಕಾರರ ಹಿತರಕ್ಷಣೆಗಾಗಿ ಅನೇಕ ಸಮಾವೇಶ-ಪ್ರತಿಭಟನೆಗಳನ್ನು ನಡೆಸಿ, 3ನೇ ಹಂತದ ಹೋರಾಟವಾಗಿ ಈ ಬೃಹತ್ ರ್‍ಯಾಲಿಯನ್ನು ಸಂಘಟಿಸಿದ್ದವು. ಬಹುರಾಷ್ಟ್ರೀಯ ಕಂಪನಿಗಳ ಹಿತರಕ್ಷಣೆಗಾಗಿಯೇ ಹುಟ್ಟಿಕೊಂಡ ಐ.ಎಂ.ಎಫ್. (ವಿಶ್ವಹಣಕಾಸು ಸಂಸ್ಥೆ) ವಿಶ್ವ ಬ್ಯಾಂಕ್ ಹಾಗೂ ವಿಶ್ವ ವ್ಯಾಪಾರಿ ಸಂಘಟನೆಗಳು ಹಾಕಿದ ಗೆರೆದಾಟದ ಕೇಂದ್ರ-ರಾಜ್ಯ ಸರಕಾರಗಳು, ವಿದೇಶಿ ದಣಿಗಳ ಹಕ್ಕನ್ನು ದೇಶದ ಜನತೆಯ ಮೇಲೆ ಹೇರಿ ಕೃಷಿಯನ್ನು, ಕೃಷಿಕರನ್ನು ಮೂಲೆಗುಂಪು ಮಾಡುವ ಹುನ್ನಾರವನ್ನು ಎಳೆಎಳೆಯಾಗಿ ತಿಳಿಸಲು ಎರಡು ಸಂಘಗಳ ನೇತೃತ್ವದಲ್ಲಿ ಜೀಪ್ ಜಾಥಾವನ್ನು ಹಮ್ಮಿಕೊಳ್ಳಲಾಯಿತು.

12ನೇ ಶತಮಾನದ ಕಾಯಕಜೀವಿಗಳ ಚಳುವಳಿಯ ಕೇಂದ್ರವಾದ ಬಸವಕಲ್ಯಾಣದಿಂದ ಆರಂಭಗೊಂಡ ಪ್ರಚಾರಜಾಥಾ ರಾಜ್ಯಾದ್ಯಂತ ಜಾಗೃತಿಯ ಕಿಡಿಯನ್ನು ರೈತರ ಹೃದಯಕ್ಕೆ ಹೊತ್ತಿಸಿ ದಿ. 29 ಮೇ 2001 ರಂದು ನಡೆದ ರೈತ-ಕೂಲಿಕಾರರ ಬೃಹತ್ ಜಾಥಾದಲ್ಲಿ ಸಮ್ಮಿಳನಗೊಂಡಿತು. ಈ ಜಾಥಾವು ಸಿರಾ ತಾಲೂಕಿನ ಶೇಂಗಾ ಬೆಳಗಾರರು ನಡೆಸಿದ ಹೋರಾಟದಲ್ಲಿ ಹುತಾತ್ಮರಾದ ರೈತರ ಹುತಾತ್ಮಜ್ಯೋತಿ ಹೊತ್ತು ತಂದಿತ್ತು. ಜ್ಯೋತಿಹಿಡಿದ ಕಾಂ। ಚಂದ್ರಪ್ಪ ಹೊಸಕೆರಾರವರಿಂದ ಅಖಿಲ



ಹಸಿರ ಹಿಂದಕ್ಕೆ ಸಾಗಿ ಬರುತೇವಾ ನಾವ್ ಮುಂದಕ್ಕ

ಭಾರತ ಕಿಸಾನ್‌ಸಭಾದ ರಾಷ್ಟ್ರನಾಯಕರು ಹಾಗೂ ರಾಜ್ಯದ ಮುಖಂಡರು ಹೋರಾಟದ ಆತ್ಮಗಳ ಜೋತಿಯನ್ನು ಸ್ವಾಗತಿಸಿದರು.

ಐಕ್ಯಚಳುವಳಿಕೆ ಕರೆ

ಇತ್ತೀಚಿಗೆ ರೈತರ ಬಗ್ಗೆ ಭಾರಿ ಕಾಳಜಿವಹಿಸಿ ಮಾತನಾಡುತ್ತಿರುವ ರಾಜ್ಯದ ಮುಖ್ಯಮಂತ್ರಿ ಮಾನ್ಯ ಎಸ್.ಎಂ. ಕೃಷ್ಣಾ ಎಲ್ಲಿ ಕಾಣೆಯಾಗಿದ್ದಾರೋ, ಕಾಣೆವು! ರೈತ ಕೂಲಿಕಾರರ ಅಹವಾಲು ಕೇಳಲು ಅವರಿಗಿಲ್ಲ ಬಿಡುವು. ವಿದೇಶಿ ಕಂಪನಿಗಳ ವ್ಯವಹಾರ ಕುದುರಿಸುವುದೇ ಅವರ ಮುಖ್ಯಕಸುಬಾಗಿದೆ. ಸಿರಾದಲ್ಲಿ ಶೇಂಗಾ ಬೆಳೆಗಾರರು ಶಿರ ಕಳಕೊಂಡರು, ಗುಲ್ಬರ್ಗಾದಲ್ಲಿ ತೊಗರಿಬೆಳೆದವರು ಸತ್ತರು, ರಾಯಚೂರು, ಬಳ್ಳಾರಿಗಳಲ್ಲಿ ಭತ್ತ ಬೆಳೆದವರು ಬತ್ತಿಹೋದರು. ಕೋಲಾರದಲ್ಲಿ ಹಾಲು ಕೊಟ್ಟವರು ಹಾಳಾದರು ಒಂದೇ ಎರಡೇ! ಬೆಳೆ ಬೆಳೆದ ರೈತರ ಬದುಕಿನಲ್ಲಿ ಸರಣಿ ಸಾವು ಬೆಳೆದವು. ಇದರ ಬಗ್ಗೆ ಕಿಂಚಿತ್ತೂ ಚಿಂತೆಯಿಲ್ಲ ನಮ್ಮ ಸಿಂಗಾಪುರದ ಹೈಟೆಕ್ ಕೃಷ್ಣರಿಗೆ.

ಬಸವೇಶ್ವರ ಚೌಕದಲ್ಲಿ ವ್ಯವಸ್ತೆಗೊಳಿಸಿದ್ದ ಬಹಿರಂಗ ವೇದಿಕೆಯ ಮೇಲೆ ಪ್ರಾಂತ ರೈತಸಂಘದ ಮುಖಂಡರು ಹಾಗೂ ಹಾಲು ಉತ್ಪಾದಕರ ಸಂಘದ ಮುಖಂಡರಾದ ವೆಂಕಟಾಚಲಯ್ಯನವರು ಎಲ್ಲಾ ಮುಖಂಡರನ್ನು ಹಾರ್ದಿಕವಾಗಿ ಸ್ವಾಗತಿಸಿದರು.

ವೇದಿಕೆಯ ಮೇಲೆ ಅಖಿಲ ಭಾರತ ಕಿಸಾನ್ ಸಭಾದ ಮುಖಂಡರಾದ ಎಸ್.ವರದರಾಜನ್ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ. ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ಜಿ.ಎನ್. ನಾಗರಾಜ್ ಹಾಗೂ ಸಿಐಟಿಯುನ ರಾಜ್ಯ ಮುಖಂಡರಾದ ಎಸ್. ಸೂರ್ಯನಾರಾಯಣರಾವ್ ಮಾಜಿ ಶಾಸಕರು, ರೈತ ಸಂಘದ ಉಪಾಧ್ಯಕ್ಷರಾದ ಜಿ.ವಿ. ಶ್ರೀರಾಮರೆಡ್ಡಿ ಪ್ರಧಾನಕಾರ್ಯದರ್ಶಿಗಳಾದ ಜಿ.ಸಿ. ಬಯ್ಯಾರೆಡ್ಡಿ, ಎಸ್.ಜಗನ್ನಾಥ್ ಹಾಗೂ ಕೂಲಿಕಾರ ಸಂಘದ ರಾಜ್ಯ ಉಪಾಧ್ಯಕ್ಷರಾದ ನಿತ್ಯಾನಂದ ಸ್ವಾಮಿಯವರು ಅಖಿಲ ಭಾರತಕಿಸಾನ್ ಸಭಾ (ಅಜಯಭವನ)ದ ಮುಖಂಡರಾದ ಗೋಪಾಲ್ ಉಪಸ್ಥಿತರಿದ್ದರು. ಕೂಲಿಕಾರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಕಾಂ। ಚಂದ್ರಪ್ಪಹೊಸ್ಕೆರಾರವರ ನಿರ್ವಹಣೆ ಯೊಂದಿಗೆ ಸಭೆ ಪ್ರಾರಂಭಗೊಂಡಿತು.


ಶ್ರೀರಾಮರೆಡ್ಡಿಯವರು ಮಾತನಾಡುತ್ತ ಪ್ರಧಾನಿ ವಾಜಪೇಯಿಯವರ ದ್ವಿಮುಖ ನೀತಿಯನ್ನು ತರಾಟೆಗೆ ತೆಗೆದುಕೊಂಡರು. "ಗ್ಯಾಟ್ ಒಪ್ಪಂದಕ್ಕೆ ಸಹಿ ಮಾಡಿದ್ದು ಕಾಂಗ್ರೆಸ್ ಆಳ್ವಿಕೆಯಲ್ಲಿ ಎನ್ನುವ ವಾಜಪೇಯಿ ಆ ಸಂಧರ್ಭದಲ್ಲಿ ವಿರೋಧ ವ್ಯಕ್ತಪಡಿಸಿದರು. ಆಗ ವಿರೋಧಿಸಿದ ವಾಜಪೇಯಿ ಅಧಿಕಾರಕ್ಕೆ ಬಂದ ನಂತರ ಅದೇ ಒಪ್ಪಂದವನ್ನು ತ್ವರಿತವಾಗಿ ಜಾರಿಗೆ ತರುತ್ತಿಲ್ಲವೇಕೆ? ನೀವು ದೇಶದ್ರೋಹದ ಕೆಲಸ ಮಾಡಿದ್ದೀರಿ" ಎಂದು ಖಂಡಿಸಿದರು. ಅವರು ಮಾತ ನಾಡುತ್ತಾ ರಾಜ್ಯ ಸರಕಾರದ ವಿದ್ಯುತ್ ಖಾಸಗೀಕರಣವನ್ನು ಬಯಲಿಗೆಳೆಯುತ್ತಾ "ಮಹಾರಾಷ್ಟ್ರ ಸರಕಾರ ಎಂ.ಇ.ಬಿ.ಯನ್ನು ಮಹಾರಾಷ್ಟ್ರ ವಿದ್ಯುತ್ ಮಂಡಳಿ, ಅಮೇರಿಕಾದ ಎನ್ರಾನ್ ಕಂಪನಿಗೆ ಕೊಟ್ಟ ಕಾರಣ ವಿದ್ಯುತ್ ಬಳಕೆದಾರರು ಯುನಿಟ್ಟಿಗೆ 4.60 ದರ ತೆರಬೇಕಾಗಿದೆ. 1800 ಕೋ.ರೂ. ಬಾಕಿಯಾಗಿ ಎಂಇಬಿ ದಿವಾಳಿಯಾಗಿದೆ. ಮುಂದಿನ ದಿನಗಳಲ್ಲಿ ವಿದ್ಯುತ್ ಇದ್ದರೂ ಆರಾಜ್ಯದ ಜನತೆ ವಿದ್ಯುತ್ ಅಭಾವ ಎದುರಿಸಬೇಕಾಗುತ್ತದೆ. ಈ ಸತ್ಯ ಅನುಭವ ನಮ್ಮ ಕಣ್ಣೆದುರಿಗಿದ್ದರು, ಕರ್ನಾಟಕ ಸರಕಾರ ಕಣ್ಣುಮುಚ್ಚಿ ವಿದ್ಯುತ್ತನ್ನು ಖಾಸಗಿಯವರಿಗೆ ಒಪ್ಪಿಸಲುಹೊರಟಿದೆ. ಇದರಿಂದಾಗಿ ಯೋಜನಾ ಆಯೋಗ ತಿಳಿಸಿದಂತೆ ಕರ್ನಾಟಕದ ವಿದ್ಯುತ್ ಬಳಕೆದಾರರು, ಪ್ರತಿಯುನಿಟ್ಟಿಗೆ 7.60 ರೂ. ತೆರಬೇಕಾಗುತ್ತದೆ. ಹೀಗಾಗಿ ಮುಂದಿನ ದಿನಗಳಲ್ಲಿ ವಿದ್ಯುತ್ ಸಮಸ್ಯೆ ತುಂಬಾ ಗಂಭೀರ ಸ್ವರೂಪ ತಾಳುತ್ತದೆ ಎಂದು ಸರ್ಕಾರವನ್ನು ಎಚ್ಚರಿಸಿದರು. ಮತ್ತು 80 ಸಾವಿರ ಕೋಟಿ ಆಸ್ತಿಹೊಂದಿರುವ ಕೆ.ಪಿ.ಟಿ.ಸಿ.ಎಲ್. ನ್ನು ಖಾಸಗಿಯವರಿಗೆ ದುಗ್ಗಾಣಿ ಬೆಲೆಗೆ ಮಾರುವ ಉದ್ದೇಶಹೊಂದಿರುವ


ಲಮಾಣಿ ...ದಿಂದಲೂ ಬಂದ ಹೋರಾಟಗಾರರು

ಕುತಂತ್ರವೇನು? ಎಂದು ಸರಕಾರವನ್ನು ಪ್ರಶ್ನಿಸಿದರು.

ಮರೆಯಾಗುತ್ತಿರುವ ಪಡಿತರ ವ್ಯವಸ್ಥೆ ಬದಲಾದ ಕಾರ್ಡಿನ ಬಣ್ಣ

ಇದೇ ರೀತಿ ಪಡಿತರ ವ್ಯವಸ್ಥೆಯ ಬಗ್ಗೆ ಮಾತನಾಡಿದ ಪ್ರಾಂತ ಕೃಷಿ ಕೂಲಿಕಾರರ ಸಂಘದರಾಜ್ಯ ಅಧ್ಯಕ್ಷರಾದ ಜಿ.ಎನ್.ನಾಗರಾಜ್ ರವರು ಕಾರ್ಡಿನ ಬಣ್ಣ ಬದಲಾಯಿಸಿತೇ ಹೊರತು ಹಳಸಲು ಅಕ್ಕಿ ಹಾಗೇ ವಿತರಣೆಯಾಗುತ್ತಿದೆ. ಅದನ್ನಾದರೂ ಯಾಕೆ ಕೊಡಬೇಕು, ಬಡವರಿಗೆ ಪಡಿತರ ವ್ಯವಸ್ಥೆಯೇ ಇರಬಾರದು ಎನ್ನುವುದು ಕೇಂದ್ರ-ರಾಜ್ಯ ಸರಕಾರಗಳ ಚಿಂತೆ. ಈ ಚಿಂತೆಯ ಚಿತೆಯಲ್ಲಿ ಬಡ ರೈತ ಕೂಲಿಕಾರರು ಬಲಿಯಾಗಿದ್ದಾರೆ. ಏನೆಲ್ಲಾ ನಾಟಕಗಳನ್ನು ಆಡಿ, ರಾಜ್ಯದಲ್ಲಿ 69,000 ಹಸಿರುಕಾರ್ಡುದಾರರಲ್ಲಿ ಕೇವಲ 20,000 ಜನರಿಗೆ ಮಾತ್ರ ಹಳದಿಕಾರ್ಡ್ ಗಳನ್ನು ನೀಡಿ 49000 ಬಡವರಿಗೆ ರಾಜ್ಯ ಸರಕಾರ ಮೋಸವೆಸಗಿದೆ ಎಂದರು. ಪಡಿತರ ವ್ಯವಸ್ಥೆಯನ್ನು ನಾಶ ಮಾಡಲು ಸರಕಾರಗಳು ಕಾರ್ಡುಗಳ ಕಡಿತ, ಪಡಿತರ ಧಾನ್ಯಗಳ ಬೆಲೆ ಏರಿಕೆ, ಆಹಾರ ಧಾನ್ಯಗಳ ಕೊರತೆ ಎಂಬ ನೆಪಗಳನ್ನು ಮುಂದು ಮಾಡುತ್ತಿವೆ. 5 ಕೋಟಿ ಟನ್ ಅಕ್ಕಿ, ಗೋಧಿ ಸರಕಾರದ



ಹೊಣೆಗೇಡಿ ಸರ್ಕಾರಗಳು ದುಡಿಯುವ ಜನರಿಗೆ ದುರಂತ ನೀಡಿವೆ

ವರದರಾಜನ್

ಅಖಿಲಭಾರತ ಕಿಸಾನ್ ಸಭಾದ ಮುಖಂಡ ರಾದ ಎಸ್. ವರದರಾಜನ್‌ರವರು ಮಾತ ನಾಡುತ್ತ ದೇಶದಲ್ಲಿ ರೈತರು ಬೆಳೆದ ಬೆಳೆಗಳಿಗೆ ಬೆಲೆ ಕುಸಿದು, ಕೃಷಿ ಹಾಳಾಗಿ, ರೈತರು ದಿವಾಳಿ ಯಾಗಿ ಅನ್ನನೀಡುವ ರೈತರು ಆತ್ಮಹತ್ಯೆಗಿಳಿದದ್ದು ಅಲ್ಲದೆ. ತಮ್ಮದೇಹದ ಅಂಗಾಂಗಗಳನ್ನು (ಕಿಡ್ನಿ) ಸಾಲ ತೀರಿಸಲು ಮಾರುತ್ತಿರುವುದು ಶೋಚನೀಯ ಸಂಗತಿಯಾಗಿದೆ. 1991ರ ಕಾಂಗ್ರೆಸ್ ಆಳ್ವಿಕೆಯಲ್ಲಿ ಗ್ಯಾಟ್ ಒಪ್ಪಂದಕ್ಕೆ ಸಹಿಮಾಡಿದ್ದು. ಒಪ್ಪಂದವನ್ನು ಬಿಜೆಪಿ ನೇತೃತ್ವದ ಕೇಂದ್ರ ಎನ್.ಡಿ.ಎ. ಸರಕಾರ ತ್ವರಿತಗತಿಯಲ್ಲಿ ಜಾರಿಮಾಡುತ್ತಿರುವ ಪರಿಣಾಮಗಳೇ ಈ ಘಟನೆಗಳು ಇದನ್ನು ಮುಚ್ಚಿಡಲು ರೈತರು ಹೆಚ್ಚು ಬೆಳೆದಿದ್ದಾರೆ. ಆದ ಕಾರಣ ರೈತರ ಬೆಲೆಗಳ ಬೆಲೆ ಕುಸಿದಿದೆ ಎಂದು ಸರಕಾರ ಜಾಣತನದ ಸುಳ್ಳುಗಳನ್ನು ಹೇಳುತ್ತಿದೆ.


ಆದರೆ ವಿಶ್ವ ಅಭಿವೃದ್ಧಿ ಸಂಸ್ಥೆಯು ಭಾರತದಲ್ಲಿ ಕೃಷಿ ಉತ್ಪನ್ನಗಳು ಕಡಿಮೆಯಾಗುತ್ತಿವೆ ಎಂದು ಹೇಳಿದೆ. ದೇಶದಲ್ಲಿ ರೈತರ ಬಿಕ್ಕಟ್ಟು ದಿನೇ ದಿನೇ ಆಳಗೊಂಡು ಗಂಭೀರಸ್ಥಿತಿ ತಲುಪುತ್ತಿದೆ. ಹಾಗಿದ್ದಾಗ್ಯೂ ಬಿಜೆಪಿ ನೇತೃತ್ವದ ಎನ್.ಡಿ.ಎ ಸರಕಾರ ಮುಕ್ತ ಆಮದು ನೀತಿಯನ್ನು ಮುಂದುವರೆಸಲು ಹೇಳಿದೆ. ಜನವಿರೋಧಿ ನೀತಿಯೇ ಬಿಜೆಪಿ ಕಾರ್ಯಕ್ರಮ. ಬಿಜೆಪಿಯೇತರ ಕರ್ನಾಟಕ ಆಂಧ್ರಾ ಸರಕಾರ ಗಳಲ್ಲೂ ಇದೇ ಸ್ಥಿತಿಯಿದೆ. ಕೃಷಿನೀತಿಯ ವಿಚಾರಗಳಲ್ಲಿ ಎರಡೂ ಸರಕಾರಗಳು ಒಂದೇ ಆಗಿವೆ. ಎಂದರು ಅವರು ಮುಂದುವರಿಸಿ,"100 ಕೋಟಿ ಜನರಿರುವ ಭಾರತ ಜಗತ್ತಿನಲ್ಲೇ 2ನೇ ದೊಡ್ಡ ಮಾರುಕಟ್ಟೆಯಾಗಿದೆ. ರೈತರ ಉತ್ಪನ್ನಗಳನ್ನು ಇಲ್ಲೇ ಮಾರುವ ಸಾಧ್ಯತೆಗಳಿವೆ. ಆದರೆ ರೈತರ ಉತ್ಪನ್ನಗಳನ್ನು ರಫ್ತು ಮಾಡುತ್ತೇವೆ ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ. ಜಗತ್ತಿನ ಮಾರುಕಟ್ಟೆಯೊಟ್ಟಿಗೆ ಸ್ಪರ್ಧಿಸುತ್ತೇನೆ ಎಂದು ಹೇಳುವ ಸರಕಾರ ದೇಶದ ಮಾರುಕಟ್ಟೆಯ ಬಗ್ಗೆ ಏಕೆ ಮಾತುನಾಡುತ್ತಿಲ್ಲ? ಜನರಲ್ಲಿ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿ ದೇಶದ ಮಾರುಕಟ್ಟೆಯನ್ನು ಭದ್ರ ಪಡಿಸಲು ಏನು ಕ್ರಮಗಳಿವೆ ಸರಕಾರದಲ್ಲಿ? ಈ ಎಲ್ಲಾ ಹೊಣೆಗಳನ್ನು ಮರೆತಿರುವ ಹೊಣೆಗೇಡಿ ಸರಕಾರ ದುಡಿಯುವ ಜನರಿಗೆ ದುರಂತವನ್ನು ಕೊಡದೆ ಇನ್ನೇನನ್ನು ಕೊಟ್ಟೀತು? ಆದ್ದರಿಂದ ಪ್ರಬಲ ಆಂದೋಲನಗಳು ಅನಿವಾರ್ಯ. ಇವತ್ತಿನ ರ್‍ಯಾಲಿ ಮುಂದಿನ ಹೋರಾಟಕ್ಕೆ ಮೈಲಿಗಲ್ಲಾಗಲಿ" ಎಂದು ಆಶಯ ವ್ಯಕ್ತಪಡಿಸಿದರು. ಕಾರ್ಮಿಕರ ಬೆಂಬಲ ವ್ಯಕ್ತಪಡಿಸಿ. ಮಾತನಾಡಿದ ಕಾಂ.ಎಸ್. ಸೂರ್ಯನಾರಾಯಣ ರಾವ್‌ರವರು, "ಕಾಂಗ್ರೆಸ್ಸಿಗೂ ಬಿ.ಜೆ.ಪಿ ಕೃಷಿ ನೀತಿಗಳಿಗೂ 4 ರಾಜ್ಯಗಳ ಚುನಾವಣೆಗಳಲ್ಲಿ ಜನ ಉತ್ತರ ಕೊಟ್ಟಿದ್ದಾರೆ. ಈ ಉತ್ತರದಿಂದ ರಾಜ್ಯ ಹಾಗೂ ಕೇಂದ್ರ ಸರಕಾರಗಳು ಎಚ್ಚರಗೊಳ್ಳಬೇಕು. ಇವರಿಗೆ ಜನರ ಬಗ್ಗೆ ಕಾಳಜಿ ಯಿಲ್ಲ. ಭ್ರಷ್ಟಾಚಾರ ವನ್ನು ಹೇಗೆ ಮಾಡುವುದು ಎಂಬ ಬಗ್ಗೆ ಕಾಳಜಿಯಿದೆ" ಎಂದು ಸರಕಾರವನ್ನು ತರಾಟೆಗೆ ತೆಗೆದುಕೊಂಡರು. "ರಾಜ್ಯದಲ್ಲಿ ರೈತ ಕಾರ್ಮಿಕರ ಸಖ್ಯತೆ ಬಲಗೊಂಡು ಪ್ರಬಲ ರೈತ ಚಳುವಳಿ ಹೊರಹೊಮ್ಮಬೇಕು" ಎಂದರು.

...ಲಿಕಾರರ ಬೃಹತ್ ರ್ಯಾಲಿ

ಗೋದಾಮಿನಲ್ಲಿದ್ದು ಹೆಗ್ಗಣಗಳ ಪಾಲಾಗುತ್ತಿದೆ. ಕೇಂದ್ರ ಸರಕಾರ ಹೆಗ್ಗಣಗಳನ್ನು ರಕ್ಷಿಸಿದರೆ, ರಾಜ್ಯ ಸರಕಾರ ಇಲಿಗಳನ್ನು ರಕ್ಷಿಸುತ್ತಿದೆ. ಇವು ಹೆಗ್ಗಣ, ಇಲಿಗಳ ಪಕ್ಷಗಳು ಎಂದು ವ್ಯಂಗ್ಯವಾಡಿದರು.

ನಂತರ ಸಾಲದ ನೀತಿಯು ಬಗ್ಗೆ ಮಾತನಾಡಿದರು.

ಅಧ್ಯಕ್ಷರಾದ ಮಾರುತಿ ಮಾನ್ಪಡೆಯವರು ರಾಜ್ಯದಲ್ಲಿ ರೈತರು ಎಚ್ಚರಗೊಳ್ಳುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ರೈತ ಕೂಲಿಕಾರರ ಚಳುವಳಿಗೆ ಐತಿಹಾಸಿಕ ಮಹತ್ವವಿದೆ. ರಾಜಕೀಯ ಚಿತ್ರವನ್ನೇ ಬದಲು ಮಾಡಿದ ಶಕ್ತಿ ರೈತಕೂಲಿಕಾರರ ಚಳುವಳಿಗಿದೆ.



ಉಪದೇಶಕ್ಕೆ ನಿಂತ ಕೃಷ್ಣಪ್ಪ

ಜನರಿಂದ ತಪ್ಪಿಸಿಕೊಳ್ಳಲು ಹೋಗಿ ಸಿಕ್ಕಿಬಿದ್ದ ಜಾಣ ರಾಜ್ಯಮಂತ್ರಿ

ನೊಂದವರನ್ನು ಪ್ರತಿನಿಧಿಸಿ ಆಡುವ ಮುಖಂಡರ ಮಾತುಗಳು ಎಲ್ಲರೆದೆಯಲ್ಲಿ ಮಾರ್ದನಿಗೊಳ್ಳುತ್ತಿರುವಾಗ, ಮನವಿ ಸ್ವೀಕರಿಸಲು ರಾಜ್ಯ ಸರಕಾರದ ಪಶುಸಂಗೋಪನಾ ಸಚಿವರಾದ ಮಾನ್ಯ ಕೃಷ್ಣಪ್ಪನವರು ವೇದಿಕೆಗೆ ಆಗಮಿಸಿದರು. ಸಭಿಕರ ಕಿವಿಗಳು ಚುರುಕಾಗಿ ಕಣ್ಣಗಲಿಸಿ ಮಂತ್ರಿಗಳ ಬಾಯನ್ನೇ ಗಮನಿಸಿದರು. ಮಂತ್ರಿಮಹಾಶಯರ ಬಾಯಿಂದ ಜಾರಬಹುದೇ ಮಮಕಾರದ ಮಾತು, ನಿರೀಕ್ಷೆ! ಜಾರಲಿಲ್ಲ. ಸರಾಗವಾಗೇ ಸುರಿಯಿತು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಜಾಣ ಉಪದೇಶ.

"ನಿಮ್ಮ ಸಮಸ್ಯೆಗಳಿಗೆ ನಾವು ಕಾರಣರಲ್ಲ, ಅವರು, ಕೇಂದ್ರ ಸರಕಾರದ ಕಣ್ಣೂ ತೆರೆಸಲು ನಾವು ಏನೆಲ್ಲಾ ಹೆಣಗಿದ್ದೇವೆ. ಅವರು ಭಂಡರು ಎಷ್ಟು ಹೇಳಿದರೂ ಕೇಳುತ್ತಿಲ್ಲ." ಈ ಶಂಡರ ಉಪದೇಶ! ಹೀಗಾಗಿ 'ಆ' ಭಂಡರು 'ಈ' ಶಂಡರು ಸೇರಿ ಭ್ರಷ್ಟರಾಜಕೀಯ ನಡೆಸಿ ದೇಶವನ್ನು ದುಡಿಯುವ ಜನರನ್ನು, ಸ್ವಾತಂತ್ರ್ಯವನ್ನು, ಸ್ವಾಭಿಮಾನ ಸಾರ್ವಭೌಮತ್ವವನ್ನು ವಿದೇಶಿ ಕಂಪನಿಗಳಿಗೆ ಅಡಾಯಿಟ್ಟು ತುಂಬಾ ಚುರುಕಾಗಿ ದೇಶಭ್ರಷ್ಟರಾಗಿದ್ದಾರೆ. ಇವರ ಜಾಣ ಉಪದೇಶಕ್ಕೆ ರೈತ-ಕೂಲಿಕಾರರು ಸುಮ್ಮನಿರಲಿಲ್ಲ, ಹಳ್ಳಿಗಳಿಂದ ರೈಲಿನಲ್ಲಿ ನಿದ್ದೆಗೆಟ್ಟು ಇಲ್ಲಿಗೆ ಬಂದಿದ್ದೇವೆ. ಬೆಂಗಳೂರಿನ ಉರಿಬಿಸಿಲಿನಲ್ಲಿ ನಡೆದದ್ದು, ನಿಮ್ಮನ್ನು ಎಚ್ಚರಿಸಲು ಘೋಷಣೆ ಕೂಗಿದ್ದು, ನಿಮ್ಮ ಉಪದೇಶ ಕೇಳಲು ಅಲ್ಲ ಸ್ವಾಮಿ; ನೀವು ನಮ್ಮ ಕೃಷಿಗೆ ಬದುಕಿಗೆ, ಕೆಲಸಕ್ಕೆ ಮದ್ದು ಯಾವುದು ಮದ್ದು ಹೇಳಿ? ನಮಗಂಟಿದರೋಗ ನಿಮ್ಮನ್ನೂ ಮುಗಿಸುತ್ತದೆ! ಬೇಡಿಕೆ ಬಗ್ಗೆ ಮಾತನಾಡಿ ಸ್ವಾಮಿ. ಎಂದು ಆಗ್ರಹಿಸಿದರು. ಹೇಳಲಾರದ ಮಂತ್ರಿಗಳು ಮುಖಂಡರೊಟ್ಟಿಗೆ ಚರ್ಚಿಸುವುದಾಗಿ ಹೇಳಿ ತೊಲಗಿದರು. ರೈತ ಕೂಲಿಕಾರರ ಸಾಲನೀತಿ ಆಮದು ನೀತಿ, ಬೆಲೆ ನೀತಿ, ವಿದ್ಯುತ್, ವಸತಿ, ಪಡಿತರ ವ್ಯವಸ್ಥೆಗಳ ಬಗ್ಗೆ ಸಂಪೂರ್ಣ ವಿವರಣೆಯ ಮಹಾಮನವಿಯನ್ನು ಪ್ರಾಂತ ರೈತ ಸಂಘದ, ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಜಿ.ಸಿ. ಬಯ್ಯಾರೆಡ್ಡಿ ಮಂತ್ರಿಗಳಿಗೆ ಅರ್ಪಿಸಿದರು.

ಸಚಿವರೊಂದಿಗೆ ಚಕಮಕಿಯ ಕ್ಷಣಗಳ ನಂತರ ಮತ್ತೆ ಸಭಿಕರ ಕಿವಿಗಳು ಮುಖಂಡರ ಮಾತಿನತ್ತ ಹೊರಳಿದವು. ಸಿ.ಪಿ.ಐ.(ಎಂ) ಮಾಜಿ ಶಾಸಕ ಹಾಗೂ ಪ್ರಾಂತ ರೈತ ಸಂಘದ ಉಪಾಧ್ಯಕ್ಷರಾದ ಜಿ.ವಿ. ಶ್ರೀರಾಮರೆಡ್ಡಿಯವರು, "ಸಂಪುಟ ದರ್ಜೆಯ ಸಚಿವರು ರೈತ ಕೂಲಿಕಾರರ ಮಹಾಮನವಿಗೆ ಕೊಟ್ಟ ಉತ್ತರ ಕನಿಷ್ಟ ಪರಿಜ್ಞಾನವನ್ನು ಹೊಂದಿಲ್ಲ. ಹಸೀ ಸುಳ್ಳುಗಳನ್ನು ಹೇಳುವ ಮೂಲಕ ತಮ್ಮ ಹೊಣೆಗೇಡಿತನವನ್ನು ಒಪ್ಪಿಕೊಂಡಿದ್ದಾರೆ." ಎಂದು ಟೀಕಿಸಿದರು.

ಜಿ.ಸಿ.ಬಯ್ಯಾರೆಡ್ಡಿ ಸಭಿಕರ ಗಮನ ಸೆಳೆದರು. ರೈತರಿಗೆ ಅನುಕೂಲವಾಗುವ ಸಾಲ ನೀತಿಯನ್ನು ಸರಕಾರಗಳು ಜಾರಿ ತರುವಲ್ಲಿ ವಿಫಲವಾಗಿವೆ. ರೈತರಿಗೆ ಕೊಡುವ ಕೃಷಿ ಸಾಲವನ್ನು ಹೆಚ್ಚಿಸಬೇಕು, ದೀರ್ಘಾವಧಿ ಸಾಲವನ್ನಾಗಿ ಪರಿಗಣಿಸಬೇಕು, ಬಡ ರೈತ-ಕೂಲಿಕಾರರ ಸಾಲಗಳನ್ನು ಮನ್ನಾ ಮಾಡಬೇಕು ಎಂದು ಆಗ್ರಹಿಸಿದರು. ಅದೇ ರೀತಿ ವಸತಿ ಜಾಗದ ಬಗ್ಗೆ ಸರಕಾರದ ಗಮನವನ್ನು ನಿತ್ಯಾನಂದ ಸ್ವಾಮಿಯವರು ಸೆಳೆದರು.

ಕೊನೆಯಲ್ಲಿ ಅಖಿಲ ಬಾರತ ಕಿಸಾನ್ ಸಭಾದ (ಅಜಯ ಭವನ) ಮುಖಂಡರಾದ ಗೋಪಾಲ್ ರವರು ಐಕ್ಯ ಚಳುವಳಿಯ ಅಗತ್ಯತೆ ಬಗ್ಗೆ ಹೋರಾಟದ ಬಿಸಿ ಏರುತ್ತಿದೆ. ಮುಂಬರುವ ಹೋರಾಟಗಳು ತುಂಬಾ ಗಂಭೀರ ಸ್ವರೂಪ ತಾಳುತ್ತವೆ. ಈ ಎಚ್ಚರವನ್ನು ಸರಕಾರಗಳು ಗ್ರಹಿಸಿ, ಮುಕ್ತ ಆಮದು ನೀತಿಯನ್ನು ಕೈಬಿಡಬೇಕು ಇಲ್ಲದಿದ್ದಲ್ಲಿ ಉಗ್ರ ಚಳುವಳಿ ಎದುರಿಸಬೇಕಾಗುತ್ತದೆ ಎಂದರು.

ಮುಖಂಡರ ನುಡಿಮುತ್ತುಗಳನ್ನು ಆಲಿಸಿದ ರೈತ ಕೂಲಿಕಾರರು ಮುಂದಿನ ಹೋರಾಟ ಯೋಜನೆಯಲ್ಲಿ ಮುಳುಗುತ್ತಲೇ ಮುಂಬರುವ ಹೋರಾಟಕ್ಕೆ ಘೋಷಣೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು. ವಂದನಾರ್ಪಣೆಯನ್ನು ಪ್ರಾಂತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಚಂದ್ರಪ್ಪ ಹೊಸ್ಕೇರರವರು ಮಾಡಿದರು.





ಹುತಾತ್ಮ ಜ್ಯೋತಿ ಸ್ವೀಕಾರ

ಬಸವಕಲ್ಯಾಣದಿಂದ ಬೆಂಗಳೂರಿಗೆ ರೈತ ಜಾಗೃತಿ

ಕಾಯಕವೇ ಸಮಾಜದ ಮೂಲ ಆ ಮೂಲಕವೇ ಸಮಾಜದ ಅಭಿವೃದ್ಧಿ ಸಾಧ್ಯವೆಂದು, ಕಾಯಕದ ಅರಿವು ಮೂಡಿಸಿದ ನಾಡೇ ಬಸವಕಲ್ಯಾಣ. ಜೇಡರ ದಾಸಿಮಯ್ಯ ಅಲ್ಲಮ ಪ್ರಭುವಿನಿಂದ ಹಿಡಿದು ಬಸವಣ್ಣನವರೆಗೆ ನೂರಾರು ಶರಣರು 12ನೇ ಶತಮಾನದಲ್ಲಿ ಕಾಯಕ ಕುರಿತು ಬರೆದ ವಚನಗಳು ಇಂದಿಗೂ ಪ್ರಸ್ತುತ ಕಾಯಕವೇ ಕೈಲಾಸವೆಂದು ಕರೆದ ನಾಡಿನಲ್ಲೀಗ.. ನೂರಾರು ಕಾಯಕ ಯೋಗಿಗಳ ಆತ್ಮಹತ್ಯೆ ಸರಣಿಯೇ ನಡೆದಿದೆ. ಕಾಯಕ ಜೀವಿಗಳು ನಿರ್ಗತಿಕರಾಗುತ್ತಿದ್ದಾರೆ. ಬಲಾಢ್ಯರು ಹರಿಯಬಿಟ್ಟಿರುವ ಉದಾರೀಕರಣ ಜಾಗತೀಕರಣ ಮತ್ತು WTO ದೋರಣೆಗಳಿಗೆ ಬಲಿಯಾಗುತ್ತಿದ್ದಾರೆ. ಸುಲಿಗೆಗೆ ಒಳಗಾಗುತ್ತಿದ್ದಾರೆ.

ಬಡ್ಡಿ ಲೇವಾದೇವಿಕಾರರ ಹಿಡಿತದಲ್ಲಿ ಗ್ರಾಮೀಣ ರೈತ ಸಮುದಾಯ

ಬಸವಕಲ್ಯಾಣದಿಂದ ಬೆಂಗಳೂರಿನತ್ತ ಜಾಥಾ ಉದ್ಘಾಟನೆ ತೆಲಂಗಾಣ ರೈತ ಹೋರಾಟದ ನಾಯಕ ಕೃಷ್ಣಮೂರ್ತಿಯವರಿಂದ. ಕೃಷಿ ಉಳಿಸಲು ಪ್ರಬಲ ಐಕ್ಯಚಳುವಳಿ ಅತ್ಯಗತ್ಯ ವಿವಿಧ ಮುಖಂಡರ ಅಭಿಮತ

ಬಿತ್ತನೆ ಬೀಜ, ಗೊಬ್ಬರ, ಆಪತ್ತಿನ ರೋಗ ರುಜಿನಗಳಿಗೆ ಕುಟುಂಬದ ಮದುವೆ ಮುಂತಾದ ಕಾರ್ಯಗಳಿಗಾಗಿ ಗ್ರಾಮೀಣ ರೈತ ಸಮುದಾಯ ಗ್ರಾಮೀಣ ಪ್ರದೇಶದಲ್ಲಿ ಬಲಾಢ್ಯರಾಗಿರುವ ಬಡ್ಡಿ ಲೇವಾದೇವಿಗಾರರನ್ನು ಅವಲಂಬಿಸುವಂತಾಗಿದೆ.

ಪ್ರತಿಬಾರಿಯೂ ಅವರಿಂದ ಸಾಲ ತರುವ ಪರಿಣಾಮವಾಗಿ ಮಾಸಿಕ ಶೇ. 5 ರಿಂದ 10ರಷ್ಟು ದುಬಾರಿ ಬಡ್ಡಿ ತೀರಿಸುವ ಸಲುವಾಗಿಯೇ ಬೆಳೆದ ಬೆಳೆಯೂ ಈ ಲೇವಾದೇವಿಗಾರರ ಪಾಲಾಗುತ್ತದೆ. ಹೀಗೆ.. ನಿರಂತರ ಸಾಲ ಸಾಲದ ಮೇಲಿನ ಬಡ್ಡಿ, ಚಕ್ರಬಡ್ಡಿಯ ಚಕ್ರವ್ಯೂಹದಲ್ಲಿ ಸಿಕ್ಕಿಕೊಳ್ಳುವ ನೇಗಿಲಯೋಗಿಯ ಜೀವವು ಮಾರುಕಟ್ಟೆಯಲ್ಲಿ ಬೆಲೆಕುಸಿದ ಪರಿಣಾಮವಾಗಿ ಆಕಾಶವೇ ನೆಲಕಚ್ಚಿದಂತಾಗುತ್ತದೆ. ನಿರಂತರ ಶೋಷಣೆಯ ಧಾಳಿಗಳಿಗೆ ಒಳಗಾಗುವ ರೈತ ಸಮುದಾಯ ಸಾಲ ತೀರಿಸಲಾಗದೆ ಕೊನೆಗೆ ಆತ್ಮಹತ್ಯೆ ದಾರಿ ಹಿಡಿಯುತ್ತದೆ.

ಈ ರೀತಿಯಲ್ಲಿ ಹತಾಶೆಗೊಂಡು ಆತ್ಮಹತ್ಯೆಯೇ ಅಂತಿಮವೆಂದು ಭಾವಿಸಿದ್ದ ಈ ಶ್ರಮಜೀವಿಗೆ ಆತ್ಮಹತ್ಯೆಯ ಬದಲು ಆತ್ಮವಿಶ್ವಾಸದ ಹೋರಾಟದ ಹುಮ್ಮಸ್ಸು ತುಂಬಿಸಲು ಮೇ 22ರಿಂದ 29ರವರೆಗೆ ಕರ್ನಾಟಕ ಪ್ರಾಂತ ರೈತ ಸಂಘ(ಕೆ.ಪಿ.ಆರ್.ಎಸ್.) ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ (AIAWA) ಗಳು ಬೀದರ ಜಿಲ್ಲೆಯ ಬಸವಕಲ್ಯಾಣದಿಂದ ಬೆಂಗಳೂರಿನವರೆಗೂ ಸಂಘಟಿಸಿದ್ದ ಜಾಥಾವೇ "ಕೃಷಿ ರಕ್ಷಿಸಿ ದೇಶ ಉಳಿಸಿ ಜಾಥಾ."

ಉದ್ಘಾಟನಾ ಸಮಾರಂಭ


ಕೇಂದ್ರ ಸರ್ಕಾರದ ರೈತ ವಿರೋಧಿ ದೋರಣೆಯಿಂದಾಗಿ, ಕೃಷಿ ರಂಗದ ಪರಿಸ್ಥಿತಿ ಗಂಭೀರವಾಗಿದೆ. ಕೃಷಿ ಕ್ಷೇತ್ರದ ನಿರ್ಲಕ್ಷ್ಯ, ಭೀಕರ ಬರಗಾಲ, ಚಂಡಮಾರುತದಿಂದಾಗಿ ಜನರ ಬದುಕು ತತ್ತರಿಸಿ ಊರು ಬಿಡುವ ಪರಿಸ್ಥಿತಿ ನಿರ್ಮಾಣವಾಗಿದೆ. ದೇಶದಲ್ಲಿ 48 ಸಾವಿರ ಕೋಟಿ ಕೆ.ಜಿ. ಆಹಾರ ದಾನ್ಯಗಳು ಸಂಗ್ರಹವಿದ್ದರೂ ಅದನ್ನು ಜನರಿಗೆ ಹಂಚುತ್ತಿಲ್ಲ. ಬದಲಾಗಿ ಬಹು ರಾಷ್ಟ್ರೀಯ ಕಂಪನಿಗಳು ಮತ್ತು ಅಭಿವೃದ್ಧಿ ರಾಷ್ಟ್ರಗಳ ಮೂಲಕ ಮಾರಾಟಕ್ಕೆ ಹುನ್ನಾರ ನಡೆಸಿವೆ. ಎಂದು ಆಂಧ್ರದ ತೆಲಂಗಾಣ ರೈತ ಹೋರಾಟಗಾರರು ಮತ್ತು AIAWU ಕೇಂದ್ರ, ಸದಸ್ಯರೂ ಆದ ಕೆ. ಕೃಷ್ಣಮೂರ್ತಿಯವರು ಬಸವಕಲ್ಯಾಣದಲ್ಲಿ ರೈತ ಜಾಥಾವನ್ನು ಉದ್ಘಾಟಿಸುತ್ತ ಹೇಳಿದರು.

ಮುಖ್ಯ ಅತಿಥಿಯಾಗಿ ಕರ್ನಾಟಕ ರಾಜ್ಯ ರೈತ ಸಂಘ (KRRS)ದ ಗೌರವ ಅಧ್ಯಕ್ಷರಾದ ಬಸವರಾಜ್ ತಂಬಾಕೆ ಮಾತನಾಡಿ ಕೇಂದ್ರ ರಾಜ್ಯ ಸರ್ಕಾರಗಳ ರೈತ ವಿರೋಧಿ ನೀತಿಗಳ ವಿರುದ್ಧ ಐಕ್ಯ ಚಳುವಳಿ ಬೆಳೆದು ಬರಬೇಕೆಂದು ಬಯಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆಯವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಬೀದರ ಜಿಲ್ಲೆಯ ಕಬ್ಬು ಬೆಳೆಗಾರರು ಮತ್ತು ಹಾಲು ಉತ್ಪಾದಕ ಸಮುದಾಯ ಆಮದು ನೀತಿಯ ಪರಿಣಾಮವಾಗಿ ತೀವ್ರ ಸಂಕಷ್ಟಕ್ಕೊಳಗಾಗಿದ್ದಾರೆ. ಎಸ್.ಎಂ. ಕೃಷ್ಣ ನೇತೃತ್ವದ ಕಾಂಗ್ರೆಸ್ (ಐ) ಸರ್ಕಾರದ ವಿದ್ಯುತ್ ನೀತಿಯೂ ನಮ್ಮ ರೈತ ಸಮುದಾಯವನ್ನು ಆಹುತಿ ತೆಗೆದುಕೊಳ್ಳಲು ಪ್ರಾರಂಭಿಸಿದೆ. ರಾತ್ರಿ ವೇಳೆಯಲ್ಲಿ ಮಾತ್ರ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ನೀಡಲು ನಿರ್ಧರಿಸಿರುವ ಸರ್ಕಾರದ ತೀರ್ಮಾನದ ಪರಿಣಾಮವಾಗಿ ಇತ್ತೀಚೆಗೆ ಹಾನಗಲ್ ತಾ। ಪ್ರಾಂತ ರೈತ ಸಂಘ ಅಧ್ಯಕ್ಷರಾದ ಸಿ.ಎಂ.ಪಾಟೀಲರ ಮಗ ವಿದ್ಯುತ್ ಶಾಕ್‌ಗೆ ಮೊದಲ ಬಲಿಯಾಗಿದ್ದಾನೆ. ಇಂತಹ ನೀತಿಗಳ ವಿರುದ್ಧ ರೈತ ಹೋರಾಟ ಬೆಳೆದು ಬರಬೇಕೆಂದರು ಬಿದರ ಜಿಲ್ಲೆಯ ಎಡಚಳುವಳಿಯ ನೇತಾರರು ಹಿರಿಯರು, ಆದ ಕಾಶಿನಾಥ ಸ್ವಾಮಿಯವರು ಈ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಸಮಾರಂಭದಲ್ಲಿ ವಿವಿಧ ಸಂಘಟನೆಗಳ ಮುಖಂಡರಾದ ಸಂಜೀವಕುಮಾರ್ ಚಂಪಾಭಾಯಿ, ಕಮಲಮ್ಮ ಶಿವಮ್ಮ ರಾಜೇಂದ್ರ ಸಿಂಗ್‌ವರ್ಮಾ ಸೇರಿದಂತೆ ನೂರಾರು ಜನರು ಹಾಜರಿದ್ದರು.

ಕೃಷಿ ಕೂಲಿಕಾರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ನೇತೃತ್ವದಲ್ಲಿ ಜಾಥಾ ಅಲ್ಲಿಂದ ಹೊರಟಿತು. 29 ರಂದು ಬೆಂಗಳೂರು ತಲುಪಿತು.

ಈ ಸಮ್ಮೇಳನ ಮಹಿಳೆಯರ ಸ್ಥಿತಿ, ಗತಿ, ಅನುಭವಿಸುತ್ತಿರುವ ವೇದನೆಯನ್ನು, ಸಂಕಟಗಳನ್ನು ಹಂಚಿಕೊಳ್ಳುವ ವೇದಿಕೆಯಾಯಿತು. ಜಾಗೃತಿ ಮತ್ತು ಸಂಘಟನೆಯ ಶಕ್ತಿಯಿಂದ ಏನನ್ನಾದರೂ ಸಾಧಿಸಬಲ್ಲೆನೆಂಬ ಅಪಾರ ವಿಶ್ವಾಸ ಮೂಡಿಸಿತು. ಜಗತ್ತಿನ ಪ್ರಥಮ ಶೋಷಿತ ಸಮುದಾಯದ ಬಿಡುಗಡೆ ಹಾದಿಯನ್ನು ಗುರುತಿಸಿತು. ಅದಕ್ಕಾಗಿ ಪ್ರಬಲ,ವಿಶಾಲ ಆಂದೋಲನ ರೂಪಿಸಿ, ಮುನ್ನಡೆಸಲು ಸಮರ್ಥ ಸಂಘಟನೆಯನ್ನು ಕಟ್ಟಲು ನಿರ್ಧರಿಸಿತು. ಈ ಸಮ್ಮೇಳನದ ಒಟ್ಟು ಚಿತ್ರವನ್ನು ಸಂಘಟನೆಯ ರಾಜ್ಯಾಧ್ಯಕ್ಷೆ ಕೆ.ನೀಲಾ ಇಲ್ಲಿ ನೀಡಿದ್ದಾರೆ.



ಅ.ಭಾ. ಜನವಾದಿ ಮಹಿಳಾ
4ನೇ ಸಮ್ಮೇಳನ-ಮಂಗಳೂರು

ಮಹಿಳೆಯರ ದನಿಗೆ ಹಿಡಿದ ಕನ್ನಡಿ ಈ ಸಮ್ಮೇಳನ

ಕಾರ್ಮಿಕ ಸಂಘದ ಮುಖಂಡರಾದ ಮಾಧವರೊಂದಿಗೆ ಮಾತಾಡಿ ಗೊಟ್ಲಾ ಚಿಲ್ಲ ರಸ್ತೆಗೆ ಹೋಗಲು ಬಸ್ ಹಿಡಿಯಲೆಂದು ರಸ್ತೆಗಿಳಿದೆವು. ಬೆಳಿಗ್ಗಯಿಂದ ಮಳೆಬಂದಿರಲಿಲ್ಲ. ಆಹ್ಲಾದಕೊಡುವ ಬಿಸಿಲು ಹರಿಡಿಕೊಂಡಿತ್ತು. ಹೀಗಾಗಿ ಮಳೆ ಬರಲಿಕ್ಕಿಲ್ಲ ಎಂದು ನಾನು ಛತ್ರಿ (ಕೊಡೆ) ತರಲಾರದೇನೆ ಕಾರ್ಮಿಕರ ಸಂಘದ ಕಚೇರಿಗೆ ಬಂದಿದ್ದೆ. ಕಚೇರಿಯಿಂದ ರಸ್ತೆ ಮುಟ್ಟುವಾಗಲು ಮಳೆ ಬರುವುದೆನಿಸಲೇ ಇಲ್ಲ. ಮಾತಿನ ನಡುವೆ ಮಾಧವರು ಹೇಳಿದರು.

"ಓ ಮಳೆ ಬಂದೇ ಬಿಟ್ಟಿತಲ್ಲ ನೀಲಾ, ನೀವೀಗ ಹೋಗೊದು ಹೇಗೆ? ಎಲ್ಲಿ ಮಳೆ? ಯಾವ ಕಡೆಯಿಂದ ಬರ್ತಾ ಇದೆ?. ನಾನು ಹುಡುಕಾಡುತ್ತಿದ್ದೆ. ಅಷ್ಟರಲ್ಲೇ ಅದು ಯಾವಾಗ ಮೋಡ ಕಟ್ಟಿಕೊಂಡಿತೋ. ಮಳೆಯಾಗಿ ಧೋಗರೆಯಲು ಯಾವಾಗ ಸಿದ್ಧವಾಯಿತೋ... ಒಂದು ಮಾತಿನ ವಾಕ್ಯ ಮುಗಿವುದರೊಳಗಾಗಿ ಮಳೆ ರಪರಪರಪ ಬೀಳತೊಡಗಿತು. ನೆಲ ಮುಗಿಲಿಗೆ ಮಳೆದಾರದ ಹೆಣಿಕೆ...

ಒಂದು ಅಂಗಡಿಯ ಮುಂದೆ ಆಸರೆಗಾಗಿ ನಿಂತೆವು. ಅಲ್ಲಿ ಒಬ್ಬ ಯಜಮಾನರಿದ್ದರು ಏನ್ರೀ ಇದು, ಹೇಳ್ದೆ ಕೇಳದೆ ಮಳೆ ಬರ್ತದಲ್ಲ ನಿಮ್ಮಲ್ಲಿ.." ಅಂದೆ ಅವರೆಂದರು "ಇದು ಮಂಗಳೂರು..."

ಹೌದು. ಇದು ಮಂಗಳೂರು ಮಾರಾಯ್ರೆ. ಈ ಕರಾವಳಿಯ ನೆಲಕ್ಕೆ ತನ್ನದೇ ಆದ ವೈಶಿಷ್ಟ್ಯತೆ ಇದೆ. ಮೈತುಂಬ ನಳನಳಿಸುವ ಹಸಿರು ಹೊದ್ದ ಈ ಕರಾವಳಿಯಲ್ಲಿ ಜನ ಮಾತ್ರ ತುಂಬ ಬೆವರುತ್ತಾರೆ. ಆದರೇನು ಹಸಿರಿನಷ್ಟೇ ಖುಷಿ ಕೊಡುವ ಮುಗುಳ್ನಗೆ ಇದೆ ಅವರ ಮುಖದ ಮೇಲೆ. ಹೆಚ್ಚು ಮಾತಾಡಲಾರದೆನೇ ಅಚ್ಚುಕಟ್ಟಾಗಿ ಕೆಲಸ ಮಾಡುವ ರೂಢಿ ಇದೆ ಅವರಿಗೆ.

ಕರಾವಳಿಯ ವೈಶಿಷ್ಟ್ಯ ಮೊದಲು ಮಳೆ ಅದಕ್ಕೂ ಮೊದಲು ಮಳೆ ಕಟ್ಟಿಕೊಡುವ ಕಡಲು-ಕಡಲ ಕಿನಾರೆ. ಆಮೇಲೆ ಮೀನು. ಆಮೇಲೆ ತೆಂಗು ಇಂಥ ವೈಶಿಷ್ಟ್ಯದ ನಾಡಲ್ಲಿ 4ನೇ ಮಹಿಳಾ ಸಮ್ಮೇಳನವು ಯಶಸ್ವಿಯಾಗಿ ಮೂರು ದಿನಗಳ ಕಾಲ ನಡೆದಿದೆ. ಮೇ 16,17, ಮತ್ತು 18ರಂದು ರಾಜ್ಯದ ಎಲ್ಲೆಡೆಯಿಂದ ಬಂದ ಮಹಿಳಾ ಪ್ರತಿನಿಧಿಗಳಿಗೆ ಒಂದು ಸಾಯಂಕಾಲ ಬಿಡುವು ಮಾಡಿಸಿ ಕಡಲ ಕಿನಾರೆಗೆ ಕಳಿಸಿದೆವು. ಮರಳಿ ಬಂದವರಿಗೆ ಕೇಳಿದೆವು ಹೇಗಿತ್ತು. ಕಡಲು? ಅವರಲ್ಲಿ ವಿವರಿಸಲು ತಕ್ಕ ಶಬ್ದಗಳಿರಲಿಲ್ಲ.. ಮಸ್ತಾಗಿತ್ತು ಮಾತ್ರ ನನ್ನ ಕವಿಗೆಳತಿ ಸೀತಾಲಕ್ಷ್ಮಿಗೆ ಕೇಳ್ದೆ "ಸಮುದ್ರ ತಂದಿರೇನು? ತೋರ್ಸಿ?" ಸೀತಾಲಕ್ಷ್ಮಿ ಹೇಳಿದರು "ಅದು ತೋರಲಿಕ್ಕಾಗದು ಹೃದಯದೊಳಗಿದೆ"

ಹುತಾತ್ಮರಿಗೆ ಶ್ರದ್ಧಾಂಜಲಿ - ಮೈಥಿಲಿ, ವಿಮಲ



ಮಂಗಳೂರಿನ ಪ್ರಕೃತಿಯ ಸವಿಯನ್ನು ಸವಿದ ಪ್ರತಿನಿಧಿಗಳು ಸಮ್ಮೇಳನದಲ್ಲಿ ಹಲವಾರು ಪ್ರಮುಖ ಅಂಶಗಳ ಮೇಲೆ ಬೆಳಕು ಚೆಲ್ಲಿದರು. ಕಾರ್ಯದರ್ಶಿ ಮಂಡಿಸಿದ ವರದಿಯ ಮೇಲೆ ಸುದೀರ್ಘ ಚರ್ಚೆ ಮಾಡಿದರು. ನಮ್ಮ ನಿರೀಕ್ಷೆಗೂ ಮೀರಿ ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣವು ಜನ ಸಾಮಾನ್ಯರ ಬದುಕನ್ನು ಬರಡಾಗಿಸುತ್ತಿದೆ. ಅದರಲ್ಲೂ ಮಹಿಳೆಯರ ಮೇಲೆ ಅಗಾಧವಾದ ದುಷ್ಪರಿಣಾಮವಾಗಿದೆ. ದೌರ್ಜನ್ಯಗಳು ಹೆಚ್ಚುತ್ತಿದೆ. ಸಾಮಾನ್ಯ ಜನ ನಾಗರೀಕ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಕುಡಿವ ನೀರು ಸಹ ಗಳಿಕೆಯ ಸಾಧನವಾಗಿದೆ. ಒಟ್ಟು ರಾಜ್ಯದ ಕಣ್ಣೋಟದಿಂದ ವರದಿಯನ್ನು ಪರಿಪೂರ್ಣಗೊಳಿಸಿದರು. ಅದೊಂದು ಶ್ರೀಮಂತ ಅನುಭವ.

ವಿಮಲ ರಣದಿವೆ ವೇದಿಕೆಯ ಮೇಲೆ ನಾಲ್ಕು ಜನರ ಅಧ್ಯಕ್ಷೀಯ ಮಂಡಳಿಯು ಸಮ್ಮೇಳನದ ಅಧಿವೇಶನ ನಡೆಸುತ್ತಿತ್ತು. ಪ್ರತೀ ಪ್ರತಿನಿಧಿ ಮಾತಾಡಿರುವುದನ್ನು ದಾಖಲಿಸಲಾಗುತ್ತಿತ್ತು.

ಮಹಿಳೆಯರ ಮೇಲಿನ ದೌರ್ಜನ್ಯ

ಮಹಿಳೆಯರ ಸ್ಥಿತಿ-ಗತಿ

ಒಂದು ಕಡೆ ವಿಜ್ಞಾನ ತಂತ್ರಜ್ಞಾನ ಬೆಳೆಯುತ್ತಿದೆ ಆದರೂ ಒಟ್ಟು ಜನಸಂಖ್ಯೆಯ ಅರ್ಧದ ಹತ್ತಿರವಿರುವ ಮಹಿಳೆಯು ಈಗಲೂ ಸಹ ಅಸಮಾನತೆಗೆ ಅಗೌರವಕ್ಕೆ ಬಲಿಯಾಗುತ್ತಿದ್ದಾಳೆ. ಪ್ರತಿ 54 ನಿಮಿಷದಲ್ಲಿ ಒಂದು ಅತ್ಯಾಚಾರ ನಡೆಯುತ್ತಿದೆ. 20 ನಿಮಿಷದಲ್ಲಿ ಒಮ್ಮೆ ಪೀಡಿಸಲಾಗುತ್ತಿದೆ. 1 ಗಂಟೆ 45 ನಿಮಿಷಕ್ಕೆ ಒಂದು ವರದಕ್ಷಿಣೆ ಕೊಲೆ ಸಂಭವಿಸುತ್ತಿದೆ. 33 ನಿಮಿಷಕ್ಕೆ ಒಮ್ಮೆ ಹಿಂಸೆ-ಹಲ್ಲೆ ಘಟಿಸುತ್ತಿದೆ. ಈ ಎಲ್ಲ ಕಾರಣಗಳಿಂದ ಮತ್ತು ಪ್ರಮುಖವಾಗಿ ಬೆಳೆಯುತ್ತಿರುವ ಆರ್ಥಿಕ ಬಿಕ್ಕಟ್ಟಿನಿಂದಾಗಿ ಬದುಕಿನ ಬುನಾದಿಯೇ ಅಲ್ಲಾಡುತ್ತಿದೆ. ಆತ್ಮಹತ್ಯೆಯ ಘಟನೆಗಳು ಹೆಚ್ಚುತ್ತಿವೆ. ಮಕ್ಕಳಿಗೆ ವಿಷವಿಕ್ಕಿ ತಾನೂ ಸಾಯುವುದು ಇಲ್ಲವೇ ವರದಕ್ಷಿಣೆಯ ಸಲುವಾಗಿ ಸೊಸೆಯನ್ನು ಕೊಲೆ ಮಾಡುವುದು ನಡೆಯುತ್ತಿದೆ.

ಇಡೀ ಸಮಾಜದಲ್ಲಿನ ಪಾಳೇಗಾರಿ ಮನುವಾದಿ ಶಕ್ತಿಗಳು ಲಿಂಗಭೇಧ ನೀತಿಯನ್ನು ಇನ್ನಷ್ಟು-ಮತ್ತಷ್ಟು ಘೋಷಿಸುತ್ತಿವೆ. ಆದ್ದರಿಂದಲೇ ಹೆಣ್ಣು ಶಿಶು ಭ್ರೂಣಹತ್ಯೆಯು ವರ್ಷವೊಂದರಲ್ಲೇ 1 ಲಕ್ಷಕ್ಕೂ ಅಧಿಕ ಘಟಿಸುತ್ತಿವೆ. ಹೆಣ್ಣುಬೇಡ ಎಂಬ ತಿರಸ್ಕಾರ ವ್ಯಾಪಕವಾಗಿ ಹರಡುತ್ತಿದೆ. ಈ ತಿರಸ್ಕಾರವು ಅಮಾನವೀಯ ಸ್ವರೂಪದಲ್ಲಿ ಎದ್ದು ನಿಲ್ಲುತ್ತಿದೆ. ಸಾಮಾನ್ಯವಾಗಿ ಬಡತನದ ಮನೆಗಳಲ್ಲಿ ಪ್ರೀತಿಯೇ ಹೆಚ್ಚು ಗಟ್ಟಿಯಾಗಿರುತ್ತದೆ. ಆದರೆ ಹೆಣ್ಣಿನ ಬಗ್ಗೆ ಇರುವ ತಿರಸ್ಕಾರ ಭಾವನೆಯು ಬಡವರನ್ನೂ ಕಠಿಣ ಹೃದಯಿಗಳನ್ನಾಗಿಸುತ್ತಿದೆ. ಆದ್ದರಿಂದಲೇ ಗುಲಬರ್ಗಾ ಜಿಲ್ಲೆಯ ಚಿಂಚೋಳಿಯ ಥಾಂಡಾಗಳಲ್ಲಿ ಹೆಣ್ಣು ಶಿಶುಗಳ ಮಾರಾಟ ನಡೆದಿದೆ. ಲಿಂಗಭೇದ ನೀತಿ ಮತ್ತು ಕಿತ್ತು ತಿನ್ನುತ್ತಿರುವ ಬಡತನ ಇದಕ್ಕೆ ಪ್ರಮುಖ ಕಾರಣವಾಗಿದೆ.

ಇದಕ್ಕೆ ಪೂರಕವಾಗಿ ಮಾಧ್ಯಮಗಳು ಸಹ ಮಹಿಳಾ ವಿರೋಧಿ ನಿಲುವು ತಾಳಿವೆ. ಟಿವಿಯಂಥ ಪರಿಣಾಮಕಾರಿ ಮಾಧ್ಯಮದಲ್ಲಿ ಪೌರಾಣಿಕ ಧಾರಾವಾಹಿಗಳು ಅವೈಜ್ಞಾನಿಕ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ. ಜೊತೆಗೆ ಮಹಿಳೆಯನ್ನು ಅಶ್ಲೀಲವಾಗಿ ಬಿಂಬಿಸುವ ಮೂಲಕ ಅವಳೊಂದು ವ್ಯಾಪಾರದ ವಸ್ತು ಎಂಬ ಭಾವನೆ ಹುಟ್ಟು ಹಾಕಲಾಗುತ್ತಿದೆ. ಇನ್ನೊಂದೆಡೆ ಯುವಜನರನ್ನು ದಿಕ್ಕು ತಪ್ಪಿಸಲಿಕ್ಕಾಗಿ ಹಿಂಸೆ ಮತ್ತು ಕೌರ್ಯವನ್ನು ವೈಭವೀಕರಿಸಲಾಗುತ್ತಿದೆ. ಮಕ್ಕಳೂ ಸಹ ಕೇಬಲ್‌ನಲ್ಲಿ W.W.F ಎಂಬ ಬಡಿದಾಟ, ಹಿಂಸೆಯನ್ನೇ ತೋರಿಸುವ ಚಾನೆಲ್ ಅನ್ನೇ ಇಷ್ಟಪಡುವವರ ಸಂಖ್ಯೆ ಉಲ್ಬಣಿಸುತ್ತಿದೆ. ಹೀಗೆ ಜಾಗತೀಕರಣ ಎಂಬುದು ಮಾಧ್ಯಮಗಳ ಮೂಲಕ ಮಹಿಳೆಯರ ಮಕ್ಕಳ ಯುವಜನರ ಮೇಲೆ ಧಾಳಿ ಮಾಡುತ್ತಿದೆ. ಉದ್ಯೋಗಸ್ಥ ಮಹಿಳೆ, ವಿದ್ಯಾರ್ಥಿ ಮಹಿಳೆಯರು ಕೀಟಲೆಗೆ ಮತ್ತು ಚುಡಾಯಿಸುವಿಕೆಗೆ ಬಲಿಯಾಗುತ್ತಿದ್ದಾರೆ.

ಮಹಿಳೆಯು ತನ್ನ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಪ್ರತಿಭಟಿಸಿ ದೂರು ಕೊಡಲು ಪೋಲೀಸ್ ಠಾಣೆಗೆ ಹೋಗುವುದು ತುಂಬ ಕಡಿಮೆ. ಒಂದು ವೇಳೆ ಹೋದರು ಪೊಲೀಸ್ ಇಲಾಖೆಯು ದೂರು ದಾಖಲಿಸಿಕೊಳ್ಳುವುದಕ್ಕೆ ಕ್ರಮ ಕೈಗೊಳ್ಳುವುದಕ್ಕೆ ಮುಂದಾಗುವುದೇ ಇಲ್ಲ. ಹೀಗಾಗಿ ಪೊಲೀಸ್ ಇಲಾಖೆಯ ಮೇಲೆ ಮಹಿಳೆಯರು ನಂಬಿಕೆ ಕಳೆದುಕೊಳ್ಳುತ್ತಿದ್ದಾರೆ.

ಇನ್ನು ಗ್ರಾಮೀಣ ಪ್ರದೇಶದ ಮಹಿಳೆಯರಂತೂ ಇನ್ನಷ್ಟು ಕಷ್ಟಕ್ಕೆ ಸಿಲುಕಿದ್ದಾರೆ.

ಕೃಷಿ ಕೂಲಿಕಾರ ಮಹಿಳೆಯರು, ಕೆಲಸ ಕಳೆದುಕೊಂಡು ನಿರುದ್ಯೋಗಿಗಳಾಗುತ್ತಿದ್ದಾರೆ. ಕೆಲಸ ಹುಡುಕಿಕೊಂಡು ಅಂಗೈಯಲ್ಲಿ ಹೊಟ್ಟೆಯನ್ನಿಟ್ಟು ಕೊಂಡು ಊರೂರು ಅಲೆದಾಟ ಶುರವಾಗುತ್ತಿದೆ. ಚೂರು ಗಂಜಿಗಾಗಿ ಸೇರು ಬೆವರು ಸುರಿಸಿದರೂ ಕೆಲಸವಿಲ್ಲದಾಗಿದೆ ಹೀಗಾಗಿ ಮಹಿಳೆಯೂ ಸಹ Cheap Labour ಆಗಿ ಮಾರ್ಪಾಡಾಗುತ್ತಿರುವಳು. ದುಡ್ಡಿಗಾಗಿ 8 ವರ್ಷದ ಹೆಣ್ಣು ಕೂಸುಗಳಿಗೂ ಮನೆಗೆಲಸ ಮಾಡಲು ಊರಿಂದೂರಿಗೆ ಕಳಿಸುತ್ತಿರುವರು. ಇದು ಒಂದರ್ಥದಲ್ಲಿ ಆಧುನಿಕ ಜೀತಪದ್ಧತಿ. ಮಹಾ ಮಹಾನಗರಗಳಲ್ಲಿ ಕೆಂಪು ದೀಪಗಳ ಕೆಳಗೆ ಸಾಲುಗಳು.

ಪಟ್ಟಣದ ಕಟ್ಟಡ ಕಾರ್ಮಿಕ ಮಹಿಳೆಯರು ಅತ್ಯಂತ ಕಡಿಮೆ ಕೂಲಿಗೆ ದುಡಿಯುತ್ತಿರುವರು ಮಾತ್ರವಲ್ಲ ಲೈಂಗಿಕ ಹಲ್ಲೆಗೆ ಒಳಗಾಗುತ್ತಿರುವರು.

ದಲಿತ-ಮುಸ್ಲಿಂ ಮಹಿಳೆಯರ ಪರಿಸ್ಥಿತಿ.

ಪ್ರತಿನಿಧಿಗಳು ವಿಶೇಷವಾಗಿ ದಲಿತ ಮತ್ತು ಮುಸ್ಲಿಂ ಮಹಿಳೆಯರ ಜೀವನದ ಮೇಲೆ ಬೆಳಕು ಚೆಲ್ಲಿದರು. ಮನುವಾದಿಗಳ ಪ್ರಕಾರ ಹೆಂಗಸು ದಲಿತಳು. ಆದರೆ ದಲಿತ ಹೆಂಗಸು ಇನ್ನೂ ಕನಿಷ್ಠಳು ಎಂಬಂತೆ ಈ ಸಮಾಜ ನಡೆದುಕೊಳ್ಳುತ್ತಿದೆ. ಬೆಳ್ತಂಗಡಿಯ ಒಂದು ಗ್ರಾಮ ಪಂಚಾಯ್ತಿಯಲ್ಲಿ ದಲಿತ ಮಹಿಳೆಯೊಬ್ಬಳು ಮೀಸಲಾತಿಯ ಪ್ರಕಾರ ಅಧ್ಯಕ್ಷೆಯಾಗಬೇಕು. ಅವರಲ್ಲಿ ಅವಳೊಬ್ಬಳೇ ದಲಿತಳು.ಆದರೆ ಅವಳು ದಲಿತಳು ಎನ್ನುವ ಕಾರಣಕ್ಕೆ ಉಳಿದ ಸದಸ್ಯರು ಇಂದಿಗೂ ಆ ಸ್ಥಾನ ಖಾಲಿಯಿರಿಸಿರುವುದನ್ನು ವಿವರಿಸಿದರು.

ದಲಿತಮಹಿಳೆ ಎಂಬ ಕಾರಣಕ್ಕೆ ಈಗಲೂ ಸಹ ಮರ್ಮಘಾತಕ ಸನ್ನಿವೇಶಕ್ಕೆ ಒಳಗಾಗುವ ಪರಿಸ್ಥಿತಿ ಇದೆ. ಸ್ವಾಭಿಮಾನಕ್ಕೆ ಧಕ್ಕೆಯಾಗುವಂತಹ ಘಟನೆಗಳಿಗೆ ಅವಳು ಬಲಿಯಾಗುತ್ತಿದ್ದಾಳೆ.

ಹಾಗೆಯೇ ಮುಸ್ಲಿಂ ಮಹಿಳೆ ಸಹ ಧರ್ಮದ ಹೆಸರಿನಲ್ಲಿ ಮುಸ್ಲಿಂ ಮಹಿಳೆಯನ್ನು ಅನೇಕ ಹಕ್ಕುಗಳಿಂದ ವಂಚಿಸುತ್ತಲಿರುವರು. ವಿಶೇಷವಾಗಿ "ತಲಾಖ್" ಪ್ರಶ್ನೆಯಲ್ಲಿ. ಹೆಂಡತಿ ಬೇಡವಾದಲ್ಲಿ ಗಂಡನಾದವನು ಮರ್ಜಿ ಮುಲಾಜಿಲ್ಲದೆ 'ತಲಾಖ್' ಬರೆದು ಕಳಿಸುವನು ಎಷ್ಟೋ ಕಡೆ ತವರಿನಲ್ಲಿರುವ ಹೆಂಡತಿಗೆ ಗರಿಡಕೊಟ್ಟ 'ತಲಾಖ್' ರಿಜಿಸ್ಟರ್ ಪೋಸ್ಟ್ ಮೂಲಕ ಬರುತ್ತದೆ. ಮುಸ್ಲಿಂ ವಯಕ್ತಿಕ ಕಾನೂನಿನೊಳಗಡೆಯೇ ಬದಲಾಗಬೇಕಿದೆ. ಮುಸ್ಲಿಂ ಮಹಿಳೆಯನ್ನು ಶಿಕ್ಷಣದಿಂದ ಸಾಮಾಜಿಕ ಚಟುವಟಿಕೆಗಳಿಂದ ವಂಚಿಸಲಾಗುತ್ತಿದೆ. ಅಸಂಖ್ಯಾತ ಮಹಿಳೆಯರ ದನಿಗೆ ಸಮ್ಮೇಳನ ಕನ್ನಡಿ ಹಿಡಿಯಿತು.

ಹೀಗೆ ಮಹಿಳೆಯರ ಮೇಲಿನ ದೌರ್ಜನ್ಯಗಳ ತಡೆಗೆ ಲಿಂಗ ತಾರತಮ್ಯ ನೀತಿ ತಡೆಗೆ ಮತ್ತು ದಲಿತ ಹಾಗೂ ಅಲ್ಪ ಸಂಖ್ಯಾತ ಮಹಿಳೆಯರ ಹಕ್ಕುಗಳ ರಕ್ಷಣೆಗೆ ಕ್ರಮವಹಿಸಲು ನಾಲ್ಕನೇಯ ಸಮ್ಮೇಳನ ಸರಕಾರಕ್ಕೆ ಒತ್ತಾಯಿಸಿದೆ.

ಹಾಗೂ ರಾಜ್ಯದಲ್ಲಿ ಮಹಿಳೆಯರ ಸಂಕಷ್ಟ ಅರಿಯುವುದಕ್ಕಾಗಿ ಸಮಸ್ಯೆಗಳ ಪರಿಹಾರಕ್ಕಾಗಿ ಕೆಲಸ

ಮಗುವಿನ ರುಂಡ-ಮುಂಡ ಬೇರ್ಪಡಿಸಿದ ಹೆರಿಗೆ ವೈದ್ಯರೆಂಬ ರಾಕ್ಷಸರು

'ವಿಶೇಷ ಹೆರಿಗೆ' ಮಾಡಿಸಿದ ವೈದ್ಯರೊಬ್ಬರ ಕುರಿತು ಗಂಗಾವತಿಯ ಸಹೋದರಿಯೊಬ್ಬರು ಮಾತಾಡುತ್ತಿದ್ದಂತೆ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಎಲ್ಲ ಮಹಿಳೆಯರು ಒಮ್ಮೆ ತಮ್ಮ ಹೊಟ್ಟೆ ಮುಟ್ಟಿ ನೋಡಿಕೊಳ್ಳುವಂತಾಯಿತು.

ತುಂಬು ಗರ್ಭಿಣಿಯೊಬ್ಬಳು ಚೊಚ್ಚಲ ಹೆರಿಗೆಗೆಂದು ಆಸ್ಪತ್ರೆ ಸೇರಿದಳು. ಪರೀಕ್ಷೆ ಮಾಡಿದ ವೈದ್ಯರು, ಹೆರಿಗೆ ಸಲೀಸಾಗಿ ಆಗುತ್ತದೆ ಗಾಬರಿಯಾಗುವ ಅಗತ್ಯವಿಲ್ಲವೆಂದು ಸಮಾಧಾನ ಪಡಿಸಿದ್ದರು. ಹೆರಿಗೆಯ ನೋವು ತೀವ್ರಗೊಂಡು ಆಕೆಯ ಆಕ್ರಂದನ ಮುಗಿಲು ಮುಟ್ಟುತ್ತಿದ್ದಂತೆ ಗಾಬರಿಗೊಂಡ ವೈದ್ಯರು ಆಪರೇಷನ್ ಮಾಡಿ ಹೆರಿಗೆ ಮಾಡಿಸಬೇಕು ಇಲ್ಲವಾದರೆ ಅಪಾಯವಾಗುವುದು ಎಂದು ಹೇಳಿ ಆಕೆಯನ್ನು ಆಪರೇಷನ್ ಥಿಯೇಟರ್ ಒಳಗೆ ಕರೆದುಕೊಂಡು ಹೋಗಿ ಹೆರಿಗೆ ಮಾಡಿಸಿದರು. ಆದರೆ ಮಗುವಿನ ಕಾಲು ಕೈಯ್ಯಿ, ಮುಂಡ ಮಾತ್ರ ಹೊರಗಡೆ ಬಂದಿತ್ತು ಅಷ್ಟೆ. ಮಗುವಿನ ತಲೆ ವೈದ್ಯರ ಎಳೆದಾಟಕ್ಕೆ ತಲೆಬಾಗಿ ಹೊಟ್ಟೆ ಒಳಗಡೆಯೆ ಉಳಿದು ಬಿಟ್ಟಿತ್ತು. ಇದು ಮಹಿಳೆಯರ ಆರೋಗ್ಯ ರಕ್ಷಣೆಯ ಬಗೆಗಿರುವ ಕಾಳಜಿ! ಸುರಕ್ಷಿತ ಹೆರಿಗೆ' ಯೋಜನೆಗೊಂದು ಉದಾಹರಣೆ ಅಷ್ಟೆ.

ಮಾಡಬೇಕಾದ "ರಾಜ್ಯ ಮಹಿಳಾ ಆಯೋಗ"ವನ್ನು ರಚಿಸಲು ಸರಕಾರಕ್ಕೆ ಸಮ್ಮೇಳನವು ಆಗ್ರಹಿಸಿದೆ.

ಕನಿಷ್ಠ ನಾಗರೀಕ ಸೌಲಭ್ಯಗಳು :

ಕರ್ನಾಟಕದ ಮಹಿಳೆಯರು ಕನಿಷ್ಠ ನಾಗರೀಕ ಸೌಲಭ್ಯಗಳಿಂದಲೂ ವಂಚಿತರಾಗಿರುವರು. ದೇಶದಲ್ಲಿ ಪ್ರತಿಶತ 35 ರಷ್ಟು ಮಹಿಳಾ ನೇತೃತ್ವದ ಕುಟುಂಬಗಳಿವೆ. ದೇಶದಲ್ಲಿ ಪ್ರತಿಶತ 35 ರಷ್ಟು ಮಹಿಳಾ ನೇತೃತ್ವದ ಕುಟುಂಬಗಳಿವೆ. ಆದರೆ ಸರಕಾರದ ವಸತಿ ಯೋಜನೆಯಾಗಲಿ, ಭಾಗ್ಯ ಜ್ಯೋತಿಯಾಗಲಿ ಬಡ ಮಹಿಳೆಯರಿಗೆ ತಲುಪುತ್ತಿಲ್ಲ. ಈಗ ಸರಕಾರವು ಉಚಿತ ಭಾಗ್ಯಜ್ಯೋತಿಗೂ ಬಿಲ್ ಕೊಡುತ್ತಿದೆ. ಮೀಟರ್ ಅಳವಡಿಸಲಾಗಿದೆ. ಆಶ್ರಯ-ಅಂಬೇಡ್ಕರ್ ಮನೆಗಳು ಶ್ರೀಮಂತರ ಪಾಲಾಗಿವೆ. ಎಷ್ಟೋ ಕಡೆಗೆ ಆಶ್ರಯ ಮನೆಗಳು ಕಟ್ಟುತ್ತಿರುವಾಗಲೇ ಕುಸಿದುಬಿದ್ದಿವೆ. ಶೇ. 95 ಗ್ರಾಮಗಳಿಗೆ ಶೌಚಾಲಯಗಳಿಲ್ಲ, ಶೇ. 40 ಬಲತ್ಕಾರದ ಪ್ರಕರಣಗಳು ಶೌಚಕ್ಕೆ ಹೋದಾಗ ಘಟಿಸಿದೆ. ಪಟ್ಟಣ ಪ್ರದೇಶದ ಕೊಳಚೆ ಪ್ರದೇಶಗಳಲ್ಲಿಯೂ ಈ ಸಮಸ್ಯೆ ಬೃಹದಾಕಾರವಾಗಿದೆ. ಒಳಚರಂಡಿ ವ್ಯವಸ್ಥೆ ಇಲ್ಲದೆ ಊರಿಗೆ ಊರೇ ಗಬ್ಬು ನಾರುತ್ತಿರುತ್ತದೆ. ರಸ್ತೆ ವ್ಯವಸ್ಥೆ ಇಲ್ಲ.

ಮಹಿಳಾ ಶೌಚಾಲಯಗಳ ನಿರ್ಮಾಣಕ್ಕೆ ಮತ್ತು ಒಳಚರಂಡಿ ಸೌಲಭ್ಯಕ್ಕೆ 4ನೇ ಸಮ್ಮೇಳನವು ಒತ್ತಾಯಿಸಿದೆ. ವಿದ್ಯುಚ್ಛಕ್ತಿ ಖಾಸಗೀಕರಣ ಬಿಟ್ಟು ಬಡವರಿಗೆ ರೈತರಿಗೆ ಉಚಿತ ವಿದ್ಯುತ್ ಒದಗಿಸಲು ಸಮ್ಮೇಳನ ಒತ್ತಾಯಿಸಿದೆ. ಆಶ್ರಯ ಮತ್ತು ಅಂಬೇಡ್ಕರ್ ಮನೆಗಳನ್ನು ಗ್ರಾಮ ಸಭೆಗಳ ಮೂಲಕ ಬಡವರಿಗೆ ಒದಗಿಸಲು ಒತ್ತಾಯಿಸಿದೆ.

ಸಮ್ಮೇಳನದಲ್ಲಿ ನೀರು ಚರ್ಚೆಗೆ ಒಳಗಾಗಿದೆ. ರಾಜ್ಯದ ಶೇ. 40 ಜನತೆ ಕುಡಿಯುವ ನೀರಿನಿಂದ ವಂಚಿತರಾಗಿದ್ದಾರೆ. ಕುಗ್ರಾಮ ಮತ್ತು ಲಂಬಾಣಿ ತಾಂಡಾಗಳ ಜನರು ಕನಿಷ್ಠ 3 ರಿಂದ 4 ಕಿ.ಮೀ. ನಡೆದು ನೀರು ತರಬೇಕಾಗಿದೆ. ಪಟ್ಟಣಗಳಲ್ಲಿ ಮಹಿಳೆಯರು ನಸುಕಿನಲ್ಲೆದ್ದು ಕ್ಯೂ ನಿಲ್ಲಬೇಕಿದೆ. ಈಗ ಕುಡಿವ ನೀರಿನ ಮೇಲಿನ ಹಕ್ಕನ್ನು ಕಸಿದುಕೊಂಡು ನಮ್ಮ ಸರಕಾರವು ಆ ಹಕ್ಕನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಕೊಡಲು ನಿರ್ಧರಿಸಿದೆ. ಶುದ್ಧನೀರು ಬೇಕೆ.. ಬಿಸ್ಲೇರಿ ಬಾಟಲ್‌ನಲ್ಲಿ ದೊರೆಯುವುದು. ಆದರೆ ಲೀಟರ್ ಒದಕ್ಕೆ 15 ರೂಪಾಯಿ ಇದೆ. ಒಂದು ಲೀಟರ್ ಹಾಲಿಗಿಂತಲೂ ಒಂದು ಲೀಟರ್ ನೀರು ದುಬಾರಿ!!

ಈಗಾಗಲೇ ಕರ್ನಾಟಕದಲ್ಲಿ ಶುದ್ಧ ಮತ್ತು ಸಮರ್ಪಕ ನೀರು ಪೂರೈಸದ ಕಾರಣ ಅನೇಕ



ಕಲಾಪಗಳಲ್ಲಿ ಮಗ್ನರಾಗಿರುವ ಪ್ರತಿನಿಧಿಗಳು

ಜಿಲ್ಲೆಗಳಲ್ಲಿ ರೋಗಗಳಿಗೆ ಜನತೆ ಜೀವ ತೆತ್ತಿದ್ದಾರೆ. ಕಾಮಾಲೆ, ಕಾಲರಾ, ಕರುಳು ಬೇನೆಗಳು ಹರಡುತ್ತಿವೆ. ಈ ಒಂದೇ ವರ್ಷದಲ್ಲಿ ಕರ್ನಾಟಕದಾದ್ಯಂತ 35 ಕ್ಕೂ ಹೆಚ್ಚು ಮಕ್ಕಳು ಆಸು ನೀಗಿವೆ. ಸಮ್ಮೇಳನದಲ್ಲಿ ಪ್ರತಿನಿಧಿಗಳು ತಮ್ಮ ಈ ಸಮಸ್ಯೆಗಳನ್ನು ಬಿಡಿಸಿಟ್ಟರು.

ಆದ್ದರಿಂದ ಶುದ್ಧ ಮತ್ತು ಸಮರ್ಪಕ ನೀರಿನ ಸರಬರಾಜಿಗೆ ಸಮ್ಮೇಳನ ಆಗ್ರಹಿಸಿದೆ. ಹಾಗೂ ನೀರಿನ ಖಾಸಗೀಕರಣ ಕೈ ಬಿಡಲು ಒತ್ತಾಯಿಸಿದೆ.

ಸಾರ್ವಜನಿಕ ವಿತರಣಾ ವ್ಯವಸ್ಥೆ ಮತ್ತು ರೇಷನ್ ಕಾರ್ಡ್

ಜನತೆಯು ಎಲ್ಲದರ ತೆರಿಗೆಗಳನ್ನು ಕಡ್ಡಾಯವಾಗಿ ಕಟ್ಟುತ್ತಿದ್ದಾರೆ. ಅವರು ಕಟ್ಟುವ ತೆರಿಗೆಯಲ್ಲಿ ಅತ್ಯಂತ ಕಡಿಮೆ ದರದಲ್ಲಿ ಜೀವನಾವಶ್ಯಕ ವಸ್ತುಗಳನ್ನು ಬಡಜನತೆಗೆ ರೇಷನ್ ಅಂಗಡಿಗಳ ಮೂಲಕ ವಿತರಿಸಬಹುದು. ಆದರೆ ಸರಕಾರವು ಉದಾರೀಕರಣದಿಂದಾಗಿ ಜನರಿಗೆ 'ರೇಷನ್' ಕೊಡುವ ಕ್ರಮಕ್ಕೆ ಮುಂದಾಗುತ್ತಿಲ್ಲ. ಈಗಾಗಲೇ ಕೇಂದ್ರ ಸರಕಾರದ ಗೋಡೋನಿನಲ್ಲಿ 50 ಸಾವಿರ ಟನ್ ಗೋಧಿ ಕೊಳೆಯುತ್ತಿದೆ. ಆದರೆ ಬಡವರಿಗೆ ಹಂಚುವ ಮನಸ್ಸು ಸರಕಾರಕ್ಕೆ ಇಲ್ಲ. ಪಕ್ಕದ ಕೇರಳ ರಾಜ್ಯದಲ್ಲಿ ನೂರಕ್ಕೆ ಶೇಕಡ 93 ರಷ್ಟು ಬಡಜನತೆಗೆ ರೇಷನ್ ಕಾರ್ಡ್ ಹಂಚಲಾಗಿದೆ. ಕರ್ನಾಟಕದಲ್ಲಿ ಶೇಕಡ 18 ರಿಂದ 20 ರಷ್ಟು ಜನರಿಗೆ ಮಾತ್ರ ರೇಷನ್ ಕಾರ್ಡ್ ಹಂಚಲಾಗಿದೆ. ಉಳಿದವರಿಗೆ ಇಲ್ಲ. ಈಗ ಹಸಿರು ಕಾರ್ಡ್ ಬಣ್ಣ ಬದಲಿಸಿ ಹಳದಿ ಕಾರ್ಡ್ ಮಾಡಲಾಗಿದೆ. ಹಸಿರು ಕಾರ್ಡ್ ಉಳ್ಳವರಿಗೆ ದುಬಾರಿ ದರದ ರೇಷನ್ ಅಂದರೆ ಇದ್ದುದರಲ್ಲಿಯೇ ಕಡಿತ ಮಾಡಲಾಗಿದೆ. ಉಳಿದ ಬಡವರಿಗೆ ರೇಷನ್ ಕಾರ್ಡ್ ಇಲ್ಲ.

ಕೋಮುವಾದವನ್ನು ಹಿಮ್ಮೆಟ್ಟಿಸಿ.

ಹೌದು ಅ.ಭಾ. ಜನವಾದಿ ಮಹಿಳಾ ಸಂಘಟನೆಯ 4ನೇ ಸಮ್ಮೇಳನವು ಈ ಕರೆಕೊಟ್ಟಿದೆ. ಇಡೀ ದೇಶದ ತುಂಬ ಸಂಘ ಪರಿವಾರ ಹಚ್ಚಿದ ಕೋಮುದಳ್ಳುರಿಗೆ ಮಿತಿಯಿದೆಯೇ? ಈವರೆಗೆ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ವೈರತ್ವದ ಕತ್ತಿ ಮಸೆದ ಸಂಘ ಪರಿವಾರವು ಈಗ ಒಟ್ಟು ಅಲ್ಪಸಂಖ್ಯಾತರಿಗೆ ಧಮಕಿ ಹಾಕುತ್ತಿದೆ. ಅವರ ಪ್ರಾಣಕ್ಕೆ ಕುತ್ತು ತರುತ್ತಿದೆ. ನಾಲ್ಕು ಜನ ಕ್ರಿಶ್ಚಿಯನ್ ನನ್ಸ್ ಮೇಲೆ ಅತ್ಯಾಚಾರ ಮಾಡಿರುವರು. ಎಲ್ಲೆಲ್ಲಾ ಕೋಮುಗಲಭೆಗಳು ನಡೆದಿವೆಯೋ ಅಲ್ಲೆಲ್ಲ ಮಹಿಳೆಯರ ಮೇಲೆ ಹಲ್ಲೆ ಅತ್ಯಾಚಾರಗಳು ನಡೆದಿವೆ. ಸಂಘ ಪರಿವಾರದ ರಾಜಕೀಯ ಪಕ್ಷವಾದ ಬಿಜೆಪಿಯು ಕೇಂದ್ರದಲ್ಲಿ ಅಧಿಕಾರದಲ್ಲಿದೆ. ಬಿಜೆಪಿಯು ಸ್ವತಃ ಮನುವಾದ ಒಪ್ಪಿಕೊಂಡಿದೆ. ಅಂತಲೇ ಮಹಿಳಾ ಮೀಸಲಾತಿಯನ್ನು ಅದು ವಿರೋಧಿಸುತ್ತಿದೆ.

ದೇಶದ ಐಕ್ಯತೆ-ಸಮಗ್ರತೆಯನ್ನು ನಾಶಮಾಡುವ ಮೂಲಕ ಹಿಂದೂತ್ವ ರಾಜ್ಯ ತರಬೇಕೆನ್ನುವ ಸಂಘಪರಿವಾರ ಮತ್ತು ಬಿಜೆಪಿಗಳನ್ನು ಹಿಮ್ಮೆಟ್ಟಿಸಲೇಬೇಕಿದೆ. ಆರ್.ಎಸ್.ಎಸ್. ಒಂದರ್ಥದಲ್ಲಿ ರಾಷ್ಟ್ರೀಯ ಸರ್ವನಾಶ ಸಮಿತಿ"ಯಾಗಿದೆ ಎಂದು ರಾಷ್ಟ್ರೀಯ ಕಾರ್ಯದರ್ಶಿ ಬೃಂದಾಕಾರಟ್ ಹೇಳಿರುವುದು ಪ್ರಸ್ತುತ. ಕರ್ನಾಟಕದಲ್ಲಿ ಕೋಮು ಗಲಭೆಗಳಾದಾಗ ಹೆಚ್ಚಿನ ಆಕ್ರಮಣಕ್ಕೆ ಬಲಿಯಾದವರು ಮಹಿಳೆಯರೇ.

ಪ್ಲಾಂಟೇಶನ್ ಕೂಲಿ ಕೆಲಸ ಮಾಡುವ ಆಕೆಗೆ ಇಬ್ಬರು ಮಕ್ಕಳು ಮನೆವಾರ್ತೆಯನ್ನೆಲ್ಲಾ ಅವಳ ದುಡಿಮೆಯಿಂದಲೇ ನಿಬಾಯಿಸಬೇಕು. ಸಾಲದ್ದಕ್ಕೆ ಗಂಡನ 'ಸರಾಯಿ ದಾಹ' ಆಕೆಯ ಕೂಲಿ ಕಾಸಿನಿಂದಲೇ ತಣಿಯಬೇಕು.

ಒಮ್ಮೆ ಕುಡಿದ ಮತ್ತಲ್ಲೇ ಅವಳ ಗಂಡ ಬಂದ, ಕುಡಿತಕ್ಕೆ ಮತ್ತಷ್ಟು ಹಣ ಕೊಡುವಂತೆ ಕೇಳಿದ. ಕಾಸಿಲ್ಲದ ಆ ಬಡಪಾಯಿ ಹೆಂಗಸು ಅವನನ್ನು ಉಪಾಯವಾಗಿ ಸಮಾಧಾನ ಪಡಿಸುತ್ತಿದ್ದಂತೆ ಕೈಗೆ ಸಿಕ್ಕ ಮಚ್ಚನ್ನು ಹಿಡಿದು ಅವಳ ಮುಖಕ್ಕೆ ರಾಚಿ ರಕ್ತದ ಓಕುಳಿಯಾಡಿದ. ಗಂಡನೆಂಬ ರಾಕ್ಷಸಿ ಮುಖದಅರ್ಧಭಾಗ ಸೀಳಿತು. ನೆರೆಹೊರೆಯವರ ಸಹಾಯದಿಂದ ಸರ್ಕಾರಿ ಆಸ್ಪತ್ರೆ ಸೇರಿದಳು.

ಆಸ್ಪತ್ರೆಯಲ್ಲಿ ತೀವ್ರ ಗಾಯಗೊಂಡ ಅವಳಿಗೆ ಚಿಕಿತ್ಸೆ ನೀಡುವ ಪರಿಕರಗಳೇ ಇಲ್ಲ. ಹರಿದ ಗೋಣಿಗೆ ಹೊಲಿಗೆ ಹಾಕುವಂತೆ ಹರಿದ ಮುಖವನ್ನು ಹೊಲೆದು ಖಾಸಗಿ ಆಸ್ಪತ್ರೆ ಸೇರುವಂತೆ ಸರ್ಕಾರಿ ವೈದ್ಯರು ಆದೇಶ ನೀಡಿದರು. "ಪಾಪಿ ಸಮುದ್ರ ಹೊಕ್ಕರು ಮೊಳಕಾಲುದ್ದ ನೀರು" ಬಡವರಿಗೆ ಎಲ್ಲಿ ಸಿಗಬೇಕು ಆಸರೆ, ಹಾರೈಕೆ. ದುಡ್ಡಿದ್ದವರಿಗೆ ತಾನೆ ಎಲ್ಲೆಲ್ಲೂ ಬೇಡಿಕೆ. ಪಾಪ ಆ ಬಡಪಾಯಿ ಹೆಂಗಸಿನ ಮುಖ ಕೀವು ರಕ್ತ ತುಂಬಿ ಗಡಿಗೆಯ ಹಾಗೆ ಊದಿದೆ. ದಿಕ್ಕಿಲ್ಲದ ಅವಳ ಕಷ್ಟಕ್ಕೆ ಆಸರೆಯಾದದ್ದು ಜನವಾದಿ ಸಂಘಟನೆ, ಕೊಡಗಿನ ಪ್ರತಿನಿಧಿಯೊಬ್ಬರು ವಾರದ ಹಿಂದಷ್ಟೇ ನಡೆದ ಈ ಘಟನೆಯನ್ನು ಸಮ್ಮೇಳನದ ಮುಂದಿಟ್ಟಾಗ ಯಾರಿಗೆ ತಾನೆ ಹೃದಯ ಹಿಂಡಲಿಲ್ಲ. ಮನಸ್ಸು ಮಿಡಿಯಲಿಲ್ಲ.



ಬಹಿರಂಗಸಭೆಯಲ್ಲಿ ಬೃಂದಾ -ನೀಲಾ

ಚಿತ್ರಗಳು :ಅರುಣ್ ಕುಮಾರ್, ಮಂಗಳೂರು

ರಾಜಕೀಯ ಮತ್ತು ಮಹಿಳೆ

ಯಾವುದೇ ಕಾರಣಕ್ಕೂ ಮಹಿಳೆಯರು ರಾಜಕೀಯ ಅರಿಯಬಾರದು ಎಂಬ ನೀತಿಯನ್ನು ಈ ಸರಕಾರಗಳು ಹೊಂದಿವೆ. ಒಂದರ್ಥದಲ್ಲಿ ವರದಕ್ಷಿಣೆ ವಿರುದ್ಧ ಹೋರಾಡಿ, ಬಲತ್ಕಾರ, ದೌರ್ಜನ್ಯಗಳ ವಿರುದ್ಧ ಬೇಕಾದರೆ ಹೋರಾಡಿ ಆದರೆ ರಾಜಕೀಯ ದತ್ತ ಕಣ್ಣು ಹಾಕಬೇಡಿ. ಅಂಥ ಕ್ರಮ ನಿಮ್ಮ ವ್ಯಾಪ್ತಿಗೆ ಮೀರಿದ್ದು ಎಂಬ ಧೋರಣೆ ಈ ಸರಕಾರಗಳು ಹೊಂದಿವೆ. ಆದ್ದರಿಂದಲೇ ಎಷ್ಟೋ ಬಾರಿ ಚುನಾಯಿಸಲ್ಪಟ್ಟ ಮಹಿಳೆಗೆ ಸ್ವತಃ ಕಾರ್ಯಭಾರ ನಿಭಾಯಿಸಲು ಬಿಡುವುದಿಲ್ಲ. ಮಹಿಳೆಯರು ಹೆಸರಿಗೆ ಮಾತ್ರ ಅವರ ಹೆಸರಿನ ಮೇಲೆ ಮನೆಯ ಗಂಡು ಮಕ್ಕಳು ಇಲ್ಲವೇ ಪಕ್ಷದ ಗಂಡುಮಕ್ಕಳು. ಇಂಥ ನೀತಿಯನ್ನು ಸಾರ್ವತ್ರಿಕಗೊಳಿಸುವ ಮೂಲಕ ಒಟ್ಟು ಅರ್ಧ ಸಂಖ್ಯೆಯಷ್ಟಿರುವ ಮಹಿಳಾ ಸಮುದಾಯವನ್ನು ಮೂಲೆಗೆ ತಳ್ಳಲಾಗುತ್ತಿದೆ.

ಆದ್ದರಿಂದ ಸರಕಾರವು ಮಹಿಳಾ ವಿರೋಧಿಯಾದಾಗ, ಜನ ವಿರೋಧಿಯಾದಾಗ ಅಂಥ ಸರ್ಕಾರಗಳನ್ನು ಬದಲಿಸುವ ಹಕ್ಕು ಜನಸಮುದಾಯಕ್ಕಿದೆ. ಜನತೆಯ ಪರವಾಗಿ ಕೆಲಸ ಮಾಡುವ ಜಾತ್ಯಾತೀತ ಶಕ್ತಿಗಳನ್ನು ಅಧಿಕಾರಕ್ಕೆ ತರುವ ಹಕ್ಕು ಜನರಿಗಿದೆ.

ಸಂಘಟನೆ : ಕರ್ನಾಟಕದಲ್ಲಿ ಒಟ್ಟು ಮಹಿಳೆಯರ ನಡುವೆ ಜನವಾದಿ ಮಹಿಳಾ ಸಂಘಟನೆ ಕೆಲಸ ಮಾಡಬೇಕಾದ ಕುರಿತು ಪ್ರತಿನಿಧಿಗಳು ಚರ್ಚೆ ಮಾಡಿದರು. ಇದೇ ಮೊದಲಬಾರಿಗೆ ಮಹಿಳಾ ಪ್ರತಿನಿಧಿಗಳು ಸಂಘಟನೆಯನ್ನು ಕಟ್ಟಲು ವಹಿಸಬೇಕಾದ ಜವಾಬ್ದಾರಿಗಳ ಬಗ್ಗೆ ಮಾತಾಡಿದರು. ಜನವಾದಿಯು ನೊಂದ ಮಹಿಳೆಯರ ಕಣ್ಣೀರು ತೊಡೆಯುವ ಗೆಳತಿಯಾಗಬೇಕೆಂದರು. ಕೊಳೆತ ವ್ಯವಸ್ಥೆ ಕಿತ್ತೊಗೆಯಲು ಮುನ್ನುಗ್ಗಬೇಕೆಂದರು.

ಸಂಘಟಿತ ಶಕ್ತಿ ಮಾತ್ರ ಶೋಷಣಾರಹಿತ ಸಮಾಜ ತರಲು ಸಾಧ್ಯ ಎಂದು ಹೇಳಿದರು.

ಬೆಂಗಳೂರಿನ ಪ್ರತಿನಿಧಿ ಸಂಗಾತಿ ಹೇಳಿದ ಕತೆಯಿಂದ ಎಲ್ಲರ ಮನಸ್ಸು ಚುರ್ರೆಂದಿತು. ಆಕೆಯ ಗಂಡನನ್ನು ಲಾಕಪ್‌ನಲ್ಲಿ ಕೊಲೆ ಮಾಡಿದ್ದು, ಅವಳು ಎಷ್ಟೆಲ್ಲ ಹೋರಾಡಿದ್ದು, ನೋಡಿ ನಮ್ಮಂಥವರಿಗಾಗಿ ಜನವಾದಿ ಬೆಳೆಯಬೇಕು. ನಾವೆಲ್ಲ ಸೇರಿ ಜನವಾದಿ ಬೆಳೆಸುವಾ, ಎಂದು ಅವಳ ಎದೆಯಾಳದ ಮಾತುಗಳು ಒಟ್ಟು ಸಮ್ಮೇಳನದ ಆಶಯ ಬಿಂಬಿಸಿತು.

ಜನವಾದಿ ಮಹಿಳಾ ಸಂಘಟನೆಯು ಎಲ್ಲ ಮಹಿಳೆಯರ ಗೆಳತಿಯಾಗಿಸುವ ಪಣದೊಂದಿಗೆ ಇಡೀ ಸಮ್ಮೇಳನ ಸ್ಫೂರ್ತಿಯ ಸಂಕೇತವಾಗಿ ನಿಂತಿತ್ತು. ಕರಾವಳಿಯ ಮಡಿಲಲ್ಲಿ ಉಳ್ಳಾಲದ ವೀರರಾಣಿ ಅಬ್ಬಕ್ಕ ದೇವಿಯ ಚರಿತ್ರೆ ಇದೆ. ಅಲ್ಲಿಯ ಕಡಲು ಯಾವಾಗಲು ಅಬ್ಬಕ್ಕ ದೇವಿಯ ಕತೆ ಮೊರೆಯುತ್ತಿರುತ್ತದೆ. ಜೆ.ಎಂ.ಎಸ್. ಸಮ್ಮೇಳನವು ಅಬ್ಬಕ್ಕದೇವಿಯ ಕತೆಯ ಮೊರೆತಕ್ಕೆ ಇನ್ನೊಂದು ಸಂದೇಶ ಸೇರಿಸಿತು.

ಕುಂಚಗಳು ಬಿಂಬಿಸಿದ ಸಬಲೀಕರಣ

ಸಮ್ಮೇಳನದ ಪೂರ್ವಭಾವಿಯಾಗಿ "ಕಲಾವಿದರು ಕಂಡಂತೆ ಮಹಿಳಾ ಸಬಲೀಕರಣ" ಕುರಿತಾದ ಕಲಾವಿದರ ಕಾರ್ಯಗಾರ ಸಂಘಟಿಸಲಾಗಿತ್ತು. ಮಹಿಳಾ ಸಮ್ಮೇಳನದ ಅಂಗವಾಗಿ ನಡೆದ ಈ ಕಲಾಶಿಬಿರವನ್ನು ಖ್ಯಾತ ಕಲಾವಿದರಾದ ಎಂ.ಎಸ್. ಮೂರ್ತಿಯವರು ಉದ್ಘಾಟಿಸಿದರು. ಗಣೇಶ ಸೋಮಯಾಜಿಯವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಕಾರ್ಯಗಾರದ ಅಧ್ಯಕ್ಷತೆಯನ್ನು ಕೆ.ಎಸ್. ವಿಮಲಾ ವಹಿಸಿದ್ದರು. ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜು ಆವರಣದಲ್ಲಿ ನಡೆದ ಕಾರ್ಯಗಾರವನ್ನು ಹತ್ತಾರು ಕಲಾವಿದರು ಪ್ರತಿನಿಧಿಸಿ ಕುಂಚಗಳ ಮೂಲಕ "ಮಹಿಳಾ ಸಬಲೀಕರಣವನ್ನ" ಚಿತ್ರಿಸಿದರು.

ಬೆರಗುಗೊಳಿಸುವಂತಿದ್ದ ಬಣ್ಣ-ಬಣ್ಣದ ಚಿತ್ತಾರಗಳನ್ನು ಸಮ್ಮೇಳನದ ಸಭಾಂಗಣದಲ್ಲಿ ಪ್ರದರ್ಶಿಸಲಾಗಿದ್ದುದು, ನೋಡುಗರನ್ನು ವಿಚಾರಕ್ಕೆ ಹಚ್ಚಿದವು.

ನೀರು ಹನಿಹನಿಗೂ ಅದೆಷ್ಟು ಹೊಡೆದಾಟ

ರಾಜಧಾನಿ ಬೆಂಗಳೂರು ಸುಖ ಸಮೃದ್ಧಿಯ ನಗರವೆಂಬ ನಂಬಿಕೆ ಹಲವರಲ್ಲಿ ಇರಬಹುದು. ಆದರೆ ಒಂದು ಕೊಡ ಕುಡಿಯುವ ನೀರಿಗೆ 30 ಪೈಸೆ 40 ಪೈಸೆ ಹಣ ಕೊಟ್ಟು ಖಾಸಗಿ ಮಾಲಿಕರ ಮುಂದೆ ಭಿಕ್ಷುಕರಂತೆ ನಿಲ್ಲಬೇಕಾದ ಸ್ಥಿತಿ ಇರುವ ಬಗ್ಗೆ ಯಾವ ಮಂತ್ರಿ-ಮಹೋದಯರು ಮಾತನಾಡಲಿಕ್ಕಿಲ್ಲ. ನೀರಿನ ಬವಣೆಯಿಂದಾಗಿ ಜಗಳ, ಕದನ, ಕೊಲೆ, ಹಲ್ಲೆ ಮುಂತಾದ ಘಟನೆಗಳೆಲ್ಲಾ ನಡೆದು, ಪೋಲೀಸು ಕೋರ್ಟು ಕಛೇರಿಗಳಿಗೆ ಅಲೆದಾಡುವ ಮಂದಿ ಬೆಂಗಳೂರಿನಲ್ಲೇ ಅದೆಷ್ಟಿಲ್ಲ. ಬೆಂಗಳೂರಿನ ಹೊರವಲಯವಾದ ಭುವನೇಶ್ವರಿ ನಗರದಲ್ಲಿರುವುದು ಒಂದೇ ಕೊಳವೆ ಬಾವಿ. ಅದು ಕೈಕೊಟ್ಟರೆ ಇಂದಿಗೂ ಕೆರೆಯ ನೀರೇ ಕುಡಿಯುವ ನೀರು. ಆದರೆ ಸಾರಾಯಿ ಅಂಗಡಿಗಳು ಸುತ್ತ-ಮುತ್ತ ಎಷ್ಟು ಬೇಕು. ರಾಜಧಾನಿಯ ಕಥೆಯೇ ಹೀಗಾದರೆ ಉಳಿದ ಕಡೆಯ ಪರಿಸ್ಥಿತಿ ಇನ್ನೂ ಹೇಗಿರಬೇಕು. ನೀರಿನಿಂದ ನಾಗರೀಕತೆ ಎನ್ನುವ ಮಾತು ಸುಳ್ಳಾಗುತ್ತಿದೆ. ನೀರಿನಿಂದ ರಾಜಕೀಯ, ನೀರಿನಿಂದ ಲಾಭಗಳಿಕೆ ಮುಂತಾದ ಮಾತುಗಳು ಅರ್ಥಪಡೆಯುತ್ತಿವೆ.

ಮಹಿಳಾ ಸಮ್ಮೇಳನ - ಮಂಗಳೂರು

ಕಡಲ ತಡಿಯಲ್ಲಿ ಸಂಭ್ರಮದ ಸಿದ್ಧತೆ

ಪ್ರಭಾ ಎನ್.

ಸಮ್ಮೇಳನದ ಸಭಾಂಗಣಕ್ಕೆ ಪ್ರವೇಶಿಸುವ ಮುಂಚೆ ಪ್ರತಿನಿಧಿಗಳಿಗೆ ಸ್ವಾಗತ ಕೋರುವ ಸಹೋದರ ಸಂಘಟನೆಗಳ ಶುಭಾಶಯ ಹೊತ್ತ, ಬ್ಯಾನರ್‌ಗಳು, ಜಗತ್ತಿನ ಶ್ರೇಷ್ಠ ಚಿಂತಕರ ಭಾವ ಚಿತ್ರಗಳು, ಅವರ ಮಹಿಳಾ ಪರ ವಿಚಾರ ವಂತಿಕೆಯ "ನುಡಿಗಟ್ಟು"ಗಳು ಮಧುಮಗಳಂತೆ ಸಿಂಗಾರಗೊಂಡಿದ್ದ ಸಭಾಂಗಣ. ಸಭಾಂಗಣದ ಹೊರಗಿನ ಬಿಳಿ-ಕೆಂಪು ಬಣ್ಣದ ತೋರಣಗಳು ಎಂತವರನ್ನು ಪುಳಕಿತ ಗೊಳಿಸುವಂತಿದ್ದವು. ಕಲಾವಿದರ, ಸ್ವಯಂ-ಸೇವಕರ, ದಣಿವಿಲ್ಲದ ಶ್ರಮ ಬೆರಗು ಗೊಳಿಸುವ ಅಲಂಕಾರಗಳನ್ನು ನಿರ್ಮಿಸಿದ್ದವು. ಸಂಭ್ರಮ ತುಂಬುವಲ್ಲಿ ಯಶಸ್ವಿಯಾಗಿದ್ದವು.

ಪ್ರಜಾಪ್ರಭುತ್ವ, ಸಮಾನತೆ, ಮಹಿಳಾ ವಿಮೋಚನೆಯ ಸಂದೇಶ ಸಾರುವ ಶ್ವೇತ ಪತಾಕೆಯನ್ನು ಸಂಘಟನೆಯ ಹಿರಿಯ ಸದಸ್ಯರಾದ ಪದ್ಮಾವತಿಯವರು ಹಾರಿಸುವ ಮೂಲಕ 16ರಂದು ಸಮ್ಮೇಳನ ಅಧಿಕೃತವಾಗಿ ಪ್ರಾರಂಭಗೊಂಡಿತು.

ಮಹಿಳಾ ಆಂದೋಲನ ಬೆಳೆಸುವ ಹುಮ್ಮಸ್ಸು ಹುಟ್ಟಿಸಿದ ಕಾರ್ಯಕ್ರಮಗಳು

ಯಶಸ್ವಿ ಕಲಾಪಗಳು

ಮೂರು ದಿನಗಳ ರಾಜ್ಯ ಸಮ್ಮೇಳನದ ಕಾರ್ಯಕಲಾಪಗಳು ಸುಗಮವಾಗಿ ನಡೆಯಲು ಸಹಕಾರಿಯಾಗುವಂತೆ ಅಧ್ಯಕ್ಷೀಯ ಮಂಡಳಿ, ದಾಖಲಾತಿ ಮಂಡಳಿ ಪರಿಚಯ ಪತ್ರ ಮಂಡಳಿಗಳನ್ನು ಆಯ್ಕೆ ಮಾಡಲಾಗಿತ್ತು. 17ರ ಮಧ್ಯಾಹ್ನ ಪ್ರಾರಂಭಗೊಂಡ ಪ್ರತಿನಿಧಿ ಅಧಿವೇಶನವನ್ನುದ್ದೇಶಿಸಿ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ. ನೀಲಾ ವರದಿ ಮಂಡಿಸಿದರು. ಪ್ರತಿನಿಧಿಗಳಿಂದ ಮೆರವಣಿಗೆ ಹೊರಟಾಗ ಹಿಂಬದಿಯಿಂದ ಸಾವಿರಾರು ಮಹಿಳೆಯರು ಸಮವಸ್ತ್ರದಾರಿಗಳನ್ನು ಅನುಸರಿಸಿದರು. ಜೊತೆಗೆ ಸಿಐಟಿಯು, ಡಿವೈಎಫ್‌ಐ, ಎಸ್.ಎಫ್.ಐ, ರೈತ ಸಂಘಟನೆಯ ಸಂಗಾತಿಗಳ ಬೆಂಬಲ ನಡಿಗೆ, ಮಹಿಳಾ ಮೋಚನೆಯ ಘೋಷಣೆಗೆ ಇವರ ದನಿಯೂ ಸೇರ್ಪಡೆ ಮಂಗಳೂರಿನ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ಮಹಿಳಾ ಮೆರವಣಿಗೆ ಉದಾರೀಕರಣದ ರೂವಾರಿಗಳಿಗೆ, ಜನವಿರೋಧಿ ಸರ್ಕಾರದ ನೀತಿಗಳಿಗೆ ಮಹಿಳಾ ವಿರೋಧಿ ಪಾಳೆಯಗಾರಿ ಮೌಲ್ಯಗಳಿಗೆ, ಜನತೆಯ ಒಗ್ಗಟ್ಟು ಮುರಿಯುವ ಕೋಮುವಾದಿಗಳಿಗೆ ಧಿಕ್ಕಾರ ಕೂಗುವ ಮೂಲಕ ಸಮಾಜದ ಬಗೆಗಿನ ಕಾಳಜಿಯನ್ನು ದಾಖಲಿಸಿತು. ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಗೆ ಎಲ್ಲ ಕ್ಷೇತ್ರಗಳಲ್ಲೂ ಅರ್ಧಪಾಲು ಬೇಕೆಂದು ಆಗ್ರಹ ಪಡಿಸುವ ವಿಭಿನ್ನ ಘೋಷಣೆಗಳನ್ನು ಮೆರವಣಿಗೆಯುದ್ದಕ್ಕೂ ಮಾರ್ಧನಿಸಿದರು,

ಆಕರ್ಷಕ ಮೆರವಣಿಗೆ ನೆಹರು ಮೈದಾನದಲ್ಲಿ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು. ನೆತ್ತಿ ಸುಡುತ್ತಿದ್ದ ಸೂರ್ಯ ಬಹಿರಂಗ ಸಭೆಗೆ ಅನುವಾಗಲೆಂಬಂತೆ ಮೆಲ್ಲನೆ ಜಾರಲಾರಂಭಿಸಿದ ಹಾಗೆ ಬಹಿರಂಗ ಸಭೆಯನ್ನು ಪ್ರಾರಂಭಗೊಳಿಸಿದ್ದು "ಮಹಿಳಾ ವೀರಗಾಸೆ ತಂಡ". ಬೆಂಗಳೂರಿನ 'ಸ್ನೇಹಾ ವೀರಗಾಸೆ ತಂಡದ' ಮಹಿಳೆಯರು ಪುರುಷರಿಂದಲೇ ವೀರಗಾಸೆ ಸಾಧ್ಯ ಎನ್ನುವ, ಸಾಂಪ್ರದಾಯಿಕ ಮಿತಿಗಳನ್ನು ಮೀರಿ ಪುರುಷರಿಗೆ



ಸಿಂಹಾವಲೋಕನಕ್ಕೆ ಆಹ್ವಾನವಿತ್ತರು. ಸರಿಸುಮಾರು 30ಕ್ಕೂ ಹೆಚ್ಚು ಪ್ರತಿನಿಧಿಗಳು ವರದಿಯ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ವರದಿಯನ್ನು ಪುಷ್ಟೀಕರಿಸಿದರು. ಸಮ್ಮೇಳನದ ಎರಡನೇ ದಿನವನ್ನು ಇಡಿಯಾಗಿ ಪ್ರತಿನಿಧಿಗಳ ಚರ್ಚೆಗೇ ಮುಡಿಪಾಗಿಟ್ಟಿದ್ದು ಸಂಘಟನೆಯ ಪ್ರಜಾಪ್ರಭುತ್ವೀ ಕಾರ್ಯವೈಖರಿಗೆ ಅತ್ಯುತ್ತಮ ಉದಾಹರಣೆ ಎನ್ನಬಹುದು.

ಮೂರನೆಯ ದಿನ ಪ್ರತಿನಿಧಿಗಳ ಚರ್ಚೆಗೆ ಕಾರ್ಯದರ್ಶಿಗಳಿಂದ ಮರುತ್ತರ. ನಂತರ ಮುಂದಿನ ಸಮ್ಮೇಳನದವರೆಗೆ ಸಂಘಟನೆಯನ್ನು ಮುನ್ನಡೆಸಲು ಹೊಸ ರಾಜ್ಯ ಸಮಿತಿಯ ಆಯ್ಕೆ, ಬರುವ ನವೆಂಬರ್‌ನಲ್ಲಿ ನಡೆಯಲಿರುವ ಅಖಿಲ ಭಾರತ ಸಮ್ಮೇಳನಕ್ಕೆ ಪ್ರತಿನಿಧಿಗಳ ಆಯ್ಕೆ ಮುಂತಾದ ಪ್ರಕ್ರಿಯೆಗಳು ನಡೆದ ನಂತರ ಸ್ವಯಂ ಸೇವಕರಿಗೆ ಸಂಘಟಕರಿಗೆ ಪ್ರತಿನಿಧಿಗಳಿಂದ ಅಭಿನಂದನೆ, ಕೃತಜ್ಞತೆಗಳನ್ನು ಸಲ್ಲಿಸಿ ಮುಂದೆ ಹೆಜ್ಜೆ ಹಾಕಿದ್ದು ಅತ್ಯಾಕರ್ಷಕ ಮೆರವಣಿಗೆ ಹಾಗೂ ಬಹಿರಂಗ ಸಭೆಯ ಕಡೆಗೆ.

ಆಕರ್ಷಕ ಮಹಿಳಾ ಮೆರವಣಿಗೆ

ಕೆಂಪುರವಿಕೆ ಬಿಳಿ ಸೀರೆಯನ್ನುಟ್ಟಿದ್ದ ನೂರಾರು ಸಮವಸ್ತ್ರದಾರಿಗಳು ಮಂಗಳೂರಿನ ಸಾಂಪ್ರದಾಯಿಕ ಕೆಂಪು ಛತ್ರಿಗಳನ್ನಿಡಿದು ಬಾವುಟಗುಡ್ಡದಿಂದ ನೆಹರೂ ಮೈದಾನಕ್ಕೆ. ಸರಿಸಮನಾಗಿ 'ವೀರಗಾಸೆ" ಪ್ರದರ್ಶಿಸಿ ಹಿಂದಿನ ಮೂರು ದಿನಗಳ ಕಾಲ ಮಹಿಳಾ ಸಾಮರ್ಥ್ಯದ ಬಗ್ಗೆ ನಡೆಸಿದ್ದ ಚರ್ಚೆಯನ್ನು ಪುಷ್ಟೀಕರಿಸಿ ಸಾಂಪ್ರದಾಯಿಕ ಚೌಕಟ್ಟುಗಳನ್ನು ಮೀರಲು ಉತ್ಸಾಹ ತುಂಬಿದರು.

ಹುಮ್ಮಸ್ಸು ತಂದ ಬಹಿರಂಗ ಸಭೆ

ನಂತರದಲ್ಲಿ ನಡೆದ ಬಹಿರಂಗ ಸಭೆಯನ್ನು ದ್ದೇಶಿಸಿ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಟ್ ಸುಮಾರು ಒಂದು ಗಂಟೆಗಳ ಕಾಲ ಮಹಿಳೆಯರ ಬದುಕಿನ ಕುರಿತು ಸಮಾಜದ ಭಾಗವಾಗಿ ಮಹಿಳೆಯನ್ನು ಗುರುತಿಸಬೇಕಾದ ಅನಿವಾರ್ಯತೆಯ ಕುರಿತು, ಸಮಾಜದಲ್ಲಿನ ಅಪಾಯಕಾರಿ ಬೆಳವಣಿಗೆಗಳ ಕುರಿತು ಬಾಷಣ ಮಾಡಿದರು. ಉದಾರೀಕರಣ ಹಾಗೂ ಕೋಮುವಾದವನ್ನು ಹಿಮ್ಮೆಟ್ಟಿಸಲು ಸಜ್ಜಾಗುವಂತೆ ಕರೆ ನೀಡಿ ಕಾರ್ಯಕರ್ತರಲ್ಲಿ ಹುಮ್ಮಸ್ಸನ್ನ ಹೊಸ ಚೈತನ್ಯವನ್ನು ತುಂಬಿದರು.

ಸಭೆಯಲ್ಲಿ ಸಮ್ಮೇಳನ ಕೈಗೊಂಡ ನಿರ್ಣಯಗಳನ್ನು ಎನ್. ಪ್ರಭಾ ಮಂಡಿಸಿದರು. ಎಸ್. ವರಲಕ್ಷ್ಮಿ, ಕೆ.ಎಸ್. ವಿಮಲಾ ಉಪಸ್ಥಿತರಿದ್ದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ರಾಜ್ಯ ಅಧ್ಯಕ್ಷರಾದ ಕೆ. ನೀಲಾ ವಹಿಸಿದ್ದರು. ಎಸ್. ಸತ್ಯಾ ಕಾರ್ಯಕ್ರಮ ನಡೆಸಿಕೊಟ್ಟರು. ಬಹಿರಂಗ ಸಭೆಗೆ ಹೇಮಲತ ವಂದನೆಗಳನ್ನು ಸಲ್ಲಿಸಿದರು.

ಜನರ ಮಹತ್ತರ ನಿರೀಕ್ಷೆಗಳಂತೆ ನಮ್ಮ ಆಡಳಿತ

ನೂತನ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ



ವಿಶ್ವದಾಖಲೆಯ ಗೆಲುವು ಸಾಧಿಸಿದ ಪ.ಬಂಗಾಳದ ಎಡರಂಗದ ನೂತನ ಮುಖ್ಯಮಂತ್ರಿಯವರೊಂದಿಗೆ ನಡೆಸಿದ ಸಂದರ್ಶನವಿದು. ಈ ಗೆಲುವಿನ ಕಾರಣಗಳನ್ನು ಸರ್ಕಾರದ ಆದ್ಯತೆಗಳು, ಈ ಚುನಾವಣೆಯ ಫಲಿತಾಂಶಗಳು ರಾಷ್ಟ್ರದ ರಾಜಕಾರಣದ ಮೇಲೆ ಉಂಟು ಮಾಡಿರುವ ಪರಿಣಾಮಗಳು, ಕೇಂದ್ರ ಸರ್ಕಾರದೊಂದಿಗಿನ ಸಂಬಂಧಗಳು ಮುಂತಾದ ಬಗ್ಗೆ ಮಾತನಾಡಿದ್ದಾರೆ.

● ಇತರೆ ಎಲ್ಲಾ ಪಕ್ಷಗಳು "ಆಡಳಿತ ಸರ್ಕಾರದ ವಿರುದ್ಧದ ಮನೋಬಾವಕ್ಕೆ' ಬಲಿಯಾಗಿರುವಾಗ ಪಶ್ಚಿಮ ಬಂಗಾಳದಲ್ಲಿ ಹೇಗೆ ಎಡರಂಗ ಸತತವಾಗಿ 6ನೇ ಬಾರಿ ಜಯಭೇರಿ ಬಾರಿಸಲು ಸಾಧ್ಯವಾಯಿತು?

ಮುಖ್ಯ ಕಾರಣವೆಂದರೆ ಕಳೆದ 24 ವರ್ಷಗಳಲ್ಲಿ ಏನೋ ಸ್ವಲ್ಪವಾದರೂ, ನಾವು ಅದನ್ನು ಜನತೆಗೆ ನೀಡಿದ್ದೇವೆ ಎಂಬುದು. ಗ್ರಾಮೀಣ ಪ್ರದೇಶಗಳಲ್ಲಿ ನಮ್ಮ ಸಾಧನೆಯ ಅಡಿಪಾಯವೆಂದರೆ ಪಂಚಾಯತಿ ವ್ಯವಸ್ಥೆ. ಇದರ ಪರಿಣಾಮವನ್ನು ಗ್ರಾಮೀಣ ಪ್ರದೇಶಗಳಲ್ಲಿನ ಶಿಕ್ಷಣ ವ್ಯವಸ್ಥೆಯ ವಿಸ್ತರಣೆಯಲ್ಲಿ ಗುರುತಿಸಬಹುದು. ಇಂದು ನಮ್ಮ ರಾಜ್ಯದ ಸಾಕ್ಷರತೆಯ ಪ್ರಮಾಣ ಶೇ. 70ರಷ್ಟು ನಗರ ಪ್ರದೇಶಗಳಲ್ಲಿಯೂ ಸಹಾ ನಾವು ಪಟ್ಟಣಗಳನ್ನು, ರಸ್ತೆ, ಸೇತುವೆಗಳನ್ನು ಅಭಿವೃದ್ಧಿ ಪಡಿಸಿದೆವು. ಆಡಳಿತವನ್ನು ವಿಕೇಂದ್ರೀಕರಿಸಿ, ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚು ಸಮರ್ಪಕ ಅಧಿಕಾರ ನೀಡಿದೆವು. ಕೈಗಾರಿಕೀಕರಣಕ್ಕೆ ಸಂಬಂಧಿಸಿದಂತೆ ನಾವು ತಡವಾಗಿ ಪ್ರಾರಂಭಿಸಿದರೂ, ಕಳೆದ 5 ವರ್ಷಗಳ ನಮ್ಮ ಸಾಧನೆ ಉತ್ತಮವಾಗಿದೆ. ಕೋಮುಸೌಹಾರ್ದತೆಯನ್ನು ಕಾಪಾಡುವ ನಮ್ಮ ಸಾಧನೆಯೇನೂ ಕಡಿಮೆಯದಲ್ಲಾ, ಈ ಎಲ್ಲವು ಚುನಾವಣೆಯಲ್ಲಿ ಲೆಕ್ಕಕ್ಕೆ ಬಂದಿವೆ. ಜನತೆ ನಮ್ಮನ್ನು ಹಾಗೂ ನಮ್ಮ ಎದುರಾಳಿಗಳಿಬ್ಬರನ್ನು ಗಮನಿಸಿ ಎಡರಂಗದ ವಿರುದ್ಧ ಸಮಯ ಸಾಧಕ ಹೊಂದಾಣಿಕೆಯನ್ನು ತಿರಸ್ಕರಿಸಿ ಈ ಐತಿಹಾಸಿಕ ಗೆಲುವಿಗೆ ಕಾರಣೀಭೂತರಾಗಿದ್ದಾರೆ.

● ಪ್ರಾರಂಭದಿಂದಲೂ ನೀವು ಮತ್ತು ಇತರೆ ಎಡ ಪಂಥೀಯ ಮುಖಂಡರು ಎಡರಂಗಕ್ಕೆ ಬಹುಮತವನ್ನು ನಿರೀಕ್ಷಿಸುತ್ತಿದ್ದೀರಿ. ಹೇಗೆ ಆ ವಿಶ್ವಾಸ ಮೂಡಿತ್ತು?

ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ನಮ್ಮ ಚುನಾವಣಾ ಪ್ರಚಾರ ಸಭೆಗಳಿಗೆ ತಾವಾಗಿಯೆ ಬರುತ್ತಿದ್ದದನ್ನು ನಾನು ಚುನಾವಣಾ ಪ್ರಚಾರದಲ್ಲಿ ಗಮನಿಸಿದೆ. ಮಧ್ಯಮ ವರ್ಗದ ಜನತೆ ಕೂಡ ನಮ್ಮ ಪರವಾಗಿ ಬರುತ್ತಿದ್ದರು. ಕೈಗಾರಿಕೋದ್ಯಮಿಗಳ ಒಕ್ಕೂಟದೊಂದಿಗೆ ನಾನು ಚರ್ಚಿಸಿದಾಗ ನನ್ನ ಗಮನಕ್ಕೆ ಬಂದ ಅಂಶವೆಂದರೆ, ಅವರು ಸಹಾ ಅನಿರೀಕ್ಷಿತ-ಅಸ್ಪಷ್ಟ ಬದಲಾವಣೆ ಬಯಸುತ್ತಿಲ್ಲ ಎಂಬುದು. ಈ ಎಲ್ಲವು, ನಾವು ಸ್ಪಷ್ಟ ಬಹುಮತದೊಂದಿಗೆ ಗೆಲುವು ಸಾಧಿಸುತ್ತೇವೆ ಎಂದು ಅಂದಾಜಿಸಲು ಸಹಕಾರಿಯಾದವು. ವಾಸ್ತವವಾಗಿ ನಾವು ಆರು ಕ್ಷೇತ್ರಗಳನ್ನು ಕೂದಲೆಳೆಯ ಅಂತರದಲ್ಲಿ ಸೋತಿದ್ದೇವೆ. ಮಾಜಿ ವಿದ್ಯಾರ್ಥಿ ಮುಖಂಡರಾದ ಸುಜನ್ ಚಕ್ರವರ್ತಿಯವರು 5 ಮತಗಳಿಂದ ಪರಾಭವಗೊಂಡಿದ್ದಾರೆ.

● ಮಮತಾ ಬ್ಯಾನರ್ಜಿಯವರ ರಿಗ್ಗಿಂಗ್ ಅಪಾದನೆಯ ಬಗ್ಗೆ ನಿಮ್ಮ ಅಭಿಪ್ರಾಯ ?

ಅವರು ಸೋತಾಗಲೆಲ್ಲಾ ಈ ರಿಗ್ಗಿಂಗ್ ಕಾರಣವನ್ನು ಎತ್ತುತ್ತಾರೆ. ಒಂದುವೇಳೆ ಅವರ ಅಪಾದನೆ ನಿಜವಾಗಿದ್ದರೆ, ಅವರ ಮೈತ್ರಿಕೂಟಕ್ಕೆ ಹೇಗೆ ಅಷ್ಟೊಂದು ಪ್ರತಿಶತ ಮತ ಬಂದವು? ಹೇಗೆ ಅವರಿಗೆ 86 ಸೀಟುಗಳು ಲಭಿಸಿದವು? ಚುನಾವಣಾ ಆಯೋಗ ಚುನಾವಣೆಗೆ ನಾವು ಮಾಡಿದ ವ್ಯವಸ್ಥೆಯನ್ನು ಪ್ರಶಂಸಿಸಿದೆ. ನನ್ನ ನೆನಪಿನಂತೆ ಹಿಂದೊಮ್ಮೆ ಟಿ.ಎನ್. ಶೇಷನ್‌ರವರೇ ಚುನಾವಣೆಗೆ ನಾವು ಮಾಡಿದ ವ್ಯವಸ್ಥೆಯನ್ನು ಅಭಿನಂದಿಸಿ ಪತ್ರಬರೆದಿದ್ದರು.

● ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಾತ್ರ ಏನಾಗಿತ್ತು?

ಕಾಂಗ್ರೆಸ್ ಮೂಲತಹಃ ಬಂಡವಾಳಶಾಹಿ ಭೂಮಾಲಿಕರ ಪಕ್ಷ.

ಅದು ಎಂದೂ ಸಕಾರಾತ್ಮಕ ಪಾತ್ರವಹಿಸಲೆ ಇಲ್ಲ. ಪ್ರಸಕ್ತ ಚುನಾವಣೆಗಳಲ್ಲಿ ನಮ್ಮ ಹಾಗೂ ಕೇರಳ ರಾಜ್ಯಗಳೆರಡರಲ್ಲೂ ಅವರು ಕಮ್ಯೂನಿಸ್ಟರನ್ನು ಸೋಲಿಸಲು ಕೋಮುವಾದಿ ಶಕ್ತಿಗಳೊಂದಿಗೆ ಕೈಜೋಡಿಸಿದ್ದಾರೆ. ಅವರಿಗೆ ಕಮ್ಯೂನಿಸ್ಟರೆ ದೊಡ್ಡ ಶತ್ರುಗಳು! ಕೋಮುವಾದದ ವಿರುದ್ಧದ ಹೋರಾಟದಲ್ಲಿ ಮಾತ್ರವೇ ನಾವು ಅವರೊಂದಿಗೆ ಸಹಕರಿಸಬಹುದಿತ್ತು. ಆದರೆ ಆ ವಿಷಯದಲ್ಲಿಯೂ ಸಹಾ ಅವರು ಕೋಮುವಾದಿ ಶಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳುತ್ತಿದ್ದಾರೆ.

● ನಿಮ್ಮ ಸರ್ಕಾರದ ಆಧ್ಯತೆಗಳೇನು?

ರಾಜ್ಯದ ಜನತೆ ಎಡರಂಗದ ಮೇಲಿರಿಸಿರುವ ಅಭೂತಪೂರ್ವ ವಿಶ್ವಾಸ ವಾಸ್ತವದಲ್ಲಿ ನನ್ನ ಜವಾಬ್ದಾರಿಯನ್ನು ಹೆಚ್ಚಿಸಿದೆ. ನಮ್ಮ ಸರ್ಕಾರದಿಂದ ಅವರು ಮಹತ್ತರ ನಿರೀಕ್ಷೆಗಳನ್ನೊಂದಿದ್ದಾರೆ, ಪ್ರಣಾಳಿಕೆಯಲ್ಲಿ ಹೇಳಿರುವ ಅಂಶಗಳನ್ನು ಕಾರ್ಯರೂಪಕ್ಕಿಳಿಸುವುದು ನನ್ನ ಜವಾಬ್ದಾರಿಯಾಗಿದೆ. ಮೂಲತಃ 3 ಅಥವಾ 4 ಆಧ್ಯತೆಯ ವಲಯಗಳಿವೆ, ಮೊದಲನೆಯದು ಪ್ರಮುಖವಾಗಿ ನಗರ ಪ್ರದೇಶದ ನಿರುದ್ಯೋಗ ಸಮಸ್ಯೆಯ ಸವಾಲನ್ನು ಎದುರಿಸುವುದು ಇದಕ್ಕೆ ನಾವು ಕೈಗಾರಿಕೀಕರಣ ಪ್ರಕ್ರಿಯೆಯನ್ನು ತೀವ್ರಗೊಳಿಸಬೇಕು. ಕೈಮಗ್ಗ, ರೇಷ್ಮೆ, ಸಿದ್ಧ ಉಡುಪು, ಕರಕುಶಲ, ಇತರೆ ವಲಯಗಳಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಗಮನ ಕೇಂದ್ರೀಕರಿಸಬೇಕಿದೆ. ಇದು ಹೊಸ ಉದ್ಯೋಗಗಳ ಸೃಷ್ಟಿಗೆ ಸಹಾಯವಾಗುತ್ತದೆ.

ನಾವು ಗಮನಹರಿಸುತ್ತಿರುವ ಎರಡನೆಯ ವಲಯವೆಂದರೆ ಮಾಹಿತಿ ತಂತ್ರಜ್ಞಾನ. ಇದು ಹೊಸ ಮತ್ತು ಹೊರ ಹೊಮ್ಮುತ್ತಿರುವ ವಲಯ, ಬಂಗಾಳದ ವಿದ್ಯಾವಂತ ಯುವಕ-ಯುವತಿಯರ ಉದ್ಯೋಗ ಅವಶ್ಯಕತೆಯನ್ನು ಈಡೇರಿಸುವ ಶಕ್ತಿಯೊಂದಿದೆ. ನಮ್ಮ ರಾಜ್ಯದಿಂದ ಈಗಾಗಲೇ 700 ಕೋಟಿ ರೂಗಳ soft ware ಅನ್ನು ರಫ್ತು ಮಾಡಿದ್ದೇವೆ. ಕೃಷಿ ಆಧಾರಿತ ಕೈಗಾರಿಕೆ ನಮ್ಮ ಆದ್ಯತೆಯ ಮತ್ತೊಂದು ವಲಯ.

ತಮಗೆ ತಿಳಿದಿರುವಂತೆ ರಾಷ್ಟ್ರದಲ್ಲಿ ಪಶ್ಚಿಮ ಬಂಗಾಳ ಕೇವಲ ಅತಿ ಹೆಚ್ಚು ಅಕ್ಕಿ ಬೆಳೆಯುವ ರಾಜ್ಯಮಾತ್ರವಲ್ಲ, ಜೊತೆಗೆ ದೊಡ್ಡ ಹಣ್ಣು ತರಕಾರಿ, ಮೀನು, ಹೂವು ಇತ್ಯಾದಿ ಉತ್ಪಾದಿಸುವ ರಾಜ್ಯ ಕೂಡ ಈ ವಲಯಗಳ ಆಧಾರಿತವಾದ ಗ್ರಾಮೀಣ ಮತ್ತು ನಗರಗಳೆರಡರಲ್ಲೂ ಉದ್ಯೋಗ ಸೃಷ್ಟಿಯ ಅವಕಾಶಗಳನ್ನು ಉಪಯೋಗಿಸಿಕೊಳ್ಳಲಿದ್ದೇವೆ. ಹಲ್ದಿಯಾ ರಸಾಯನಿಕ ಮತ್ತು ಪ್ಲಾಸ್ಟಿಕ್ ಕೈಗಾರಿಕೆಗಳನ್ನು ನಾವು ಉತ್ತೇಜಿಸಬೇಕು.

ಇದರೊಂದಿಗೆ ಗ್ರಾಮೀಣ ಪ್ರದೇಶಗಳಲ್ಲಿನ ಭೂ ಸುಧಾರಣೆಯ ಲಾಭಗಳನ್ನು ಕ್ರೋಡೀಕರಿಸಿಕೊಳ್ಳುವ ಅವಶ್ಯಕತೆ ಇದೆ. ಎಡರಂಗದ ಮೊದಲ ಸರ್ಕಾರ ಬಂದಾಗ ನೀರಾವರಿ ಭೂಮಿ ಶೇ. 39 ರಷ್ಟಿತ್ತು. ಪ್ರಸ್ತುತ ಶೇ. 62ರಷ್ಟಾಗಿದೆ. ಮುಂದಿನ 5 ವರ್ಷಗಳಲ್ಲಿ

(ಪುಟ 2 ಕ್ಕೆ)

ಅಮೇರಿಕೀಕರಣದ ವಿರುದ್ಧ ಬಂಡೆದ್ದ ಜನ

ಕೆನಡಾದ ನಗರ ಕ್ವಿಬೆಕ್‌ನಲ್ಲಿ ಇತ್ತೀಚೆಗೆ ಅಮೆರಿಕ (ದಕ್ಷಿಣ ಮತ್ತು ಉತ್ತರ) ಖಂಡಗಳ 34 ದೇಶಗಳ ಶೃಂಗಸಭೆ ನಡೆಯಿತು. ವಿಶ್ವಬ್ಯಾಂಕ್, ಐಎಂಎಫ್, ಡಬ್ಲ್ಯುಟಿಓಗಳಿಗೆ ಸೋದರ ಹುಟ್ಟಿದ - ಎಫ್‌ಟಿಎಎ (FTAA_ ಅಮೆರಿಕದ ಮುಕ್ತ ವ್ಯಾಪಾರ ` ಪ್ರದೇಶ) ಜನ-ವಿರೋಧಿ ಬಂಡವಾಳಶಾಹಿ ಜಾಗತೀಕರಣದ ಇನ್ನೊಂದು



ಪ್ರಹಾರ ಇದು. ಅಮೆರಿಕದ ಎರಡು ಖಂಡಗಳ ಜನಪರ ಸಂಘಟನೆಗಳು - ಟ್ರೇಡ್‌ಯೂನಿಯನ್‌ಗಳು, ಪರಿಸರವಾದಿಗಳು, ಶಾಂತಿಪ್ರಿಯರು, ಎಡ-ಪ್ರಗತಿಪರರು, ಸಮಾನತೆ-ಬೆಳವಣಿಗೆಗೆ ಹಂಬಲಿಸುವವರು-ಇದನ್ನು ಪ್ರತಿಭಟಿಸಲು ಭಾರಿ ಸಂಖ್ಯೆಯಲ್ಲಿ ಸೇರಿದ್ದರು. ಜನತೆಯ ಮೇಲೆ ಅತ್ಯಾಚಾರ ನಡೆಸಲು ಬಹುರಾಷ್ಟ್ರೀಯ ಕಂಪನಿಗಳ ಬಂಡವಾಳಕ್ಕೆ 'ಮುಕ್ತವಾಗಿ' ಅವಕಾಶ ಕೊಡುವ FTAA ನ್ನು ಬಲವಾಗಿ ಪ್ರತಿಭಟಿಸಿದರು. 1999 ರಲ್ಲಿ WTO ಸಭೆ ಅಮೆರಿಕದ ಸಿಯಾಟಲ್‌ನಲ್ಲಿ ಭಾರಿ ಪ್ರತಿಭಟನೆಯಿಂದ ಆರಂಭವಾಗಿ ವಾಶಿಂಗ್‌ಟನ್ ನಲ್ಲಿ ಐಎಂಎಫ್ ಸಭೆ ವಿರುದ್ಧ ದಾವೋಸ್‌ನಲ್ಲಿ ವಿಶ್ವ ಆರ್ಥಿಕ ಫೋರಂನ ವಿರುದ್ಧ, ಐಎಂಎಫ್-ವಿಶ್ವಬ್ಯಾಂಕ್‌ಗಳ ಸಭೆ ನಡೆದಾಗೆಲ್ಲ, ನಡೆದಲ್ಲೆಲ್ಲಾ, ಜಾಗತೀಕರಣದ ವಿರುದ್ಧ ಪ್ರತಿಭಟನೆಯ ಸರಣಿಯಲ್ಲಿ ಇದು ಇತ್ತೀಚಿನ ಕೊಂಡಿಯಾಗಿದೆ. ಈ ಪ್ರತಿಭಟನೆ FTAA ಮಾಡಲು ಸೇರಿದ್ದ ನಾಯಕರು ಅದರ ದಾಖಲೆಗಳಲ್ಲಿ ಜಾಗತೀಕರಣ ಜನರ ಪರವಾಗಿಲ್ಲ ಎಂದು ಹಲವು ಕಡೆ ಒಪ್ಪಿಕೊಳ್ಳುವಂತೆ, ಅದರ ವ್ಯವಹಾರಗಳನ್ನು ಹೆಚ್ಚು ಸಾರ್ವಜನಿಕಗೊಳಿಸುವಂತೆ ಮಾಡುವಲ್ಲಿ ಸಫಲವಾಗಿದೆ.

ಶರತ್ ಚಂದ್ರ.

ಕ್ವಿಬೆಕ್(ಏಪ್ರಿಲ್ 20 ರಿಂದ 24) ಐದು ದಿನಗಳ ಕಾಲ ರಣಾಂಗಣವಾಯಿತು. ಕ್ವಿಬೆಕ್‌ನ ಸಮಾವೇಶ ಮಂದಿರ ಆಕ್ರಮಣಕ್ಕೆ ಒಳಗಾಗಿದ್ದ ಕೋಟೆಯಾಯಿತು. ಈ ಕೋಟೆಯನ್ನು ಕಾಯಲು ಸಾವಿರಾರು ಪೋಲೀಸರು(ಕುದುರೆಗಳ ಮೇಲೆ, ಜಲಫಿರಂಗಿಗಳನ್ನು ಹೊತ್ತು, ಗನ್‌ಧಾರಿಗಳು, ದೊಣ್ಣೆಧಾರಿಗಳು) ಸಜ್ಜಾಗಿದ್ದರು. ಕೋಟೆಯ ಒಳಗೆ ಇದ್ದವರು ಕುಖ್ಯಾತ ವಿಶ್ವವ್ಯಾಪಾರ ಸಂಘಟನೆ(ಡಬ್ಲ್ಯುಟಿಒ), ನಾಫ್ತಾ (NAFTA-ಉತ್ತರ ಅಮೆರಿಕ ಮುಕ್ತ ವ್ಯಾಪಾರ ಪ್ರದೇಶ) ಯ ಇನ್ನೊಂದು ಸೋದರ ಸಂಘಟನೆ ಹುಟ್ಟುಹಾಕಲು ಸೇರಿದ್ದ ಉತ್ತರ ಅಮೆರಿಕ, ದಕ್ಷಿಣ ಅಮೆರಿಕ ಎರಡೂ ಖಂಡಗಳ 34 ದೇಶಗಳ ನಾಯಕರು. ಕ್ಯೂಬಾವನ್ನು ಈ ಸಂಘಟನೆಯಿಂದ ಹೊರಗಿಡಲಾಯಿತು. ಕ್ಯೂಬಾ ಸಹ ಇದರಲ್ಲಿ ಭಾಗವಹಿಸಲು ಇಚ್ಛೆ ವ್ಯಕ್ತಪಡಿಸಲಿಲ್ಲ. ದಕ್ಷಿಣ ಅಮೆರಿಕದ ಬಡದೇಶಗಳು ಇದರಲ್ಲಿ ಭಾಗವಹಿಸದಂತೆ ಕ್ಯೂಬಾ ಪ್ರಯತ್ನಿಸಿತು. ಕೋಟೆಯ ಒಳಗಿದ್ದ 34 ದೇಶಗಳ ನಾಯಕರನ್ನು ರಕ್ಷಿಸಲು 10 ಅಡಿಗಳ ಕಬ್ಬಿಣದ ಬೇಲಿ ಕಟ್ಟಲಾಗಿತ್ತು. ಬೇಲಿಯಾಚೆಗೆ ಎರಡು ಖಂಡಗಳ ಜನಪರ ಸಂಘಟನೆಯ ಪ್ರತಿನಿಧಿಗಳು-ಸುಮಾರು 30 ಸಾವಿರ-ಪ್ರತಿಭಟಿಸುತ್ತಿದ್ದರು. ಇವರು ಅಮೆರಿಕ ಖಂಡಗಳ ಮೂಲೆ ಮೂಲೆಗಳಿಂದ ಬಂದಿದ್ದರು. ಟ್ರೇಡ್‌ಯೂನಿಯನ್, ಶಾಂತಿ ಸಂಘಟನೆ, ಜಾಗತೀಕರಣ-ವಿರೋಧಿ ಸಂಘಟನೆಗಳು, ಪರಿಸರವಾದಿಗಳು, ಎಡ-ಪ್ರಗತಿಪರ ರಾಜಕೀಯ ಕಾರ್ಯಕರ್ತರು- ಈ ಪ್ರತಿಭಟನೆಯನ್ನು ಜಾಗತೀಕರಣ-ವಿರೋಧಿ ಹಬ್ಬವಾಗಿ ಮಾರ್ಪಡಿಸಿದ್ದರು. ಕ್ವಿಬೆಕ್‌ನ ಯಾವುದೇ ಸಂಘಟನೆಗಳಿಗೆ ಸೇರದ ಸಾಮಾನ್ಯ ಜನ ಈ ಹಬ್ಬದಲ್ಲಿ ಸೇರಿಕೊಂಡಿದ್ದರು. ಕಳೆದ ಎರಡು ವರ್ಷಗಳಿಂದ ಇಂತಹ ಹಲವಾರು ಪ್ರತಿಭಟನೆಗಳಲ್ಲಿ ವ್ಯಕ್ತವಾಗುತ್ತಿರುವ ಬಂಡವಾಳಶಾಹಿ-ಜಾಗತೀಕರಣ ವಿರೋಧಿ ಭಾವನೆ ಪ್ರಬಲವಾಗಿ ವ್ಯಕ್ತವಾಯಿತು. ಪ್ರತಿಭಟನಾಕಾರರ ಸಂಖ್ಯೆ ಇನ್ನು ಹಲವು ಪಟ್ಟು ಇರುತ್ತಿತ್ತು - ಕೆನಡಾದ ಪೋಲೀಸರು ಗಡಿಗಳಲ್ಲಿ ಸಾವಿರಾರು ಪ್ರತಿಭಟನೆಕಾರರನ್ನು ತಡೆಯದಿದ್ದರೆ ಹಿಂದೆ ಸಿಯಾಟಲ್‌ನಲ್ಲಿ, ಇತರ ಹಲವು ಕಡೆ ಜಾಗತೀಕರಣ-ವಿರೋಧಿ ಪ್ರತಿಭಟನೆಗಳಲ್ಲಿ ಭಾಗವಹಿಸಿ ಬಂಧಿತರಾದ 'ರೆಕಾರ್ಡ್' ಇರುವ ಹಲವರನ್ನು ಕೆನಡಾದ ಒಳಗೆ ಬಿಡಲಿಲ್ಲ. ನೇರ ಗಡಿ ಇರುವ ಅಮೇರಿಕದ ಹಲವಾರು ಜಾಗತೀಕರಣ-ವಿರೋಧಿ ಪ್ರತಿಭಟನಾಕಾರರನ್ನು 'ಕ್ಷುಲ್ಲಕ' ಕಾರಣಗಳ ಮೇಲೆ ತಡೆ ಹಿಡಿಯಲಾಯಿತು.

ಪ್ರತಿಭಟನೆ ಹೆಚ್ಚು ಕಡಿಮೆ ಶಾಂತಿಯುತವಾಗಿತ್ತು. ಆದರೆ ಪೋಲೀಸರು ಹಾಕಿದ್ದ ಬೇಲಿ ಎಲ್ಲರ ಕಣ್ಣು ಕುಕ್ಕುತ್ತಿತ್ತು. ಪೋಲೀಸರ ಪ್ರಚೋದನೆ, ಪ್ರತಿಭಟನೆಯಲ್ಲಿ ಸೇರಿದ್ದ ಹಲವು ಅರಾಜಕತೆಗಳಿಂದ ಶಾಂತಿ ಭಂಗವಾಯಿತು. **ಆಮೇಲೆ ಪೋಲೀಸರು ಮತ್ತು ಪ್ರತಿಭಟನಾಕಾರರ ನಡುವೆ ಕಾಳಗವೇ ನಡೆಯಿತು. 'ಅಭೇದ್ಯ ಬೇಲಿ'ಯೆಂದು ಪೋಲೀಸರು ಕೊಚ್ಚಿಕೊಳ್ಳುತ್ತಿದ್ದ 'ಕಬ್ಬಿಣದ ಬೇಲಿ' ಜನಪ್ರವಾಹಕ್ಕೆ ಮುರಿದುಬಿತ್ತು.**

ಕ್ವಿಬೆಕ್‌ನಲ್ಲಿ ಮಣಿಯಬೇಕಾಗಿ ಬಂದ ಅಮೆರಿಕನ್ ಶೃಂಗಸಭೆ

ಪೋಲೀಸರು ದೊಣ್ಣೆ ಪ್ರಹಾರ, ಅಶ್ರುವಾಯು ಪ್ರಯೋಗ, ಜಲಫಿರಂಗಿ, ಪ್ಲಾಸ್ಟಿಕ್ ಗುಂಡು, ಆಶ್ವಧಾರಿಗಳ ಧಾಳಿ - ಎಲ್ಲವನ್ನು ಅತ್ಯಂತ ನಿರ್ದಯವಾಗಿ ಬಳಸಿದರು. ಹಲವಾರು ಪ್ರತಿಭಟನಾಕಾರರನ್ನು ಬಂಧಿಸಲಾಯಿತು. ಅವರಲ್ಲಿ ಹಲವರು ಇನ್ನೂ ಜೈಲಿನಲ್ಲಿದ್ದಾರೆ. ಅವರ ಬಿಡುಗಡೆಗೆ ಚಳುವಳಿ ಆರಂಭವಾಗಿದೆ. ಪ್ರತಿಭಟನೆಯ ನಾಯಕತ್ವ ವಹಿಸಿದ್ದು ಇಡೀ ಅಮೆರಿಕದ ಹಲವು ಪ್ರಮುಖ ಟ್ರೇಡ್‌ಯೂನಿಯನ್‌ಗಳು ಎಂಬುದು ಗಮನಾರ್ಹ ಅಂಶ.

ಉತ್ತರ ದಕ್ಷಿಣ ಅಮೆರಿಕ ಖಂಡಗಳ 30 ಕ್ಕೂ ಹೆಚ್ಚು ದೇಶಗಳ ನಡುವೆ ಮುಕ್ತ ವ್ಯಾಪಾರದ ಬಗೆಗಿರುವ ಈ ಒಪ್ಪಂದದ ಬಗ್ಗೆ ಏಕಿಷ್ಟು ವಿರೋಧ? ಇದಕ್ಕೆ ಕಾರಣ ಈ 'ಮುಕ್ತ ವ್ಯಾಪಾರ' ಜನಸಾಮಾನ್ಯರ ಹಿತಾಸಕ್ತಿಗಳಿಗೆ ವಿರೋಧಿ ಎಂದು ಈ ಎರಡು ಖಂಡಗಳ ಜನರಿಗೆ ಈಗಾಗಲೇ ಇರುವ ಕಹಿ ಅನುಭವ. ಮುಖ್ಯವಾಗಿ ನಾಫ್ತಾ (ಅಮೆರಿಕ ಸಂಯುಕ್ತ ಸಂಸ್ಥಾನ, ಮೆಕ್ಸಿಕೊ, ಕೆನಡಾ ನಡುವಣ ಮುಕ್ತ ವ್ಯಾಪಾರದ ಒಪ್ಪಂದ-NAFTA)ದ ಅನುಭವ. ನಾಫ್ತಾದಿಂದ ಈ ಮೂರು ದೇಶಗಳ ಕಾರ್ಮಿಕರ ಸರಾಸರಿ ವೇತನ, ಸವಲತ್ತುಗಳು ಕಡಿಮೆಯಾಗಿವೆ. ಟ್ರೇಡ್‌ಯೂನಿಯನ್‌ಗಳ ಚೌಕಾಶಿ-ಬಲ ಕಡಿಮೆಯಾಗಿದೆ. ನಿರುದ್ಯೋಗ ಹೆಚ್ಚಾಗಿದೆ. ಕಾರ್ಮಿಕರ ಹಕ್ಕು, ಪರಿಸರ ಮಾಲಿನ್ಯ ತಡೆ, ಸಾಮಾಜಿಕ ನ್ಯಾಯ, ಆರ್ಥಿಕ ಬೆಳವಣಿಗೆಯಲ್ಲಿ ಸರ್ಕಾರ ವಹಿಸಬಹುದಾದ ಪಾತ್ರ ಕಡಿತವಾಗಿದೆ. ಒಟ್ಟಾರೆ ನಾಫ್ತಾ ಜನ ವಿರೋಧಿಯಾಗಿದೆ. ನಾಫ್ತಾ ಬಹುರಾಷ್ಟ್ರೀಯ ಕಂಪನಿಗಳು ಈ ಮೂರು ದೇಶಗಳನ್ನೂ ನೇರವಾಗಿ ಆಳುವಂತೆ ಮಾಡಿದೆ. ಈ ನೇರ ಆಳ್ವಿಕೆಯನ್ನು ಎರಡೂ ಖಂಡಗಳ 34 ದೇಶಗಳಿಗೆ ವಿಸ್ತರಿಸುವ ಹುನ್ನಾರವೇ FTAA ಎನ್ನುವುದು ಜನರಿಗೆ ಸ್ಪಷ್ಟವಾಗಿದೆ. ಆರಂಭದ ಈ ಪ್ರತಿಭಟನೆಯ ಪ್ರಖರತೆ: (FTAA ಬಗ್ಗೆ ಪ್ರತಿಭಟನಾಕಾರರ ಪ್ರಮುಖ ಆರೋಪಗಳಿಗೆ ಟೇಬಲ್‌ನೋಡಿ)

ಅರಾಜಕತಾವಾದಿಗಳ ಮತ್ತು ಪೋಲೀಸರ ಹಿಂಸಾಚಾರ ಪತ್ರಿಕೆಗಳಲ್ಲಿ ತಲೆಬರಹ ಪಡೆಯಿತು. ಆದರೆ ಈ ಪ್ರತಿಭಟನೆ ಸಾಧಿಸಿದ್ದೇನು? ಇಂತಹ ಶೃಂಗಸಭೆಗಳಲ್ಲೇ ಮೊದಲ ಬಾರಿಗೆ ಜಾಗತೀಕರಣ ಜನರ ಪರ ಇಲ್ಲದೆ ಇರಬಹುದು, ಅದನ್ನು ಜನಪರ ಮಾಡಬೇಕು ಎಂದು ಈ 'ಜನಪ್ರತಿನಿಧಿ' ನಾಯಕರು ಒಪ್ಪುವಂತೆ ಮಾಡಿತು ಈ ಪ್ರಬಲ ಪ್ರತಿಭಟನೆ.

ಈ ಶೃಂಗಸಭೆಯ ರುವಾರಿ ಅಮೆರಿಕದ ಅಧ್ಯಕ್ಷ ಜಾರ್ಜ್ ಬುಶ್ ಸ್ವತಃ ಇದನ್ನು ತಮ್ಮ ಭಾಷಣದಲ್ಲಿ ಸೇರಿಸಬೇಕಾಯಿತು. ಬ್ರೆಜಿಲ್ ಅಧ್ಯಕ್ಷ, ಮೆಕ್ಸಿಕೊ ಅಧ್ಯಕ್ಷ, ಸೈಂಟ್ ಲೂಸಿಯಾ ಪ್ರಧಾನಮಂತ್ರಿ, ವೆನಿಜುವೆಲಾದ ಅಧ್ಯಕ್ಷ ಪ್ರತಿಭಟನಕಾರರ ಹಲವು ಆತಂಕಗಳನ್ನು ಶೃಂಗಸಭೆಯಲ್ಲಿ ಬಿಂಬಿಸಿದರು. ಈಗ ಇರುವಂತೆ ಜಾಗತೀಕರಣ, ಮುಕ್ತ ವ್ಯಾಪಾರ ಎರಡೂ ಜನರ ಜೀವನವನ್ನು ಇನ್ನಷ್ಟು ದುರ್ಬಲಗೊಳಿಸುತ್ತದೆ ಎಂದು ಇವರು ಒಪ್ಪಿಕೊಂಡರು. ಇಂತಹ ಎಲ್ಲಾ ಒಪ್ಪಂದಗಳು ಒಟ್ಟಾಗಿ ಆಗುತ್ತದೆ. ಈ ದೇಶಗಳ ಸರ್ಕಾರಗಳಿಗೆ, ಪಾರ್ಲಿಮೆಂಟುಗಳಿಗೆ, ಜನ-ಪ್ರತಿನಿಧಿ ಸಂಘಟನೆಗಳಿಗೆ ಇಂತಹ ಒಪ್ಪಂದಗಳನ್ನು ತಯಾರಿಸುವುದರಲ್ಲಿ ಅವಕಾಶವಂತೂ ಇಲ್ಲ. ಈ ಒಪ್ಪಂದದ ಪ್ರತಿಯೂ ಸಿಗುವುದಿಲ್ಲ. ನಾಫ್ತಾ ಮತ್ತು ಡಬ್ಲ್ಯುಟಿಒ ದ್ದು ಇದೇ ಸ್ಥಿತಿ. ಇದು ಇಂತಹ ಮುಕ್ತ ವ್ಯಾಪಾರ ಒಪ್ಪಂದಗಳ ಬಗ್ಗೆ ಅತ್ಯಂತ ಪ್ರಬಲ ಟೀಕೆ. ಪ್ರಬಲ ಪ್ರತಿಭಟನೆಯ ನಂತರ FTAA ಒಪ್ಪಂದ ಪ್ರಕಟಿಸಲಾಗುವುದು ಎಂದು ಈ ನಾಯಕರು ಹೇಳಬೇಕಾಗಿ ಬಂದಿರುವುದು - ಈ ಪ್ರತಿಭಟನೆಯ ಇನ್ನೊಂದು ಗೆಲುವು.

FTAA ಏಕೆ ಜನವಿರೋಧಿ?

FTAA ವಿರುದ್ಧ ಪ್ರತಿಭಟಿಸಿದ ಹಲವು ಜನಪರ ಸಂಘಟನೆಗಳ ಟೀಕೆಯ ಸಾರಾಂಶ ಇಲ್ಲಿದೆ.

1. ಈ ಒಪ್ಪಂದ ತಯಾರಿಸಿದ್ದು ಅತ್ಯಂತ ಪ್ರಜಾಪ್ರಭುತ್ವ-ವಿರೋಧಿ ರೀತಿಯಲ್ಲಿ. ಅಮೆರಿಕ ಸಂಯುಕ್ತ ಸಂಸ್ಥಾನ(ಅ.ಸಂ.ಸಂ.)ಗಳ ಕೆನಡಾದ ದೈತ್ಯಕಂಪನಿಗಳು ಮತ್ತು ಅ.ಸಂ.ಸಂ. ವಾಣಿಜ್ಯ ಕಾರ್ಯದರ್ಶಿ ಈ ಒಪ್ಪಂದ ಗುಪ್ತವಾಗಿ ತಯಾರಿಸಿದ್ದು. ಲ್ಯಾಟಿನ್ ಅಮೆರಿಕದ ದೇಶಗಳ ಸರ್ಕಾರಗಳು, ಪಾರ್ಲಿಮೆಂಟುಗಳು ಒತ್ತಟ್ಟಿಗಿರಲಿ, ಅ.ಸಂ.ಸ.ದ ಪಾರ್ಲಿಮೆಂಟಿಗೂ ಈ ಒಪ್ಪಂದದ ಕರಡು ಲಭ್ಯವಿಲ್ಲ.

2. ಅಸಮಾನ ಆರ್ಥಿಕ ಬಲ ಇರುವ ದೇಶಗಳ ನಡುವೆ 'ಮುಕ್ತವ್ಯಾಪಾರ' ಅನ್ಯಾಯಯುತವಾಗಿರುತ್ತದೆ. ಅದು ಯಾವಾಗಲೂ ಬಡದೇಶಗಳ ಹಿತಾಸಕ್ತಿಗಳ ವಿರುದ್ಧ, ಶ್ರೀಮಂತ ದೇಶಗಳ ಪರ ಇರುತ್ತದೆ.

3. ಇಂತಹ ಮುಕ್ತ ವ್ಯಾಪಾರದಿಂದ ಎಲ್ಲಾ ದೇಶಗಳಲ್ಲಿ ಶ್ರೀಮಂತರೂ ಇನ್ನಷ್ಟು ಶ್ರೀಮಂತರಾಗುತ್ತಾರೆ. ಬಡವರು ಇನ್ನಷ್ಟು ಬಡವರಾಗುತ್ತಾರೆ. ಸಣ್ಣ ವ್ಯಾಪಾರಿಗಳು, ಉತ್ಪಾದಕರು ಇಂತಹ ಮುಕ್ತ ವ್ಯಾಪಾರದ ಸ್ಪರ್ಧೆಯಲ್ಲಿ ಸೋಲುತ್ತಾರೆ. ದೈತ್ಯ ಕಂಪನಿಗಳು ಮತ್ತು ಅವರ ಏಜೆಂಟರುಗಳು ತಮ್ಮ ಮಾರುಕಟ್ಟೆ ಹಿಡಿತ ವಿಸ್ತರಿಸುತ್ತವೆ.

4. ದೈತ್ಯ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ತೋಳ್ಬಲ ಹೆಚ್ಚಿಸಿಕೊಳ್ಳುತ್ತವೆ. ನಾಫ್ತಾ ಬಳಸಿ ಈಗಾಗಲೇ ಹಲವು ಅಮೆರಿಕನ್ ದೈತ್ಯಕಂಪನಿಗಳು ಮೆಕ್ಸಿಕೊದ ಕಾರ್ಮಿಕ ಮತ್ತು ಪರಿಸರ ರಕ್ಷಣೆಯ ಕಾನೂನುಗಳನ್ನು ಬದಲಾಯಿಸಲು ಕಾನೂನು ಕ್ರಮ ತೆಗೆದುಕೊಂಡಿವೆ.

5. ಎಲ್ಲಾ ದೇಶಗಳಲ್ಲಿ ಪರಿಸರ ರಕ್ಷಣೆ, ಕಾರ್ಮಿಕ ರಕ್ಷಣೆ, ಸಾಮಾಜಿಕ ನ್ಯಾಯ, ಸಮತೋಲನದ ಬೆಳವಣಿಗೆಗೆ - ಇವುಗಳಿಗೆ ಹೋರಾಡುತ್ತಿರುವ ಸ್ಥಳೀಯ ಜನಪರ ಚಳುವಳಿಗಳು, ಸಂಘಟನೆಗಳನ್ನು FTAA ಮಟ್ಟ ಹಾಕುತ್ತದೆ. ನಾಫ್ತಾ ಅಮೆರಿಕ, ಮೆಕ್ಸಿಕೊ, ಕೆನಡಾ ಮೂರು ದೇಶಗಳಲ್ಲಿ ಕಾರ್ಮಿಕ, ಪರಿಸರ ಸಂಘಟನೆಗಳನ್ನು ಬಲಹೀನಗೊಳಿಸಿದೆ.

6. ಐಎಂಎಫ್, ವಿಶ್ವಬ್ಯಾಂಕ್, ಡಬ್ಲ್ಯುಟಿಒ ಇತ್ಯಾದಿಗಳು ದೇಶಗಳ ಸರ್ಕಾರಗಳ ಮೇಲೆ ಹೊರಿಸುತ್ತಿರುವ ಜನ-ವಿರೋಧಿ ಆರ್ಥಿಕ ಸಾಮಾಜಿಕ ನೀತಿಗಳನ್ನು ಇನ್ನಷ್ಟು ಬಲಗೊಳಿಸುತ್ತದೆ.

7. ಎಲ್ಲ ದೇಶಗಳು ತಮ್ಮ ರೈತರಿಗೆ, ಕೈಗಾರಿಕೆಗೆ ನೀಡುತ್ತಿರುವ ಸಬ್ಸಿಡಿ, ರಕ್ಷಣೆಯನ್ನು ನಿಲ್ಲಿಸುವಂತೆ ಮಾಡುತ್ತದೆ - ಅಮೆರಿಕ ಸಂಯುಕ್ತ ಸಂಸ್ಥಾನ ಬಿಟ್ಟು. ನಾಫ್ತಾ, ಡಬ್ಲ್ಯುಟಿಒಗಳ ಒಪ್ಪಂದವಾದಾಗ್ಯೂ ಅ.ಸಂ.ಸಂ. ತನ್ನ ಯಾವುದೇ ಸಬ್ಸಿಡಿ ನಿಲ್ಲಿಸಿಲ್ಲ. ಅಮೆರಿಕದೊಳಗೆ 'ಮುಕ್ತ ವ್ಯಾಪಾರ'(ಆಮದು) ನಿಲ್ಲಿಸಲು ವ್ಯಾಪಾರೇತರ-ಬಾಲ ಕಾರ್ಮಿಕ, ಮಾನವಹಕ್ಕು ಮುಂತಾದ ನೆಪಗಳನ್ನು ಬಳಸಿದೆ. ಆದರೆ ಉಳಿದ ಎಲ್ಲ ದೇಶಗಳು ತಮ್ಮ ಸಬ್ಸಿಡಿ ನಿಲ್ಲಿಸುವಂತೆ ಮಾಡಿದೆ.

8. ಈ ಒಪ್ಪಂದ ಅನುವು ಮಾಡುವುದು ಬಂಡವಾಳದ ಎಲ್ಲ ದೇಶಗಳ ಮುಕ್ತ ಸಂಚಾರಕ್ಕೆ ಮಾತ್ರ. ಕಾರ್ಮಿಕರ ಮುಕ್ತ ಸಂಚಾರಕ್ಕೆ ಅನುವು ಇಲ್ಲ ಮಾತ್ರವಲ್ಲ ಭಾರಿ ಅಡೆತಡೆಗಳನ್ನು ಒಡ್ಡುತ್ತದೆ. ನಾಫ್ತಾ ಇದ್ದರೂ, ಅ.ಸಂ.ಸಂ. ದ ಗಡಿಯಲ್ಲಿ ಸಾವಿರಾರು ಮೆಕ್ಸಿಕೊದ ಕಾರ್ಮಿಕರ ಮೇಲೆ ಹಿಂಸಾಚಾರ ನಡೆಸಲಾಗುತ್ತದೆ. ಗಡಿಯಲ್ಲಿ ನೂರಾರು ಕಾರ್ಮಿಕರು ಪ್ರತಿವರ್ಷ ಇದಕ್ಕೆ ಬಲಿಯಾಗುತ್ತಾರೆ.

ಕಥೆ

ಶಾಂತಿಗಾಗಿ ಕಾದವರು



ಜನ ಜಂಗುಳಿಯಿಂದ ದೂರವಿದ್ದ ಪ್ರಶಾಂತವಾದ ಗ್ರಾಮವೇ ಗಾನಪುರ. ಅದು ಕಾಡಿನ ಅಂಚಿನಲ್ಲಿತ್ತು. ಅತ್ಯಂತ ಬಡವನಾದ ರಾಮಯ್ಯ ಕಾಡಿನಿಂದ ಬಿದಿರು ತಂದು ಸೀಳಿ ಕೊಡುತ್ತಿದ್ದ. ಮಂಗಳಮ್ಮ ಬಿದಿರಿನಿಂದ ಸುಂದರವಾದ ಪುಟ್ಟಿ, ಮೊರ, ಬೀಸಣಿಗೆ ಹೀಗೆ ಅನೇಕ ಉಪಯುಕ್ತವಾದ ಸಾಮಾನುಗಳನ್ನು ತಯಾರಿಸುತ್ತಿದ್ದಳು.

ಸೋಮವಾರ ಕಾಡಿನ ಹಳ್ಳಿಯಲ್ಲಿ ಸಂತೆ ಸೇರುತ್ತಿತ್ತು. ಬುಟ್ಟಿ, ಮೊರ, ಬೀಸಣಿಗೆ ಎಲ್ಲಾ ಹೊತ್ತುಕೊಂಡು ಪ್ರತಿವಾರ ಸಂತೆಗೆ ರಾಮಯ್ಯ ಹಾಗೂ ಮಂಗಳಮ್ಮ ಹೋಗುತ್ತಿದ್ದರು.

ಸಾಮಾನುಗಳನ್ನು ಮಾರಿ ಬಂದ ಹಣದಲ್ಲಿ, ಊಟಕ್ಕೆ ಬೇಕಾದ ರಾಗಿ, ಹುರುಳಿ ಮುಂತಾದ ಅತ್ಯಂತ ಅವಶ್ಯಕವಾದ, ಪದಾರ್ಥಗಳನ್ನು ಕೊಂಡು ಹಳ್ಳಿ ಸೇರಿ, ಸರಳವಾಗಿ ಒಂದು ರೀತಿ ನೆಮ್ಮದಿಯಿಂದ ಬದುಕುತ್ತಿದ್ದರು.

ಅವರ ಆಸ್ತಿ ಎಂದರೆ ಭೀಮಯ್ಯ, ಅವರ ಏಕ ಮಾತ್ರ ಪುತ್ರ. ಒಂದು ದಿನ ಆರು ವರ್ಷದ ಭೀಮಯ್ಯನನ್ನು ಸಂತೆಗೆ ಕರೆದುಕೊಂಡು ಹೋದರು. ಅವನು ಕೇಳಿದ ಮಿಠಾಯಿ, ಜಿಲೇಬಿ ಮುಂತಾದವನ್ನು ಕೊಡಿಸಿ, ಸಂತೆ ಪೂರ್ತಿ ಸಂತೋಷದಿಂದ ಓಡಾಡಿದರು. ಗ್ರಾಮದ ಮಕ್ಕಳು ಶಾಲೆಗೆ ಹೋಗುತ್ತಿರುವುದನ್ನು ಕಂಡು ಭೀಮಯ್ಯ ತಾನು ಶಾಲೆಗೆ ಹೋಗುತ್ತೇನೆ ಎಂದು ಹಠ ಮಾಡಿದ. ನಮಗೇಕೆ ಶಾಲೆ ಎಂದು ಎಷ್ಟು ಹೇಳಿದರೂ ಕೇಳಲಿಲ್ಲ. ಕೊನೆಗೆ ಮಗನ ಮೇಲಿನ ಪ್ರೀತಿಯಿಂದ ಭೀಮಯ್ಯನನ್ನು ಶಾಲೆಗೆ ಸೇರಿಸಿದರು.

ಕೆ.ಎಸ್.ವಿನೋದ
ಬೆಂಗಳೂರು

ದಿನಾ ಆರು ಮೈಲಿ ನಡೆದು ಶಾಲೆಗ ಹೋಗಿ ನಡೆದು ಮನೆಗೆ ಭೀಮಯ್ಯ ಬರುತ್ತಿದ್ದ. ಪಾಠ ಪ್ರವಚನ ಚೆನ್ನಾಗಿ ಕಲಿತ, ಹೀಗಿದ್ದಾಗ ಭೀಮಯ್ಯ ದೃಢಕಾಯನಾದ ಯುವಕನಾಗಿ ಬೆಳೆದ.

ಒಂದು ದಿನ ಭೀಮಯ್ಯ ನಾನು ಸೈನ್ಯಕ್ಕೆ ಸೇರುತ್ತೇನೆ ಎಂದ. ರಾಮಯ್ಯ ತತ್ತರಿಸಿ ಹೋದ. ಎಲ್ಲೂ ಹೋಗಬೇಡ ಎಂದ. ನಮ್ಮನ್ನು ಬಿಟ್ಟು ದೂರ ಹೋಗಬೇಡ, ಅಂಬಲಿಯೋ ಗಂಜಿಯೋ ಪರವಾಗಿಲ್ಲ. ನಮ್ಮ ಕಣ್ಣ ಮುಂದೆ ಇರು ಎಂದು ಮಂಗಳಮ್ಮ ಭೀಮಯ್ಯನನ್ನು ಪರಿಪರಿಯಾಗಿ ಬೇಡಿಕೊಂಡಳು.

ನಮ್ಮ ದೇಶಾನ ನಮ್ಮ ಗಡಿನ ಕಾಯ್ತೀನಿ, ಅದು ದೇಶ ಸೇವೆ ಅಂತ ತಾಯಿ ತಂದೆಗೆ ತಿಳಿಸಿ, ಅವರನ್ನು ಒಪ್ಪಿಸಿ ಭೀಮಯ್ಯ ಸೈನ್ಯ ಸೇರಲು ಹೊರಟ. ಸಂಬಳ ಬಂದ ತಕ್ಷಣ ತಂದೆಗೆ ಹಣ ಕಳುಹಿಸುತ್ತಿದ್ದ. ಸಂತೆ ದಿನ ಅಂಚೆಯವ ಭೀಮಯ್ಯ ಕಳುಹಿಸುತ್ತಿದ್ದ ಹಣವನ್ನು ರಾಮಯ್ಯನಿಗೆ ಕೊಡುತ್ತಿದ್ದ. ಆ ಹಣದಿಂದ ರಾಮಯ್ಯ ಹಾಗೂ ಮಂಗಳಮ್ಮ ಎರಡು ಹೊತ್ತು ಊಟ ಮಾಡಿದರೂ ಮಗನಿಗಾಗಿ ಪರಿತಪಿಸುತ್ತಿದ್ದರು. ಭೀಮಯ್ಯನನ್ನು ನೋಡಲು ಕಾತುರದಿಂದ ಕಾಯುತ್ತಿದ್ದರು. ಪೆಬ್ಬಕ್ಕೆ ಬರಲು ಅಂಚೆ ಲಕ್ಷ್ಮಣನ ಬಳಿ ಕಾಗದ ಬರೆಸುತ್ತಿದ್ದರು. ಹೀಗಿದ್ದಾಗ ಗಡಿಯಲ್ಲಿ ಯುದ್ಧ ಶುರುವಾಯ್ತು. ಯುದ್ಧ ನಡೀತಿದೆ ಅಂತನೂ ಮುಗ್ಧನಾದ ರಾಮಯ್ಯನಿಗೆ ಗೊತ್ತಿರಲಿಲ್ಲ.

ಪ್ರತಿ ತಿಂಗಳಂತೆ ಮಗ ಕಳುಹಿಸುವ ಹಣ ಬರುತ್ತೆ ಅಂತ ರಾಮಯ್ಯ, ಮಂಗಳಮ್ಮ ಕಾಯುತ್ತಿದ್ದರು. ಹಣ ಬರಲಿಲ್ಲ. ಮಗನ ಹೆಣ ಬಂತು. ಅದನ್ನು ಕಂಡು ತತ್ತರಿಸಿ ಮೂರ್ಛೆ ಹೋದರು. ಸ್ವಲ್ಪ ಸಮಯದ ನಂತರ ರಾಮಯ್ಯ ಹಾಗೂ ಮಂಗಳಮ್ಮ ಎಚ್ಚರಗೊಂಡರು. ಅವರ ಗೋಳು ಮುಗಿಲು ಮುಟ್ಟಿತ್ತು. ಹಳ್ಳಿಯ ಜನ ಅನೇಕರು ಕಣ್ಣೀರು ಹಾಕುತ್ತಿದ್ದರು. ಈ ನೋವು ಯಾರಿಗೂ ಬೇಡ ಎನ್ನುತ್ತಿದ್ದರು. ಇನ್ನೆಷ್ಟು ಜನ ನಮ್ಮ ತರಹ ಗೋಳಾಡ್ತಿದ್ದಾರೋ, ಏನೋ, ಗಡಿ ಒಳಗೆ ಗಡಿ ಹೊರಗೆ ಎಲ್ಲಿ ಜನ ಸತ್ತರೂ, ಸೈನಿಕ ಸತ್ತರೂ ಗೋಳು ಗೋಳು ತಾನೆ ಅಂತ ರಾಮಯ್ಯ ಗೋಳಾಡಿದ.

ಅವರೆಲ್ಲಾ ನಮ್ಮ ತರಹ ಮನುಷ್ಯರು ತಾನೆ ಎಂದು ಮಂಗಳಮ್ಮ ಬಿಕ್ಕಿ ಬಿಕ್ಕಿ ಅತ್ತರು.

ಈ ಯುದ್ಧ ಆಗದಿದ್ದರೆ ನನ್ನ ಮಗ ಸಾಯ್ತಾ ಇರಲಿಲ್ಲ ಅಲ್ಲವ? ಈ ಗಡಿ ಈ ದೇಶ ಅಂತ ಇಲ್ಲದೆ ಪರಪಂಚ ಒಂದೇ ಆಗಿದ್ದರೆ ಯುದ್ಧವೂ ಇರ್ತಿರಲಿಲ್ಲ. ನನ್ನ ಮಗನೂ ಸಾಯ್ತ ಇರಲಿಲ್ಲ ಎಂದು ಮಂಗಳಮ್ಮ ಗೋಳಾಡಿದಳು.

ವಿಷಯ ತಿಳಿದು ಸುತ್ತ ಮುತ್ತಲಿನ ಜನ ಹಳ್ಳಿಗಳಿಂದ ತಂಡೋಪತಂಡವಾಗಿ ಬಂದರು. ಅನೇಕರು ದುಃಖದಿಂದ ಅಳುತ್ತಿದ್ದರು. ಮೆರವಣಿಗೆ ಮಾಡೋಣ ಅಂತ ಕೆಲವರು ಹೇಳುತ್ತಿದ್ದರು. ಅವನ ಗೌರವಾರ್ಥ ಪ್ರತಿಮೆ ಕಟ್ಟೋಣ ಅಂತ ಕೆಲವರು ಮಾತಾಡಿದ್ದರು. ಎಲ್ಲವನ್ನೂ ಕೇಳಿಸಿಕೊಳ್ಳುತ್ತಿದ್ದ ಮಂಗಳಮ್ಮ ಅವನಿಗೇಕೆ ಮೆರವಣಿಗೆ? ಅವನಿಗೆ ಗೊತ್ತಾಗುನಾ? ಅವನ ಅಪ್ಪ-ಅಮ್ಮ ಬಡಕೋತಾ ಇರೋದೆ ಗೊತ್ತಾಗ್ತಿಲ್ಲ. ಎಂಗೆ ಮಲಗವನೆ ನೋಡಿ. ಇನ್ನು ಮೆರವಣಿಗೆ ಏಕಪ್ಪ? ಅಂತ ತಲೆ ತಲೆ ಚಚ್ಚಿಕೊಂಡರು. ಅವನ್ನ ಪ್ರತಿಮೆನಾ? ಪ್ರತಿಮೆ ನಿಲ್ಲಿಸಿದರೆ ಏನ್ ಪ್ರಯೋಜನ? ಅವನು ಬದುಕುತಾನ? ಎಷ್ಟೊಂದು ಜನ ಬಂದಿದ್ದೀರಿ, ಯುದ್ಧ ಬೇಡ ಅಂತ ಹೇಳಬಾರದೇಕೆ? ಇಲ್ಲಿ ಬಂದಿರೋ ನೀವಾದರೂ ಯುದ್ಧ ಮಾಡಬೇಡಿ, ಜನಾನ ಕೊಲ್ಲಬೇಡಿ ಅಂತ ಹೇಳಿ. ನೀವು ಹೇಳುವುದನ್ನು ನೋಡಿ ಮುಂದೆ ಬೇರೆಯವರೂ ಯುದ್ಧ ತಪ್ಪು ಅಂತ ಹೇಳ್ತಾರೆ, ಜನಾನ ಕೊಲ್ಲೊ, ಯುದ್ಧ ಏಕೆ ಬೇಕು ಅಂತ ಕೇಳಿ, ಈ ಪರಪಂಚದ ಮೇಲೆ ಯುದ್ಧ ಆಗದಿರಲಿ ಜನ ಸಾಯದಿರಲಿ ಅಂತ ಹೇಳಿ. ನನ್ನ ಮಗ ಅಂತು ಸತ್ತ, ಬೇರೆಯವರ ಮಕ್ಕಳಾದರೂ ಸಾಯದಿರಲಿ ಎಂದು ಮಂಗಳಮ್ಮ ಗೋಳಾಡಿದಳು.

ಮಗನ್ನ ಕಳೆದುಕೊಂಡ ದುಃಖ ಮಣ್ಣಿಗೆ ಹೋಗೋತನಕ ಇರತ್ತೆ ಅಂತಾರಲ್ಲ, ಅಂಗೆ ನಾವು ಸಾಯೋಗಂಟ ಈ ದುಃಖ ಇರೋದೆ, ಬೇರೆ ಮಕ್ಕಳಾದರೂ ಸಾಯದಿರಲಿ ಎಂದು ಎಲ್ಲರನ್ನು ಅವರ ಹೃದಯ ಕರಗುವಂತೆ ಮಂಗಳಮ್ಮ ಬೇಡಿಕೊಂಡರು.

ಮಗನ್ನ ಕಳೆದುಕೊಂಡ ದುಃಖದ ಬೆಂಕಿಯನ್ನು ಹೊಟ್ಟೇಲಿ ಕಟ್ಟಿಕೊಂಡಿದ್ದರೂ, ಈ ಪರಪಂಚದ ಮೇಲೆ ಯುದ್ಧ ಆಗದಿರಲಿ, ಜನ ಸಾಯದಿರಲಿ ಅಂತ ಸದಾ ಹೇಳ್ತಾ ಹೇಳ್ತಾ ಅನೇಕ ವರ್ಷಗಳೇ ಕಳೆದರು. ಯುದ್ಧ ಇಲ್ಲದಿರಲಿ, ಯುದ್ಧ ಬರದಿರಲಿ ಅಂತ ಹೇಳಿದ ವಯೋವೃದ್ಧರಾದ ರಾಮಯ್ಯ ಹಾಗೂ ಮಂಗಳಮ್ಮ ವಿಶ್ವಶಾಂತಿಗಾಗಿ ಕಾಯುತ್ತಿದ್ದರು.

ಸಿನಿಮಾ

ಬೂದಿ ಎರಚಲೊರಟಿರುವ ಬಣ್ಣದ ಮಂದಿ

ಕನ್ನಡ ಚಿತ್ರರಂಗದಲ್ಲಿ ಕಳೆದ ವಾರದ ಹಿಂದೆ - ಮುಂದೆಲ್ಲಾ ಸಮಾರಂಭ-ಸನ್ಮಾನಗಳದ್ದೇ ಕಾರುಬಾರು. 'ಯಜಮಾನ' ಚಿತ್ರ 25 ವಾರ (175 ದಿನ) ಗಳ ಪ್ರದರ್ಶನ ಕಂಡಿತೆಂದು ವಿಷ್ಣುವರ್ಧನ್‌ಗೆ ಭಾರೀ ಸನ್ಮಾನ ಸಮಾರಂಭ. ನಟ-ರಾಜಕಾರಣಿ ಅಂಬರೀಷ್ ಹುಟ್ಟಿ 49 ವರ್ಷಗಳಾದವೆಂದು ದಾವಣಗೆರೆಯಲ್ಲಿ ಹುಟ್ಟುಹಬ್ಬ ಆಚರಣೆ, ವಜ್ರಕಿರೀಟಧಾರಣೆ, H_2O ಚಿತ್ರದ ಕ್ಯಾಸೆಟ್ ಬಿಡುಗಡೆ. ಹೀಗಾಗಿ ಚೋಟಾ-ಮೋಟಾ ನಾಯಕ-ನಟಿಯರೆಲ್ಲಾ ಬ್ಯುಜಿಯೋ ಬ್ಯುಜಿ, ಗಜಿಬಿಜಿ.

'ಯಜಮಾನ' ಚಿತ್ರವೇನೋ ಭಾರೀ ಯಶಸ್ಸಿನಿಂದಲೇ ಓಡುತ್ತಿದೆ. ಲಕ್ಷಗಳಲ್ಲ, ಕೋಟಿ ಕೋಟಿಗಳನ್ನು ಬಾಚಿಕೊಂಡಿದೆ. ಪ್ರೇಕ್ಷಕರನ್ನು ಸೆಳೆದುಕೊಂಡಿದೆ. ನಿಜ, 175 ದಿನಗಳು ಪ್ರದರ್ಶನದ ಆಚರಣೆಯನ್ನು ವ್ಯವಸ್ಥೆಗೊಳಿಸಿದವರು -ನಿರ್ಮಾಪಕರುಗಳು ಮತ್ತು ವಿಷ್ಣು ಸೇನಾ ಸಮಿತಿ ಅಂತೆ. ಸಮಾರಂಭ ನಡೆಯುವ ಹೊತ್ತಿಗೆ ಮೋಡ ಕವಿದು, ಮಳೆ ಉದುರಿದ್ದರಿಂದ ಜನರಿಲ್ಲದೇ ಇನ್ನೇನು ಸಂಪಿಗೆ ಕೆರೆಯಲ್ಲಿರುವ ಸ್ಟೇಡಿಯಂ ಬಿಕೋ ಎನ್ನುತ್ತವೆ ಎಂದರಿತ ವ್ಯವಸ್ಥಾಪಕರು ಪಾಸ್‌ಗಳನ್ನು ಹೊಂದಿಲ್ಲದ ಸಾಮಾನ್ಯ ಪ್ರೇಕ್ಷಕ ಸಮೂಹವನ್ನು ಹೃದಯಪೂರ್ವಕವಾಗಿ ಮುಂದಿನ ಸಾಲಿನ ಆಸನಗಳಿಗೆ ಆಹ್ವಾನಿಸಿ ಕೂರಿಸಿದರು. ಆದರೆ ಮಳೆ ನಿಂತ ನಂತರ ಪಾಸ್ ಪಡೆದವರು, ಮುಂದಿನ ಸಾಲಿನ ಗಣ್ಯರು ಕ್ರೀಡಾಂಗಣದೊಳಗಿಳಿದರು. ಮೊದಲು ಕುಂತವರನ್ನು ಹಿಂದಕ್ಕಟ್ಟಲು ಶುರು ಮಾಡಿ ಅವರಿಂದ ಛೀಮಾರಿ ಹಾಕಿಸಿಕೊಂಡರು.

ಆದರೆ ಈ ಸಮಾರಂಭ ಯೋಜಿಸಿದ ರೀತಿ, ಅದ್ದೂರಿತನ ಮತ್ತು ಹೊಗಳಿಕೆಗಳು ಬೆರಗು ತರುವಂತಹವು. ಇಷ್ಟಕ್ಕೆ ಇಷ್ಟೊಂದು ಬೇಕಿತ್ತೆ ಎಂದು ಬೆರಳಿಡುವಂತಹದು. "ನಾನೆಂಬುದು ಏನೂ ಇಲ್ಲ ಅವನೇ ಎಲ್ಲಾ" ಎಂದು ದಾಸಯ್ಯನಂತೆ ಆಡಿದ ವಿಷ್ಣು, ಡಾ॥ ರಾಜ್‌ರವರ ಮಾತಿನ ಶೈಲಿಯನ್ನು ಅನುಕರಿಸಿದ, ಒಂದು ರೀತಿಯಲ್ಲಿ ಆತ್ಮ-ಜೀವಾತ್ಮದ ಬಗ್ಗೆ ಕೊರೆದ. ಗಮನಿಸಬೇಕಾದ ಅಂಶವೆಂದರೆ ರಾಜ್‌ರವರು ನಿವೃತ್ತಿಯಾದ ಸ್ಥಾನವನ್ನು ವಿಷ್ಣು ತುಂಬಲಿದ್ದಾರೆ ಎಂಬಂತೆಯೇ ಇಮೇಜ್ ಬೆಳೆಸುವ ಎಲ್ಲವನ್ನು ವ್ಯವಸ್ಥೆಗೊಳಿಸಿದಂತಿತ್ತು ಇಲ್ಲಿ. ಅತ್ತ ರಾಜ್ ಇಮೇಜ್-ಪ್ರಭಾವ ಬಳಸಲು ರಾಜ್ ಬಳಗ ಶಿವರಾಜ್‌ನಿಗೆ ಯತ್ನಿಸುತ್ತಿದ್ದರೆ ಖಾಲಿಯಾಗುತ್ತಿರುವ ಮೇರುನಟನ ಸ್ಥಾನಕ್ಕೆ 'ವಿಷ್ಣು'ವೇ ಸರಿ ಎಂದು ಬಿಂಬಿಸಲಾಗುತ್ತಿದೆ. ಇದಕ್ಕಾಗಿ ಅಹೋರಾತ್ರಿ ಹೆಣಗುವವರ ದೊಡ್ಡ ತಂಡವೇ ಭರಾಟೆಯಿಂದ ಓಡಾಡುತ್ತಿದೆ. ಅಂದಹಾಗೇ ಈ ಸಮಾರಂಭದ ಸಿದ್ಧತೆ ಪರಿಶೀಲಿಸಲು ಬೆಳಿಗ್ಗೆ ಸ್ವತಃ ವಿಷ್ಣುವೇ ಬಂದು ನೋಡಿ-ಓಡಾಡಿದ್ದು ಉಲ್ಲೇಖಿಸಬೇಕಾದ ಅಂಶ.

... ಒಂದು ಸಿನಿಮಾದ ಕ್ಯಾಸೆಟ್ ಬಿಡುಗಡೆಗೂ ಇಷ್ಟೊಂದು ದೊಡ್ಡ ಸಮಾರಂಭವೇ. ಲಕ್ಷ ಲಕ್ಷಗಳು ಖರ್ಚೇ? ಕನ್ನಡದಲ್ಲಿ ಹೀಗೆಲ್ಲಾ ಇಂಥದೊಂದು ಹೊಸ ರಿವಾಜು ಶುರುವಾಗಿದೆ. ಈ ಚಿತ್ರ H_2O ನೀರಿಗೆ ಹೀಗೆ ರಸಾಯನ ಸೂತ್ರದಲ್ಲಿ ಹೇಳೋದು (ನೇರವಾಗಿ ಹೇಳಿದರೆ ಏನಿರುತ್ತೇ ಥ್ರಿಲ್ ಎನ್ನುತ್ತಾರೆ ನಿರ್ದೇಶಕ, ನಟರು) ಚಿತ್ರ ಇನ್ನೂ ಬಿಡುಗಡೆ ಆಗಿಲ್ಲ ಆದರೆ ಕ್ಯಾಸೆಟ್ ಅದ್ದೂರಿಯಾಗಿ ಬಿಡುಗಡೆ ಯಾಯಿತು. ನಟ ಉಪೇಂದ್ರ, ಪ್ರಭುದೇವ್‌ರ ಡ್ಯಾನ್ಸ್, ಸಂಗೀತ, ವಿನೋದಾವಳಿ ಎಲ್ಲವೂ ನಡೆದವು. ಇಂಥದ್ದನ್ನು ಮೊದಲಬಾರಿ ನೇರವಾಗಿ ಉಷೆ ಚಾನಲ್ ಪ್ರಸಾರಿಸಿತು. ಮಧು ಬಂಗಾರಪ್ಪ ನವರ ಆಕಾಶ್ ಆಡಿಯೋಗೆ ಈಗ 10 ವರ್ಷ, ಉಷೆ ಟಿ.ವಿ.ಗೆ ಒಂದು ವರ್ಷ ತುಂಬಿದ್ದರಿಂದ ಈ ಸಮಾರಂಭ ನಡೆಸಲಾಯಿತಂತೆ. ಕ್ಯಾಸೆಟ್‌ನ ಸ್ವಾಮ್ಯತ್ವ ಪಡೆದಿರುವ ಆಕಾಶ್ ಸಂಸ್ಥೆ ಒಂದು ಕೋಟಿ ಹಣವನ್ನು ಎಣಿಸಿದೆಯಂತೆ. ಎಂತಹ ಹಣ ಎಷ್ಟೆಲ್ಲಾ ಹಣ ಸಿನಿಮಾ ಫೀಲ್ಡ್‌ನಲ್ಲಿ ನಿಲ್ಲಬೇಕೆಂದರೆ ಇದೆಲ್ಲಾ ಮಾಮೂಲಿ ಎನ್ನುತ್ತಾರೆ ಅವರು.

ದಾವಣಗೆರೆಯಲ್ಲಿ ಅಂಬರೀಷ್ ಹುಟ್ಟುಹಬ್ಬ ಆಚರಿಸಿಕೊಂಡದ್ದು ವಿಶೇಷ. ಇದು ಅಭಿನಂದಿಸುವ ಸಮಾರಂಭವೆನ್ನುವುದಕ್ಕಿಂತ ರಾಜಕೀಯ ಸಮಾವೇಶ ಎನ್ನುವುದೇ ಸೂಕ್ತ ಎನ್ನುತ್ತಾರೆ ನೋಡಿದವರು. ವೇದಿಕೆ ತುಂಬಾ ಕಾಂಗ್ರೆಸ್ ಪುಢಾರಿಗಳೇ. ಹಿಂದೆಂದೂ ನಡೆಯದಂತಹ ಸಮಾರಂಭ ಆಗಬೇಕು ಎಂದು ಕನಸು ಕಟ್ಟಿದ್ದ ಸಂಘಟಕರ ಉದ್ದೇಶ ಅವರ ಅಸಮರ್ಥತೆ, ಗೊಂದಲ-ಗೋಜಲುಗಳಿಂದ ಅಂದಹಾಗೇ ವ್ಯರ್ಥವಾಯಿತಂತೆ. ಜನರೇನೋ ಭಾರಿ ಸಂಖ್ಯೆಯಲ್ಲಿ ಸೇರಿದ್ದರಂತೆ. ಸಂಘಟಕರ ಅಸ್ತವ್ಯಸ್ತತೆ ಯಿಂದಾಗಿ ಪ್ರೇಕ್ಷಕರಲ್ಲಿ ಅಸಹನೆ ಹೆಚ್ಚಿ ಕಲ್ಲು ಕಾಲೊಳಗಿನವೂ ವೇದಿಕೆಗಳನ್ನು ಪ್ರವೇಶಿಸಿದವಂತೆ. ಅಂಬರೀಷ್ ಕೇಕ್ ಕತ್ತರಿಸು ವಾಗ ಬಂದಿದ್ದ ನಟರಿರಲಿ ಅವರ ಹೆಂಡಂತಿ, ಮಗನೂ ಅಲ್ಲಿಂದ ಜಾಗ ಖಾಲಿ ಮಾಡ ಬೇಕಾಯಿತು. ಈ ನಡುವೆ ವಜ್ರ ಕಿರೀಟ ಇಕ್ಕಿಸಿ ಕೊಂಡ ಥಲಕ್ಕೆ ಅಂಬರೀಶ್ ಮೆಚ್ಚಲೇಬೇಕು. ನಟನಾ ವೃತ್ತಿಯಿಂದ ದೂರ ಸರಿಯುತ್ತಿರುವ ಸಂದರ್ಭದಲ್ಲೇ ಕಲಾಸಾರ್ವ ಭೌಮನೆಂಬ ಬಿರುದು ಬೇರೆ. ಅಲ್ಲದೆ ಅಂಬಿ ಮುಖ್ಯಮಂತ್ರಿಯಾಗಲಿ ಎಂದು ಹಾರೈಕೆ ಗೆಳೆಯ ವಿಷ್ಣು ಮತ್ತು ಸಾ.ರಾ.ಗೋವಿಂದುರವರಿಂದ.

ಈ ವಜ್ರ ಕಿರೀಟದ ಬೆಲೆ ಎಷ್ಟೆಂದಿರಿ ಕೇವಲ 60 ಲಕ್ಷ! ಕಳೆದ ತಿಂಗಳು ಉಪೇಂದ್ರನಿಗೂ ಇಂತಹದ್ದೇ ಸನ್ಮಾನ ನಡೆಯಿತು. ಅದೂ ಅಷ್ಟೇ ಬೆಲೆಯದ್ದೇ. ಅಂದಹಾಗೇ ಕಾಸು ಕೊಟ್ಟವರು ಯಾರ್‍ಯಾರು ಎಂಬುದೇ ಗೂಢ ಪ್ರಶ್ನೆ. ಕೈಯಲ್ಲಿ ಕಾಸು ಹಾಕಿ ಸನ್ಮಾನ ಮಾಡಿಸಿಕೊಳ್ಳೊದೆ, ಪ್ರವೃ ಹೆಚ್ಚುತ್ತಿದೆಯಂತೆ. ಮೇಲಾಗಿ ರಾಜಕಾರಣಿ ನಟರಲ್ಲವೇ ಪ್ರಾಯೋಜಕರಿಗೆ ಕಡಿಮೆಯೇನು ಆದರೆ ಜನರಿಗೆ ಮಾತ್ರ ದುರ್ಗತಿ ತಪ್ಪಿದ್ದಲ್ಲ.



ಒಟ್ಟಾರೆ ಈ ಸಮಾರಂಭಗಳು ಜನರನ್ನು ವಿಶೇಷವಾಗಿ ಯುವಜನರನ್ನು ಅರಳುಮರಳು ಮಾಡುವ, ಬದುಕಿನ ಕ್ರೂರ ವಾಸ್ತವಗಳತ್ತ ನೋವು, ಸಂಕಟಗಳತ್ತ ಕಿಂಚಿತ್ತೂ ಚಿಂತಿಸದಂತೆ ಮಾಡುವಲ್ಲಿ ಸದಾ ನಿರತವಾಗಿವೆ.

PRBDECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : S.Y.GURUSHANTH